ಪುಸ್ತಕ ಪ್ರಪಂಚ

ನವಂಬರ್-೧೯೯೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೭ ಸಂಚಿಕೆ ೨

ನವೆಂಬರ್ ೧೯೯೬

ರಕ್ಷಾಪುಟ-೪ರ ಚಿತ್ರ :
ಆಲೂರು ವೆಂಕಟರಾವ್

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಕನ್ನಡದ ಗತಿ

ಕನ್ನಡದ ಪ್ರಸಿದ್ಧ ಕವಿ, ವಿದ್ವಾಂಸ ಮತ್ತು ಪತ್ರಿಕಾ ಸಂಪಾದಕ ಕಡೆಂಗೋಡ್ಲು ಶಂಕರಭಟ್ಟರು (೧೯೦೪–೬೮) ೧೯೩೭ರಿಂದ ೧೯೫೩ರ ತನಕ "ರಾಷ್ಟ್ರಬಂಧು" ವಾರ ಪತ್ರಿಕೆಯಲ್ಲಿ ಬರೆದ ಸಂಪಾದಕೀಯಗಳ ಪೈಕಿ ಕೆಲವನ್ನು "ಕಡೆಂಗೋಡ್ಲು ಅಗ್ರ ಲೇಖನಗಳು" ಎಂಬ ಹೆಸರಿನಲ್ಲಿ ಕರ್ನಾಟಕ ಸಂಘ, ಪುತ್ತೂರು ಪ್ರಕಟಿಸಿದೆ (೧೯೯೬). ಪ್ರಸಿದ್ಧ ವಕೀಲರೂ ಯಕ್ಷಗಾನ ಅರ್ಥಧಾರಿಗಳೂ ಆಗಿರುವ ಮುಳಿಯ ಮಹಾಬಲ ಭಟ್ಟರು (ಪಂಡಿತ ಮುಳಿಯ ತಿಮ್ಮಪ್ಪಯ್ಯನವರ ಪುತ್ರ) ಇದರ ಸಂಪಾದಕರು. ಈ ಮೇಲಿನ 'ಕನ್ನಡದ ಗತಿ' ಶೀರ್ಷಿಕೆಯಲ್ಲಿ ೧೭–೪–೧೯೩೯ರಂದು ಕಡೆಂಗೋಡ್ಲು ಅವರು ಬರೆದಿರುವ ಸಂಪಾದಕೀಯವನ್ನು ಇಲ್ಲಿ ಪೂರ್ತಿ ಉದ್ಧರಿಸಿದೆ. ೧೯೩೯ರ ತರುವಾಯ ಭಾರತಕ್ಕೆ ಸ್ವಾತಂತ್ರ್ಯ ಬಂದಿದೆ (೧೯೪೭), ಕರ್ನಾಟಕ ಏಕೀಕರಣವಾಗಿದೆ (೧೯೫೬), ಕನ್ನಡ ನಾಡಿನಲ್ಲಿ ಕನ್ನಡವೇ ಸರ್ವತ್ರ ಸಂವಹನ ಮಾಧ್ಯಮವಾಗಬೇಕೆಂಬ ಸರ್ಕಾರೀ ಆದೇಶಗಳು ಪ್ರಕಟವಾಗಿವೆ, ಸಭೆಗಳೂ ಗೋಷ್ಠಿಗಳೂ ಕಾಲದಿಂದ ಕಾಲಕ್ಕೆ ಜರಗಿ ಘೋರ ಠರಾವುಗಳು ಅರ್ಭಟೆ ಸಹಿತ ಮಂಜೂರಾಗಿವೆ, ಆಗುತ್ತಿವೆ. ಆದರೆ ಕನ್ನಡದ ಗತಿ ಇಂದು (೧೯೯೬) ಗುಣಾತ್ಮಕವಾಗಿ ಹೇಳುವುದಾದರೆ ಅವನತಿಸಿದೆ, ಅಭಿಮಾನರಾಹಿತ್ಯದಿಂದ ಸೊರಗಿದೆ. ಇನ್ನೊಮ್ಮೆ ಹುಟ್ಟಿ ಬಾ ಸರ್ವಜ್ಞ ಎನ್ನುವಂತಾಗಿದೆ.

ಜಿ. ಟಿ. ನಾರಾಯಣರಾವ್

ದಕ್ಷಿಣ ಕನ್ನಡದ ಶಿಕ್ಷಣಭಾಷೆ ಯಾವುದು ? ಎಂಬುದನ್ನು ಅತಿ ಪ್ರಯಾಸದಿಂದ ಹುಡುಕಬೇಕಾದ ಸ್ಥಿತಿಯೊದಗಿದೆ, ಎಂದು ಕೇಳುತ್ತೇವೆ. ವಿದ್ಯಾಮಂತ್ರಿಗಳಾಗಿದ್ದ ಡಾ॥ ಸುಬ್ಬರಾಯನರು ಮಂಗಳೂರಿಗೆ ಬಂದಿದ್ದಾಗ ಒಂದು ಸಂದರ್ಭದಲ್ಲಿ ಹೀಗೆಂದಿದ್ದರು : "ಸ್ಥಳೀಯ ಭಾಷೆಯೇ ಶಿಕ್ಷಣ ಭಾಷೆಯಾಗಬೇಕು. ದಕ್ಷಿಣ ಕನ್ನಡದ ಎಲ್ಲ ಶಾಲೆಗಳಲ್ಲಿಯೂ ಕನ್ನಡವನ್ನು ಶಿಕ್ಷಣ ಭಾಷೆಯಾಗಿ ಸ್ವೀಕರಿಸಬೇಕು. ಈ ನಿಯಮಕ್ಕೆ ತಾತ್ಕಾಲಿಕವಾಗಿ ಅಪವಾದಗಳನ್ನು ತರಬಹುದಾಗಿದ್ದರೂ ಇಂದಲ್ಲದಿದ್ದರೆ ನಾಳೆ ಕನ್ನಡವನ್ನು ಒಪ್ಪಿಕೊಳ್ಳಲು ಸಕಲರೂ ಸಿದ್ಧರಾಗಿರಬೇಕು." ಈ ಎಚ್ಚರಿಕೆಯ ಮಾತು ಸಕಾಲದಲ್ಲಿಯೇ ಬಂದಿತ್ತು. ಮತ್ತೆ ಶ್ರೀ ವಾರ್ಕಿಯವರ ಆಡಳಿತದಲ್ಲಿ, ಕನ್ನಡವನ್ನು ವಿರೋಧಿಸುವವರ ಸಂಖ್ಯೆ ಹೆಚ್ಚಾದಂತೆ ತೋರುವುದು. ಅಧಿಕಾರಿಗಳ ಕಡೆಗೆ ಬಿನ್ನವತ್ತಳೆಗಳು ಹೋದುವು ; ದೂರುಗಳು ಹೋದುವು ; ವಿದ್ಯಾಧಿಕಾರಿಗಳು ಜಿಲ್ಲೆಗೆ ಸಂದರ್ಶನವಿತ್ತರು. ವಿದ್ಯಾಮಂತ್ರಿಗಳೇ ಮೊನ್ನೆ ಆಗಮಿಸಿ ಮುಖ್ಯಾಧ್ಯಾಪಕರ ಸಭೆಯನ್ನು ಕರೆದು ಅಭಿಪ್ರಾಯಗಳನ್ನು ಕೇಳಿದರು.

ಕನ್ನಡವನ್ನು ಶಿಕ್ಷಣ ಭಾಷೆಯಾಗಿ ಸ್ವೀಕರಿಸುವ ವಿಷಯದಲ್ಲಿ ಹಲವರ ಪ್ರತಿಕೂಲ ಮತಗಳೇ ಪ್ರಕಟವಾದುವೆಂದೂ ವಿದ್ಯಾಮಂತ್ರಿಗಳು ಕನ್ನಡ ನುಡಿಯ ವಿರೋಧಕರ ಮತಕ್ಕೆ ಕಿವಿಗೊಡುವ ಸ್ಥಿತಿಯಲ್ಲಿದ್ದರೆಂದೂ ತಿಳಿದು ಬರುತ್ತದೆ. "ವಾತಾವರಣವು ಅನುಕೂಲವಾಗುವವರೆಗೆ ಕನ್ನಡ ನುಡಿಯನ್ನು ಶಿಕ್ಷಣ ಭಾಷೆಯನ್ನಾಗಿ ಸ್ವೀಕರಿಸದಿರುವುದಕ್ಕೆ ಶಾಶ್ವತವಾದ ಒಪ್ಪಿಗೆಯನ್ನು ಕೊಡಬೇಕಾದೀತು" ಎಂಬ ಪರಸ್ಪರ ವಿರುದ್ಧವಾದ ಅಭಿಪ್ರಾಯಗಳು ಮಂತ್ರಿವರ್ಯರ ಮುಖದಿಂದ ಉರುಳಿದುವಂತೆ.

ಪರಿಸ್ಥಿತಿಯು ತನ್ನಿಂದ ತಾನೇ ಅನುಕೂಲಿಸುವುದು ಹೇಗೆ? ದಕ್ಷಿಣ ಕನ್ನಡದಲ್ಲಿ ಸಕಲರಿಗೂ ಕನ್ನಡವು ಮನೆಮಾತಲ್ಲ. ಇಲ್ಲಿಯ ಜನರಲ್ಲಿ ಬಹು ಜನರು ತುಳುವರು. ಅವರು ಕನ್ನಡದ ವಿರೋಧಿಗಳಲ್ಲ! ಕೊಂಕಣಿ ಮಾತಾಡುವವರ ಅಲ್ಪ ಸಂಖ್ಯೆ ಇದೆ. ಇವರಲ್ಲಿ ಕನ್ನಡದ ವಿಷಯದಲ್ಲಿ ಉತ್ಸಾಹ ತೋರಿಸುವವರಿದ್ದಾರೆ; ಅಲಕ್ಷ್ಯ ತೋರಿಸುವವರಿದ್ದಾರೆ; ವಿರೋಧವೊಡ್ಡುವವರಿದ್ದಾರೆ. ಹೀಗಿದ್ದರೂ ವ್ಯವಹಾರ ಭಾಷೆಯು—ಸ್ಥಳೀಯ ಭಾಷೆಯು ಕನ್ನಡವಾಗಿರುವುದರಿಂದ, ದೇಶಭಾಷೆಗಳಲ್ಲಿಯೇ ಶಿಕ್ಷಣವಾಗಬೇಕೆಂಬ ಸರಕಾರದ ನಿಯಮವನ್ನಿಲ್ಲಿ ಸಮನ್ವಯಿಸುವುದಿದ್ದರೆ, ಕನ್ನಡವೇ ದೇಶಭಾಷಾ ನೆಲೆಯಲ್ಲಿರಬೇಕಾಗುವುದೆಂಬುದನ್ನೂ ಅಲ್ಲಗಳೆಯಲು ಯಾರಿಗೂ ಸಾಧ್ಯವಿಲ್ಲ. ಆದುದರಿಂದ, ಕನ್ನಡಿಗರಲ್ಲದವರಿಗೆ, ಅಲ್ಪಕಾಲದ ವಿಮೋಚನೆ (ಎಗ್ಸೆಂಪ್ಶನ್)ಯನ್ನು ಕೊಟ್ಟು ಆ ಕಾಲವು ಅತೀತವಾದೊಡನೆ, ಸಾರ್ವತ್ರಿಕವಾಗಿ ಕನ್ನಡವನ್ನೆ ಶಿಕ್ಷಣ ಭಾಷೆಯಾಗಿ ನೆಲೆನಿಲ್ಲಿಸುವುದು ಅಧಿಕಾರಿಗಳ ಕರ್ತವ್ಯವಾಗಿದೆ. ಅವರು ಹಾಗೆ ಮಾಡಬಹುದೆಂದು ಭಾವಿಸಿದ್ದೆವು. ಅದರ ಬದಲಾಗಿ, ಕನ್ನಡಿಗರಲ್ಲದವರಿಗೆ ಕನ್ನಡದ ಒತ್ತಾಯದಿಂದಾಗ ಬಹುದಾದ ಕಷ್ಟಗಳು ವಿದ್ಯಾಮಂತ್ರಿಗಳಿಗೆ ತಿಳಿದುಬಂದುವಂತೆ. ಅಲ್ಲದೆ, ಕೊಂಕಣಿ ಮಾತಾಡುವ ಕ್ರೈಸ್ತ ಬಂಧುಗಳಿಗೆ ಇಂಗ್ಲಿಷಿಗಿಂತಲೂ, ಕನ್ನಡವು ಕಠಿಣ ಭಾಷೆಯೆಂದೂ ಮಂತ್ರಿಗಳಿಗೆ ಅವಗತವಾಯಿತಂತೆ. ಇವರಲ್ಲಿ ಅನೇಕರಿಗೆ ಇಂಗ್ಲಿಷ್ ಮನೆಮಾತೂ ಆಗಿರುವುದಂತೆ. ಅಧಿಕಾರಿಗಳ ಮನೋವೃತ್ತಿ ಹೀಗಿರುತ್ತಾ ಪರಿಸ್ಥಿತಿಯು ಸುಧಾರಿಸುವುದು ಹೇಗೆಂದು ತಿಳಿಯುವುದಿಲ್ಲ. ಇತರ ಭಾಷೆಗಳನ್ನಾಡುವವರೆಲ್ಲ ಕನ್ನಡವನ್ನೆ ಮನೆಯೊಳಗೂ ಆಡುವ ಸಂಭವವಿಲ್ಲ. ಇಂಥವರಿಗೆ ನಿಯಮದ ಅಪವಾದದ ಪ್ರಯೋಜನವನ್ನು "ಪರಿಸ್ಥಿತಿ ಬದಲಾಗುವವರೆಗೆ ಶಾಶ್ವತವಾಗಿ ಕೊಡುವುದು" ಎಂದರೆ ಕನ್ನಡಕ್ಕೆ ತಿಲೋದಕವನ್ನು ಕೊಡುವುದೆಂದೇ ಅರ್ಥ!

ಈ ವರ್ಷ ಕೆಲವು ಶಾಲೆಗಳಲ್ಲಿ ಕನ್ನಡವನ್ನು ಶಿಕ್ಷಣ ಭಾಷೆಯಾಗಿ ಮಾಡುವುದನ್ನು ಸಮ್ಮತಿಸುವ ಸರಕಾರದ ಆಜ್ಞೆ ಹೊರಟಿದೆ. ಆದರೆ ಈ ಶಾಲೆಗಳ ಪಟ್ಟಿ

ಯಲ್ಲಿ ಇಲ್ಲಿಯ ಸರಕಾರಿ ಶಾಲೆಯ ಹೆಸರು ಕಾಣುವುದಿಲ್ಲ. ಖಾಸಗಿ ಸಂಸ್ಥೆಗಳವರಿಗೆ ಕೇಳಿದ ಕ್ಷಣದಲ್ಲಿಯೇ ವಿಮೋಚನೆ ದೊರೆಯುತ್ತಿರುವುದು. ವಿದ್ಯಾಂಗದ ಅಧಿಕಾರಿಗಳಿಗೆ, ತಮ್ಮ ತತ್ವವನ್ನು ಆಚರಣೆಗೆ ತರುವ ಕುತೂಹಲವಿರುತ್ತಿದ್ದರೆ, ಸರಕಾರಿ ಶಾಲೆಯಲ್ಲಿಯೇ ಇದಕ್ಕೆ ಶ್ರೀಕಾರವನ್ನು ಬರೆಯಬೇಕಾಗಿದ್ದಿತು. ಅದನ್ನವರು ಮಾಡಿಲ್ಲ. ಖಾಸಗಿ ಸಂಸ್ಥೆಗಳಲ್ಲಿ ಕ್ರೈಸ್ತ ಸಂಘಗಳಿಂದ ನಡೆಯಿಸಲ್ಪಡುವ ಶಾಲೆಗಳ ಸಂಖ್ಯೆಯೇ ಅಧಿಕವಾದುದರಿಂದಲೂ, ಅವುಗಳ ಅಧಿಕಾರಿಗಳಿಗೆ ಕನ್ನಡದಲ್ಲಿ ಅಕ್ಕರೆಯಿಲ್ಲವೆಂಬಂತೆ ತೋರಿಬರುವುದರಿಂದಲೂ, ಆ ಶಾಲೆಯಲ್ಲಿ ಪರಿಸ್ಥಿತಿ ವ್ಯತ್ಯಾಸವಾಗುವ ಹಾಗಿಲ್ಲವೆಂದೂ, ಅವುಗಳಿಗೆ ದೊರೆತ ವಿಮೋಚನೆಯು ಶಾಶ್ವತವಾದುದೆಂದೂ ಭಾವಿಸಿದರೆ ತಪ್ಪಾಗದು. ಉಳಿದ ಒಂದೆರಡು ಖಾಸಗಿ ಶಾಲೆಗಳು ಈ ಕುರಿತು ಅನುಕೂಲಾಭಿಪ್ರಾಯಗಳನ್ನು ಪ್ರಕಟಿಸಿದ್ದರೂ ವಾತಾವರಣ ಪ್ರಭಾವವು ಅವುಗಳನ್ನೂ ಕನ್ನಡದ ಪ್ರತಿಕೂಲ ರಂಗಕ್ಕೆ ಒಯ್ಯಬಹುದೆಂಬ ಭೀತಿ ನಮ್ಮಲ್ಲಿದೆ. ಮುಖ್ಯವಾಗಿ, ದೇಶಭಾಷೆಯ ಸ್ವೀಕಾರಕ್ಕೆ ಅನುಕೂಲವಾದ ಕಾರಣಗಳನ್ನು ಹುಡುಕುವುದರ ಬದಲಾಗಿ ಪ್ರತಿಕೂಲ ಪ್ರಸಂಗಗಳ ವಿವರಣೆಗಳನ್ನು ಕೇಳುವುದಕ್ಕೂ, ಹುಡುಕುವುದಕ್ಕೂ ವಿದ್ಯಾಮಂತ್ರಿಗಳು ಹೆಚ್ಚಿನ ಆದರವನ್ನು ವಹಿಸಿರುವರೆಂಬುದು ವಿಷಾದಕರ. ಪರಿಸ್ಥಿತಿಯು ಅನುಕೂಲವಾಗುವ ಮುಂಚೆ ವಿದ್ಯಾಧಿಕಾರಿಗಳ ಮನೋಪ್ರವೃತ್ತಿ ಅನುಕೂಲವಾಗಬೇಕಾಗಿದೆ. ಅದಾಗುವುದು ಹೇಗೆ?

ಕನ್ನಡಿಗರೇ ನಾವು ನಮ್ಮ ಆಲಸ್ಯವನ್ನು ತಳ್ಳೋಣ; ಭ್ರಾಮಕ ಕಲ್ಪನೆಗಳನ್ನು ಬಿಟ್ಟು ಬಿಡೋಣ; ಮತ್ತು ಮುಂದಿನ ಮಾರ್ಗಕ್ಕೆ ಹತ್ತೋಣ. ಪಾತಾಳಕ್ಕಿಳಿದ ನಮ್ಮ ಕರ್ನಾಟಕ ಆರ್ಯ ಸಂಸ್ಕೃತಿಯನ್ನು ನಾವು ಉದ್ಧರಿಸದೆ ಇನ್ನಾರು ಉದ್ಧರಿಸುವರು.

—ಆಲೂರು ವೆಂಕಟರಾವ್

ಕನ್ನಡ ನಾಡು ನುಡಿ ಮತ್ತು ಸಂಸ್ಕೃತಿ

ಚಂದ್ರಶೇಖರಾರಾಧ್ಯ

ಈ ನವೆಂಬರ್ ೧ರಂದು ೪೧ನೆಯ ಕನ್ನಡ ರಾಜ್ಯೋತ್ಸವ. ಅಂದು ಎಲ್ಲ ಕನ್ನಡಿಗರೂ ತಮ್ಮ ಕರ್ತವ್ಯ ಪ್ರಜ್ಞೆಯತ್ತ ಜಾಗೃತರಾಗುವ ದಿನ. ಕನ್ನಡ ನಾಡು ನುಡಿ ಮತ್ತು ಸಂಸ್ಕೃತಿಯನ್ನು ನೆನೆದು, ಮುಂದಿನ ಗುರಿಯತ್ತ ಸಾಗ ಬೇಕಾದ ದಿನ. ಕನ್ನಡಿಗರು ತಮ್ಮ ನೆಲ, ಜಲ, ಭಾಷೆ ಎಲ್ಲದರಲ್ಲೂ ಉದಾರಿ ಗಳು. ಅತಿಯಾದ ಔದಾರ್ಯ ನಿಜಕ್ಕೂ ದೌರ್ಬಲ್ಯ ಎಂಬುದನ್ನು ಅರಿಯದ 'ಸ್ಥಿತಪ್ರಜ್ಞರು.'

ಭಾಷೆ ಕೇವಲ ಸಂವಹನ ಮಾಧ್ಯಮವಷ್ಟೇ ಅಲ್ಲ. ಅದು ಆಯಾ ಜನಾಂಗದ ಸಂಸ್ಕೃತಿಯ ಸಂಕೇತವೂ ಹೌದು. ಇದನ್ನು ಅರಿತು ತಮ್ಮ ಭಾಷೆಯನ್ನು ಪರಿ ಣಾಮಕಾರಿಯಾಗಿ ಬಳಸಿ, ಬೆಳೆಸುವುದು ಆಯಾ ಜನಾಂಗದ ಕರ್ತವ್ಯ. ಇದರಿಂದ ವಿಮುಖರಾಗುವುದು ಹೊಣೆಗೇಡಿತನ. ಇದು ಕನ್ನಡಿಗರಿಗೂ ಅನ್ವಯವಾಗುವ ವಿಷಯ. ಈ ಕರ್ತವ್ಯ ಪ್ರಜ್ಞೆಯಿಂದ ವಿಮುಖರಾಗದಿರೋಣ. ಮನಸ್ಸಿದ್ದಲ್ಲಿ ಮಾರ್ಗ ಇದೆ. ಇದು ೪೧ನೆಯ ಕನ್ನಡ ರಾಜ್ಯೋತ್ಸವ ದಿನದಂದು ಎಲ್ಲ ಕನ್ನಡಿ ಗರೂ ಕೈಗೊಳ್ಳುವ ದೀಕ್ಷೆಯಾಗಲಿ.

ಭಾರತ ಸಂಸ್ಕೃತಿಯಲ್ಲಿ ಕರ್ನಾಟಕ ಮಹತ್ವದ ಸ್ಥಾನ ಕಾಯ್ದಿರಿಸಿಕೊಂಡಿದೆ. ಸಾಮ್ರಾಜ್ಯಗಳ ನಿರ್ಮಾಣ ಮತ್ತು ಅವು ಗಳ ಆಡಳಿತ ವ್ಯವಸ್ಥೆ, ಧಾರ್ಮಿಕ ದರ್ಶನದ ದಿವ್ಯ ದೃಷ್ಟಿ. ಸಾಹಿತ್ಯ ಸೃಷ್ಟಿಯ ರಸ ಮಾರ್ಗ. ಸಂಗೀತ, ನೃತ್ಯ, ಶಿಲ್ಪ ಹಾಗೂ ಚಿತ್ರಕಲೆಗಳಲ್ಲಿ ಸಾಂಸ್ಕೃತಿಕ ಅಭಿವ್ಯಕ್ತಿ. ಹೀಗೆ ಜೀವನದ ಎಲ್ಲ ರಂಗಗಳಲ್ಲಿಯೂ ಕರ್ನಾಟಕದ ಸಾಧನೆಯು ಸಾರ್ಥಕತೆ ಯನ್ನು ಪಡೆದಿದೆ. ಭಾರತೀಯ ಸಂಸ್ಕೃತಿಯ ಪೋಷಣೆ ಹಾಗೂ ಸರ್ವಾಂಗೀಣ ಬೆಳ ವಣಿಗೆಗೆ ಕರ್ನಾಟಕ ತನ್ನದೇ ಆದ ಉಜ್ವಲ ಮತ್ತು ವಿಶಿಷ್ಟ ಪರಂಪರೆಯ ಕಾಣಿಕೆ ಯಿತ್ತು ಬೆಳೆಸಿಕೊಂಡು ಬಂದಿದೆ.

ದಕ್ಷಿಣ ಭಾರತದ ರಾಜ್ಯಗಳಲ್ಲಿ 'ಕರ್ನಾಟಕ' ಒಂದು. ಇದು ದಕ್ಖನ್ ಪ್ರಸ್ತ ಭೂಮಿಯ ನೈಋತ್ಯಕ್ಕಿದ್ದು, ಉತ್ತರ ಹಾಗೂ ವಾಯುವ್ಯ ದಿಕ್ಕಿನಲ್ಲಿ ಮಹಾರಾಷ್ಟ್ರ, ಪೂರ್ವಕ್ಕೆ ಆಂಧ್ರಪ್ರದೇಶ, ದಕ್ಷಿಣ ಮತ್ತು ಆಗ್ನೇಯಕ್ಕೆ ತಮಿಳು ನಾಡು, ನೈಋತ್ಯದಲ್ಲಿ ಕೇರಳ ರಾಜ್ಯಗಳಿವೆ.

ಸ್ವಾತಂತ್ರ್ಯ ಪೂರ್ವದಲ್ಲಿ ೨೦ ಆಡಳಿತ ವ್ಯವಸ್ಥೆಗಳಲ್ಲಿ ಹಂಚಿಹೋಗಿದ್ದ ಕರ್ನಾಟಕವು ೧೯೪೭ರಲ್ಲಿ ಐದು ಆಡಳಿತಗಳಿಗೆ ಒಳಪಟ್ಟಿತು. (ಮದ್ರಾಸು, ಮುಂಬೈ ಪ್ರಾಂತಗಳು. ಕೊಡಗು, ಹೈದರಾಬಾದ್ ಮತ್ತು ಮೈಸೂರು ಸಂಸ್ಥಾನ). ೧೯೫೬ರಲ್ಲಿ ಈ ಐದೂ ಪ್ರಾಂತಗಳು ಒಂದಾಯಿತು. ೧೯೭೩ರಲ್ಲಿ 'ಕರ್ನಾಟಕ' ನಾಮಕರಣವಾಯಿತು.

ಕನ್ನಡ ಪರಂಪರೆ

ವ್ಯಾಸಭಾರತದಲ್ಲಿ ಕರ್ನಾಟಕದ ಉಲ್ಲೇಖವಾಗಿರುವುದು ಗಮನಾರ್ಹ ಅಂಶ. ಅಂದಿನ ಮೌರ್ಯರ ಅಶೋಕನ ಆಳ್ವಿಕೆಗೆ ಕರ್ನಾಟಕದ ಬಹುಭಾಗ ಸೇರಿತ್ತು ಎಂಬುದಕ್ಕೆ ಕರ್ನಾಟಕದಲ್ಲಿ ದೊರೆತಿರುವ ಶಾಸನಗಳು ದಾಖಲೆಗಳಾಗಿವೆ. ಮೌರ್ಯರ ನಂತರ ಶಾತವಾಹನರು, ಕೆಲವು ಕಾಲ ಕಂಚಿಯ ಪಲ್ಲವರು ಕರ್ನಾಟಕದ ಕೆಲವು ಭಾಗಗಳನ್ನು ಆಳಿದರು.

ಕ್ರಿ.ಶ. ೩೨೫ ರಿಂದ ಸುಮಾರು ಎರಡು ನೂರು ವರ್ಷಗಳ ಕಾಲ ಕದಂಬರು ಉತ್ತರ ಕನ್ನಡದ ಬನವಾಸಿಯಿಂದ ಸ್ವತಂತ್ರವಾಗಿ ರಾಜ್ಯಭಾರ ಮಾಡಿದರು. ಇವರು ಕರ್ನಾಟಕವನ್ನು ಆಳಿದ ಮೊದಲ ದೊರೆಗಳೂ ಹೌದು. ಕನ್ನಡಿಗರ ಸ್ವಾಭಿಮಾನ ಕಾಯ್ದುಕೊಳ್ಳಲು ರಾಜ್ಯ ಒಂದು ಉದಯವಾದುದು ಸ್ತುತ್ಯರ್ಹ. ಈ ಅವಧಿಯಲ್ಲಿಯೇ ಮೈಸೂರು ಜಿಲ್ಲೆಯ ತಲಕಾಡಿನಿಂದ ಗಂಗರು ಆಳುತ್ತಿದ್ದರು. ಇವರ ಮೊದಲ ರಾಜಧಾನಿ ಕೋಲಾರ. 'ಪ್ರಜೆಗಳ ಕ್ಷೇಮ ಒಂದೇ ತಮ್ಮ ಅಧಿಕಾರದಿಂದ ಪಡೆಯುವ ಪ್ರಯೋಜನ' ಎಂದು ಗಂಗರ ಶಾಸನಗಳಲ್ಲಿ ಹೇಳಿದೆ.

ಕ್ರಿ. ಶ. ೫೦೦ ರಿಂದ ೭೫೦ ರ ತನಕ ಬಿಜಾಪುರ ಜಿಲ್ಲೆಯ ಬಾದಾಮಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದ ಚಾಲುಕ್ಯರು ಅಖಿಲ ಭಾರತ ಕೀರ್ತಿಯನ್ನು ಗಳಿಸಿದ ಕನ್ನಡ ಸಾರ್ವಭೌಮರು. ಬಾದಾಮಿ ಚಾಲುಕ್ಯರ ಸಾಮ್ರಾಜ್ಯವು ಕರ್ನಾಟಕವನ್ನಲ್ಲದೆ, ಆಂಧ್ರ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶಗಳನ್ನೂ ಒಳಗೊಂಡಿತ್ತು. ಬಾದಾಮಿ, ಐಹೊಳೆ, ಪಟ್ಟದಕಲ್ಲು ದಕ್ಷಿಣ ಭಾರತದ ಶಿಲ್ಪಕಲೆಯ ತವರು.

ಕ್ರಿ. ಶ. ೭೫೦ ರಿಂದ ೯೮೦ ರ ತನಕ ರಾಷ್ಟ್ರಕೂಟರು ಗುಲ್ಬರ್ಗ ಜಿಲ್ಲೆಯ ಮಳಖೇಡದಿಂದ ಆಳಿದರು. ರಾಷ್ಟ್ರಕೂಟ ದೊರೆಗಳಲ್ಲಿ ಧ್ರುವ ಮತ್ತು ಮೂರನೆಯ ಗೋವಿಂದ ಬಹಳ ಸಮರ್ಥರಾದವರು. ಗೋವಿಂದನ ಸೈನ್ಯವು ಸಿಂಹಳದಿಂದ ಹಿಮಾಲಯದವರೆಗೆ, ಗುಜರಾತಿನಿಂದ ಬಂಗಾಳದವರೆಗೆ ಇದ್ದ ಅಖಂಡ ಭಾರತವನ್ನು ಗೆದ್ದಿತು. ಇವನ ಮಗನೇ ಅಮೋಘವರ್ಷ ನೃಪತುಂಗ. ಇವನ ಕಾಲದಲ್ಲಿ ರಚನೆಯಾದ 'ಕವಿರಾಜಮಾರ್ಗ' ಕನ್ನಡದ ಮೊದಲ ಗ್ರಂಥ.

ಕ್ರಿ.ಶ. ೯೭೦ ರಿಂದ ಬೀದರ್ ಜಿಲ್ಲೆಯ ಕಲ್ಯಾಣದಿಂದ ಆಳಿದ ಚಾಲುಕ್ಯರು ಕಲ್ಯಾಣ ಚಾಲುಕ್ಯರೆಂದೇ ಪ್ರಸಿದ್ಧರಾದವರು. ಈ ಕಾಲದಲ್ಲಿ (ಕ್ರಿ.ಶ. ೧೧೬೦ರ ನಂತರ) ಕಲ್ಯಾಣದಲ್ಲಿ ನಡೆದ ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಕ್ರಾಂತಿಯು ಹೊಸ ಶಕವನ್ನು ಪ್ರವರ್ತಿಸಿತು.

ಕ್ರಿ.ಶ. ೧೨–೧೩ನೆಯ ಶತಮಾನಗಳಲ್ಲಿ ದಕ್ಷಿಣ ಕರ್ನಾಟಕ ಮತ್ತು ಉತ್ತರ

ಕರ್ನಾಟಕವನ್ನು ಆಳಿದ ದೊರೆಗಳು ಹೊಯ್ಸಳರು ಮತ್ತು ದೇವಗಿರಿ ಯಾದವರು. ಹೊಯ್ಸಳರ ವಿಷ್ಣುವರ್ಧನನು ತಲಕಾಡು ಪ್ರದೇಶದಿಂದ ಚೋಳರನ್ನು ಕಾಲ್ತೆಗೆಯುವಂತೆ ಮಾಡಿದುದಲ್ಲದೆ, ಕಂಚಿಯನ್ನು ವಶಪಡಿಸಿಕೊಂಡು 'ಕಂಚಿಗೊಂಡ' ಎಂಬ ಬಿರುದನ್ನೂ ಸಂಪಾದಿಸಿದ. ತಮಿಳುನಾಡಿನ ಶೈವ ದೊರೆಗಳ ಕಾಟ ತಾಳಲಾರದೆ ಬಂದ ಶ್ರೀ ರಾಮಾನುಜರಿಗೆ ಆಶ್ರಯ ನೀಡಿದ. ವಿಷ್ಣುವರ್ಧನನ ಪಟ್ಟದರಾಣಿ ಶಾಂತಲೆಯು ನಾಟ್ಯ ರಾಣಿಯೂ, ಶ್ರೇಷ್ಠ ಗಾಯಕಿಯೂ ಆಗಿದ್ದು ರಾಜಕೀಯದಲ್ಲಿ ಚತುರಮತಿಯೂ ಆಗಿದ್ದಳು.

ಇಂದು ಔರಂಗಾಬಾದ್ ಮಹಾರಾಷ್ಟ್ರದಲ್ಲಿದ್ದರೂ ಆ ಜಿಲ್ಲೆಯ ದೇವಗಿರಿಯಿಂದ (ಇಂದಿನ ದೌಲತಾಬಾದ್) ಆಳಿದ ಯಾದವರು ಕನ್ನಡಿಗರಾಗಿದ್ದರು. ಆ ಪ್ರದೇಶವೆಲ್ಲಾ ಕನ್ನಡನಾಡಾಗಿತ್ತು. ಹೊಯ್ಸಳರು ಕಲಾರಾಧಕರು. ಅವರ ದೇವಾಲಯಗಳ ಶೈಲಿ ಹೊಯ್ಸಳ ಶೈಲಿ ಎಂದೇ ಪ್ರಸಿದ್ಧವಾಗಿವೆ. ಅವರು ಕಟ್ಟಿಸಿದ ಬೇಲೂರು ಹಳೇಬೀಡು, ಸೋಮನಾಥ ದೇವಾಲಯಗಳ ಶಿಲ್ಪಕಲಾ ಸೌಂದರ್ಯ ಅದ್ಭುತ.

ಕ್ರಿ. ಶ. ೧೩೩೬ ರಿಂದ ೧೫೬೫ ರ ತನಕ ಹಂಪೆಯನ್ನು ರಾಜಧಾನಿ ಮಾಡಿಕೊಂಡು ವಿಜಯನಗರ ಸಾಮ್ರಾಜ್ಯ ಮೆರೆಯಿತು. ಸಮಗ್ರ ಕರ್ನಾಟಕವಲ್ಲದೆ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರದ ಭಾಗಗಳನ್ನೂ ಅದು ಒಳಗೊಂಡಿತ್ತು. ವಿಜಯನಗರದ ದೊರೆಗಳು ತಮ್ಮ ಸಹಿಯನ್ನು 'ಶ್ರೀ ವಿರೂಪಾಕ್ಷ' ಎಂದು ಕನ್ನಡ ಲಿಪಿಯಲ್ಲಿ ಹಾಕಿಕೊಂಡಿದ್ದಾರೆ. ಕರ್ನಾಟಕ ರತ್ನಸಿಂಹಾಸನಾಧೀಶರಾದ ವಿಜಯನಗರ ದೊರೆಗಳು ಕನ್ನಡಿಗರ ಹೃದಯ ಸಿಂಹಾಸನದಲ್ಲಿ ವಿರಾಜಮಾನರಾಗಿದ್ದಾರೆ.

ಅತ್ಯಂತ ವೈಭವದ ದಿನಗಳನ್ನು ಕಂಡ ವಿಜಯನಗರ ಸಾಮ್ರಾಜ್ಯ ಕಾಲಾನುಕ್ರಮದಲ್ಲಿ ಪತನಗೊಂಡಾಗ ಕನ್ನಡಿಗರ ಸ್ವಾಭಿಮಾನದ ಪತನವೂ ಪ್ರಾರಂಭವಾಯಿತು. ವೈಭವ, ಸಾಹಸದ ಪ್ರವೃತ್ತಿಯು ಕಣ್ಮರೆಯಾಗಿ, ಕನ್ನಡಿಗರು ಹರಿದು ಚೂರಾದರು. ಅನ್ಯ ಭಾಷಿಕರು ಕರ್ನಾಟಕದ ಒಳಗೆ ಅನಾಯಾಸವಾಗಿ ಪ್ರವೇಶಿಸಿದರು. ಈ ಕಾರಣದಿಂದಾಗಿ ಕನ್ನಡಿಗರು ಗಡಿಪ್ರದೇಶಗಳಲ್ಲಿ ಅನ್ಯರ ಭಾಷೆಯನ್ನೇ ಕಲಿತರು. ತಮ್ಮತನ ಕಣ್ಮರೆಯಾಗಿ ಪರಕೀಯ ಅನಾಥ ಪ್ರಜ್ಞೆ ಆವರಿಸತೊಡಗಿತು.

ವಿಜಯನಗರ ಪತನಾನಂತರ ರಾಜಧಾನಿಯು ಪೆನಗೊಂಡ, ಚಂದ್ರಗಿರಿ, ವೆಲ್ಲೂರುಗಳಿಗೆ ಬದಲಾವಣೆಯಾದನಂತರ, ವಿಜಯನಗರದ ಮಾಂಡಳಿಕರಾಗಿದ್ದ ಹಲವು ಮನೆತನಗಳು ಸ್ವತಂತ್ರವಾದುವು. ಕೆಳದಿಯ ಅರಸು 'ಶಿಸ್ತು' ಎಂಬ ಹೊಸದಾದ ಭೂಕಂದಾಯ ಜಾರಿಗೊಳಿಸಿ 'ಶಿಸ್ತುಗಾರ ಶಿವಪ್ಪನಾಯಕ' ಎಂದೇ ಪ್ರಸಿದ್ಧಿಯಾಗಿದ್ದಾನೆ.

ಮೈಸೂರು ಅರಸರು ವಿಜಯನಗರ ಪಾಳೆಯಗಾರರಾಗಿದ್ದು, ರಾಜ ಒಡೆಯರು ೧೬೧೦ರಲ್ಲಿ ಶ್ರೀರಂಗಪಟ್ಟಣವನ್ನು ವಿಜಯನಗರದಿಂದ ಗೆದ್ದು, ಅದನ್ನೇ ರಾಜಧಾನಿಯಾಗಿ ಮಾಡಿಕೊಂಡರು. ಮುಂದೆ ಸ್ವತಂತ್ರವಾದ ಮೈಸೂರಿನಲ್ಲಿ ಕಂಠೀರವನರಸರಾಜ, ಚಿಕ್ಕದೇವರಾಜ ಮೊದಲಾದ ಗಣ್ಯ ಅರಸರು ಆಳಿದರು.

ಬ್ರಿಟಿಷರ ವಿರುದ್ಧ ಹೈದರ್ ಮತ್ತು ಟಿಪ್ಪು ನಡೆಸಿದ ಹೋರಾಟಗಳಿಂದ ಮೈಸೂರು ಜಾಗತಿಕ ಕೀರ್ತಿ ಪಡೆಯಿತು. ಕಾಲಾನಂತರ ಬ್ರಿಟಿಷರು ಟಿಪ್ಪುವನ್ನು ಸೋಲಿಸಿ ರಾಜ್ಯವನ್ನು ಮೈಸೂರು ಅರಸು ವಂಶಕ್ಕೆ ನೀಡಿದರು. ಮುಂದೆ ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು ಮೊದಲಾದವರು ಸಂಸ್ಥಾನದ ಪ್ರಗತಿಗೆ ಶ್ರಮಿಸಿದರು.

ಕನ್ನಡ ನಾಡಿನಲ್ಲಿ ಆಳಿದ ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು ವಿಜಯನಗರದ ಅರಸರು, ಮುಸ್ಲಿಮ್ ದೊರೆಗಳು, ಕೆಳದಿ ಮತ್ತು ಮೈಸೂರು ರಾಜರು ಪ್ರಜೆಗಳ ಹಿತಕ್ಕಾಗಿ ಶ್ರಮಿಸಿದ್ದಾರೆ. ಧರ್ಮ, ಕಲೆ, ಸಾಹಿತ್ಯ, ಶಿಲ್ಪ ಮುಂತಾದವನ್ನು ಪೋಷಿಸಿ ಬೆಳೆಸಿದ್ದಾರೆ. ನೆರೆಹೊರೆಯ ಉತ್ತಮ ಸಂಸ್ಕೃತಿಯನ್ನು ಹೀರಿ ತಮ್ಮದೇ ಸಂಸ್ಕೃತಿಯ ಕೊಡುಗೆ ನೀಡಿದ್ದಾರೆ.

ಸಾಹಿತ್ಯ ನಾಡಿನ ಪ್ರತಿಬಿಂಬ

ಚರಿತ್ರೆಯ ಪುನರ್ ನಿರ್ಮಾಣಕ್ಕೆ ಇರುವ ಅತಿ ಪ್ರಮುಖವಾದ ಆಧಾರ ಎಂದರೆ ಶಾಸನಗಳು. ಕನ್ನಡ ನಾಡಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಪರಂಪರೆಯನ್ನು ತಿಳಿಯಲು ಶಾಸನಗಳು ಕೈಗನ್ನಡಿಯಾಗಿವೆ. ಕನ್ನಡದ ಪ್ರಾಚೀನ ಶಾಸನ ಎಂದು ಗುರುತಿಸಿರುವ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಲ್ಮಿಡಿ ಶಾಸನ (ಕ್ರಿ. ಶ. ೪೫೦)ದಲ್ಲಿ ಕಪ್ಪೆಯ ಅರಭಟ್ಟನು ತನ್ನ ಬಗ್ಗೆ ಈ ರೀತಿ ಹೇಳಿಕೊಂಡಿದ್ದಾನೆ.

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವ ನೀತನ್ ಪೆಱನಲ್ಲ

ಇದು ಒಂದು ರೀತಿಯಲ್ಲಿ ಕನ್ನಡಿಗರ ಆತ್ಮಾಭಿಮಾನದ ಸಂಕೇತವೇ ಆಗಿದೆ.

ಹೀಗೆ ಶೌರ್ಯ, ಸಾಹಸ, ದಾನ, ಧರ್ಮ, ಪರಮತ ಸಹಿಷ್ಣುತೆ, ತ್ಯಾಗ ಬಲಿದಾನಗಳಿಗೆ ನಾಡಿನ ಉದ್ದ ಅಗಲಕ್ಕೂ ಶಾಸನಗಳು ಮೂಕ ಸಾಕ್ಷಿಯಾಗಿ ನಿಂತಿವೆ. ಶಾಸನಗಳು ಸಾಹಿತ್ಯ ಸಂಸ್ಕೃತಿಗೆ ಕಾಣಿಕೆ ನೀಡಿರುವುವಲ್ಲದೆ, ನಾಡಿನ ಭವ್ಯ ಪರಂಪರೆಯನ್ನು ಹಿಡಿದಿಟ್ಟಿರುವ ಶಾಶ್ವತ ಸಂಪತ್ತುಗಳೂ ಆಗಿವೆ.

ಒಂದು ಜನಾಂಗದ ಸಂಸ್ಕೃತಿಯು ಸಾಧನೆ ಖಚಿತವಾಗಿ ವ್ಯಕ್ತವಾಗುವುದು ಅದರ ಸಾಹಿತ್ಯದಲ್ಲಿ. ಜನಜೀವನದ ಆಶೋತ್ತರಗಳನ್ನು, ಶಕ್ತಿ, ಸಾಧನೆಗಳನ್ನು ಕವಿಗಳು, ಸಾಹಿತಿಗಳು, ದಾರ್ಶನಿಕರು, ಅನುಭಾವಿಗಳು ಅಭಿವ್ಯಕ್ತಿಸಿದ್ದಾರೆ. ಕನ್ನಡದ ಮೊದಲ ಗ್ರಂಥ (ಲಕ್ಷಣ ಗ್ರಂಥವೂ ಹೌದು) ನೃಪತುಂಗನ ಕವಿರಾಜಮಾರ್ಗದಲ್ಲಿ ಕನ್ನಡ ನಾಡು ನುಡಿಯ ಬಗ್ಗೆ ಹೇಳಿರುವ ಮಾತುಗಳು ಮನನೀಯ :

ಕಾವೇರಿಯಿಂದಮಾ ಗೋ
ದಾವರಿವರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯ ವಿಲೀನ ವಿಶದ ವಿಷಯ ವಿಶೇಷಂ

ಎಂದು ಕನ್ನಡನಾಡಿನ ವಿಸ್ತಾರದ ವರ್ಣನೆಯನ್ನು ಈ ರಾಷ್ಟ್ರಕೂಟ ಚಕ್ರವರ್ತಿಯು

ಹೆಮ್ಮೆಯಿಂದನಾಡಿ, ನಾಡಿನ ಜನರ ಸಂಸ್ಕೃತಿಯನ್ನು ಕಾವ್ಯಶಕ್ತಿಯನ್ನು ಈ ರೀತಿ ಹೇಳಿದ್ದಾನೆ:

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲು ಮಾರ್ಪರಾ
ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯಪ್ರಯೋಗ ಪರಿಣತ
ಮತಿಗಳ್

ಕನ್ನಡದ ಆದಿಕವಿ ಪಂಪನು ಮುಂದಿನ ಜನ್ಮದಲ್ಲಿ ನಾನು ಕನ್ನಡನಾಡಿನಲ್ಲೇ ಹುಟ್ಟಬೇಕು. ಮನುಷ್ಯನಾಗಿ ಹುಟ್ಟಲು ಸಾಧ್ಯವಾಗದಿದ್ದರೆ, ಕೋಗಿಲೆಯಾಗಿ, ಮರಿದುಂಬಿಯಾಗಿಯಾದರೂ ಹುಟ್ಟಲೇಬೇಕು ಎಂದು ಹಂಬಲಿಸಿದ್ದಾನೆ.

ಆಂಡಯ್ಯ ಕವಿಯು ಕನ್ನಡನಾಡನ್ನು ಕುರಿತು ಹೀಗೆ ಹೇಳಿದ್ದಾನೆ:

ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ
ಬಣ್ಣಿಸಲ್ಕಾಱನಾ
ನೆಲನಂ ಮತ್ತಿನ ಮಾನಿಸರ್ ಪೊಗಳಲೇನಂ
ಬಲ್ಲರೆಂಬೊಂದು ಬ
ಲ್ಲುಲಿಯಂ ನೆಟ್ಟನೆ ತಾಳ್ದು ಕನ್ನಡಮೆನಿಪ್ಪಾ
ನಾಡು ಚೆಲ್ವಾಯ್ತು ಮೆ
ಲ್ಲಲರಿಂ ಪೂತಕೊಳಂಗಳಿಂ ಕೆಱೆಗಳಿಂ
ಕಾಲೂರ್ಗಳಿಂ ಕೆಯ್ಗಳಿಂ

ಮಂದ ಮಂದವಾಗಿ ಬೀಸುವ ಮಲಯಾನಿಲ, ಕೊಳಕೆರೆಗಳಲ್ಲಿ ಅರಳಿನಿಂತ ತಾವರೆಗಳು, ತುಂಬಿ ಹರಿಯುವ ಕಾಲುವೆಗಳು, ಹಚ್ಚಹಸುರಿನ ಹೊಲಗದ್ದೆಗಳು ನೋಡುವ ಕಣ್ಣಿಗೆ ಸಂತೋಷದ ಸಾಗರ. ಈ ಸೌಂದರ್ಯ ವರ್ಣಿಸಲು ಸಾವಿರನಾಲಿಗೆಯ ಆದಿಶೇಷನಿಗೂ ಅಸಾಧ್ಯ. ಇನ್ನು ಉಳಿದ ಮಾನವರ ಪಾಡೇನು?

ಹೀಗೆ ಮಹಾಕಾವ್ಯ ಬರೆಯಲು ಹೊರಟ ಎಲ್ಲ ಕವಿಗಳೂ ಕರ್ನಾಟಕವನ್ನು ವರ್ಣಿಸಿದ್ದಾರೆ. ಇತರ ಕವಿಗಳು ಸಂದರ್ಭಾನುಸಾರ ಕನ್ನಡನಾಡಿಗೆ ಕಾವ್ಯ ಕಾಣಿಕೆ ಸಲ್ಲಿಸಿದ್ದಾರೆ. ಹೊಸಗನ್ನಡ ಸಾಹಿತ್ಯದ ಕವಿಗಳೂ ನಾಡು ನುಡಿಯ ಬಗ್ಗೆ ವಿಶೇಷ ಪ್ರೇಮ ವ್ಯಕ್ತಪಡಿಸಿದ್ದಾರೆ. ನವೋದಯ, ನವ್ಯ, ಬಂಡಾಯ ಹಾಗೂ ದಲಿತ ಸಾಹಿತ್ಯಗಳಲ್ಲಿಯೂ ಕರ್ನಾಟಕದ ಪ್ರಜ್ಞೆ ಮೂಡಿದೆ.

ಕನ್ನಡದ ಕಣ್ವ ಬಿ.ಎಂ.ಶ್ರೀಯವರು ಕನ್ನಡ ನಾಡನ್ನು ಕುರಿತು

ಏನು ಚೆಲುವಿನ ನಾಡು! ಚೆಲುವು ಚೆಲ್ಲುವ
ನಾಡು! ಕನ್ನಡನಾಡು
ಏನು ಚಿನ್ನದ ನಾಡು! ನಮ್ಮೊಲುಮೆಯಾ
ನಾಡು! ನಮ್ಮಿನಿಯ ನಾಡು!
ಕಾವೇರಿಯಿಂದ ಗೋದಾವರಿವರೆಗೆ
ಚಾಚಿರುವ ನಾಡು

ಎಂದು ಒಂದು ಮುಖ ನೋಡಿ ಹಿಗ್ಗಿದರೆ

ಕೇಳಣ್ಣ ನಾನೊಬ್ಬ ಹಳೆಯ ಮುತ್ತೈದೆ
ಹಿರಿದಾಗಿ ಬಾಳಿದವಳೊಮ್ಮೆ
ಈಗ ಬಡತನ, ಬಡವೆ, ಬಡವಾದೆ: ಬಡವಾದ
ಮಕ್ಕಳನು ನೋಡಿ,
ಬತ್ತಿ, ಮತ್ತಮ್ಮಡಿಯ ಸೊರಗಿನಲಿ ಬಡವಾದೆ
—ಸಾವಿಲ್ಲ ನನಗೆ!
ಸಾವಿಲ್ಲ ಸಾಯುತಿಹೆ

ಎಂದು ಮರುಗುತ್ತಾರೆ.

ಹರಿದು ಹಂಚಾದ ಕನ್ನಡನಾಡಿನ ದುಃಸ್ಥಿತಿಯು ಶ್ರೀನಿವಾಸರಿಗೆ ಹೀಗೆ ಕಾಡಿದೆ:

ಹರಿದು ತುಂಡಾಗಿಹುದು ಇಂದು ಕನ್ನಡ
ನಾಡು !
ಅಣ್ಣ ತಮ್ಮದಿರು ತಾವಣ್ಣ ತಮ್ಮದಿರೆಂದು
ತಿಳಿಯಲಾರರು ನಡೆಯಲಾರರು ; ಬಾ ಬಂಧು
ಎಂದು ಕರೆಯಲು, ಸ್ವಾಮಿ ನನ್ನೂರು
ಧಾರ್ವಾಡ
ನನ್ನೂರು ಮೈಸೂರು, ನನ್ನೂರು ಎರಕಾಡು
ಮರ್ಯಾದೆಯಿಂದ ಕರೆಯಿರಿ ನನ್ನ
ಎನ್ನುವರು
ಕನ್ನಡದ ನಾಡ ಜನವೆಲ್ಲವೂ ನನ್ನವರು
ಬಡಗ ತೆಂಕಣ ಮೂಡ ಕೊಡಗ ತೌಳವ
ತೋಡ

ರಾಷ್ಟ್ರಕವಿ ಕುವೆಂಪು ಅವರಿಗೆ

ನೀ ಮೆಟ್ಟುವ ನೆಲ—ಅದೆ ಕರ್ನಾಟಕ
ನೀನಿರುವ ಮಲೆ—ಸಹ್ಯಾದ್ರಿ,
ನೀ ಮುಟ್ಟುವ ಮರ—ಶ್ರೀಗಂಧದ ಮರ,
ನೀ ಕುಡಿಯುವ ನೀರ್—ಕಾವೇರಿ !

ಕನ್ನಡವೇ ಸತ್ಯ !
ಕನ್ನಡವೇ ನಿತ್ಯ !
ಅನ್ಯವೆನಲದೆ ಮಿಥ್ಯಾ !

ಬೆನಗಲ್ ರಾಮರಾವ್ ಅವರಿಗೆ ಕನ್ನಡಾಂಬೆಯ ಹಿರಿಮೆ ಹೀಗಿದೆ:

ಕನ್ನಡವನುಳಿದೆನಗೆ ! ಅನ್ಯ ಜೀವನವಿಲ್ಲ
ಕನ್ನಡವೆ ಎನ್ನುಸಿರು ! ಪೆತ್ತನ್ನ ತಾಯಿ
ಕನ್ನಡವೆ ಧನಧಾನ್ಯ ! ಕನ್ನಡವೆ ಮನೆ ಮಾನ್ಯ
ಕನ್ನಡವೆನಗಾಯುತ್ತು ! ಕಣ್ಣು ಕಿವಿ ಬಾಯಿ.

ಗಡಿನಾಡ ಕವಿ ಕಯ್ಯಾರ ಕಿಞ್ಞಣ್ಣರೈ ಅವರು ಗಡಿನಾಡ ಕನ್ನಡಿಗರ ಮುಖವಾಣಿಯಾಗಿ

ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ !
ಎಲ್ಲರೂ ಎದ್ದೆದ್ದು ಓಡಿ ಬನ್ನಿ
ಕನ್ನಡದ ಗಡಿ ಕಾಯೆ,
ಗುಡಿ ಕಾಯೆ, ನುಡಿ ಕಾಯೆ !
ಕಾಯಲಾರೆನೆ ಸಾಯೆ !
ಓ ಬನ್ನಿ ಬನ್ನಿ

ಎಂದು ದುಗಡ ದುಮ್ಮಾನದಿಂದ ಕೂಗಿ ಕರೆಯುತ್ತಾರೆ.

ಕನ್ನಡ ಜನವಲ್ಲದೆ ಕನ್ನಡವನು
ಉಳಿಸುವರಾರೈ ಬೆಳಸುವರಾರೈ

ಎಂದು ಪುತಿನ ಅವರು ಕನ್ನಡಿಗರ ಭಾಷಾಭಿಮಾನವನ್ನು ಪ್ರಶ್ನಿಸುತ್ತಾರೆ

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ ;
ಹಸಿಗೋಡೆ ಹರಳಿನಂತೆ
ಹುಸಿಯಾಗದ ಕನ್ನಡ

ಕನ್ನಡ ಘೋಷಣೆಗಿಂತ ಮಿಗಿಲಾಗಿ ನಿತ್ಯ ಆಚರಣೆಗೆ ಬರಲಿ ಎಂದು ಚನ್ನವೀರಕಣವಿಯವರು ಹಂಬಲಿಸಿದ್ದಾರೆ.

ಕನ್ನಡನಾಡು ಒಂದಾದುದನ್ನು ಕಂಡ ಕಾವ್ಯಾನಂದರ ಮನ ಹೀಗೆ ಮಿಡಿಯುತ್ತದೆ:

ಹೊತ್ತಿತೋ ಹೊತ್ತಿತು
ಕನ್ನಡದ ದೀಪ
ಮುಗಿಯಿತೋ ಮುಗಿಯಿತು
ಶತಮಾನಗಳ ಶಾಪ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ !

'ಮೈಸೂರು ಮಲ್ಲಿಗೆ' ಕವಿ ಕೆ. ಎಸ್. ನರಸಿಂಹಸ್ವಾಮಿ ಅವರು ಕನ್ನಡ ಮಾತೆಗೆ ಹೀಗೆ ಮೊರೆ ಇಟ್ಟಿದ್ದಾರೆ:

ಹೊಸತೊಂದು ನಾಡ ಕಟ್ಟುವೆವು ತಾಯೆ,
ಚಿನ್ನತ್ಟ್ರ ಮುಂದೆ ಕಳಿಸು ;

ಮುಂದಿಟ್ಟ ಹೆಜ್ಜೆ ಹಿಂದೆಗೆಯದಂತೆ
ನಡೆಯುವುದ ನಮಗೆ ಕಲಿಸು
ಮೈ ಬೆವರ ಸುರಿಸಿ ದುಡಿವಂತೆ ಮಾಡು
ಒಳ ಭೇದವನ್ನು ಅಳಿಸು.
ಬಡತನವ ತೊಡೆವ ಸಂಗ್ರಾಮದಲ್ಲಿ
ಶುಭವನ್ನು ನಮಗೆ ಹರಸು

ಭಾಷೆ ಉಳಿಯಬೇಕು

ಭಾಷೆ ಉಳಿದು, ಬೆಳೆಯಬೇಕಾದರೆ ಬಳಕೆಯಾಗಬೇಕು. ಭಾಷೆಯ ಬೆಳವಣಿಗೆಗೆ ಹಲವು ಮತ್ತು ಮಾರ್ಗಗಳಿವೆ. ದೈನಂದಿನ ವ್ಯವಹಾರಗಳಲ್ಲಿ ಕನ್ನಡ ಬಳಸಬಹುದಾದ ಕೆಲವು ಸಂದರ್ಭಗಳು.

* ಮನೆಗೆ ಕನ್ನಡ ಪತ್ರಿಕೆಗಳನ್ನು ತರಿಸುವುದು.
* ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕೊಡಿಸುವುದು.
* ಮಕ್ಕಳಿಗೆ ಸಹಕಾರಿಯಾದ ಆಕರ್ಷಕ ಕನ್ನಡ ಚಿತ್ರ ಪುಸ್ತಕಗಳು ಮುಂತಾದವನ್ನು ಒಳಗೊಂಡ ಗ್ರಂಥಾಲಯವನ್ನು ಮನೆಯಲ್ಲಿ ಸಜ್ಜುಗೊಳಿಸುವುದು.
* ಶಾಲೆಗಳಲ್ಲಿ ನಡೆಯುವ ಸಭೆಯಲ್ಲಿ ಪೋಷಕರು ಭಾಗವಹಿಸಿದಲ್ಲಿ ಸಾಧ್ಯವಾದಮಟ್ಟಿಗೂ ಕನ್ನಡದಲ್ಲೇ ಮಾತನಾಡುವುದು. (ಅದು ಇಂಗ್ಲಿಷ್ ಮಾಧ್ಯಮ ಶಾಲೆಯಾಗಿದ್ದರೂ ಚಿಂತೆ ಇಲ್ಲ).
* ಆಕಾಶವಾಣಿ ದೂರದರ್ಶನದಲ್ಲಿ ಸಾಧ್ಯವಾದ ಮಟ್ಟಿಗೂ ಕನ್ನಡ ಕಾರ್ಯಕ್ರಮಗಳನ್ನು ಕೇಳುವುದು ಮತ್ತು ನೋಡುವುದು. ಕಾರ್ಯಕ್ರಮಗಳು ಕಳಪೆಯಾಗಿದ್ದರೆ ಸಂಬಂಧಿಸಿದವರನ್ನು ಸಂಪರ್ಕಿಸಿ ತಿಳಿಸುವುದು.
* ಕನ್ನಡ ಬಲ್ಲವರೊಂದಿಗೆ ಕನ್ನಡದಲ್ಲೇ ಪತ್ರವ್ಯವಹರಿಸುವುದು.
* ವಿವಾಹ, ಗೃಹಪ್ರವೇಶ ಮುಂತಾದ ಆಮಂತ್ರಣ ಪತ್ರಗಳನ್ನು ಕನ್ನಡದಲ್ಲೇ ಮುದ್ರಿಸುವುದು.
* ಮನೆಹೆಸರು, ವಿಳಾಸ ಮುಂತಾದವನ್ನು ಕನ್ನಡದಲ್ಲೇ ಬರೆಸುವುದು.
* ಅಂಕಿಗಳನ್ನೂ ಒಳಗೊಂಡಂತೆ ಕನ್ನಡದಲ್ಲಿ ವಾಹನಗಳಿಗೆ ಬಳಸುವುದು.
* ಕನ್ನಡದಲ್ಲೇ ಸಹಿ ಮಾಡುವುದು ಮತ್ತು ಕನ್ನಡ ಅಂಕೆ ಬಳಸುವುದು.
* ರಾಜ್ಯದ ಆಂತರಿಕ ವ್ಯವಹಾರಗಳಲ್ಲಿ ಬ್ಯಾಂಕ್, ಅಂಚೆ ಕಛೇರಿ ಮುಂತಾದ ನಮೂನೆಗಳನ್ನು ಕನ್ನಡದಲ್ಲಿ ತುಂಬುವುದು. ನಮೂನೆಗಳು ಇಂಗ್ಲಿಷ್‌ನಲ್ಲಿ ಮುದ್ರಣವಾಗಿದ್ದರೂ ಕನ್ನಡದಲ್ಲೇ ಭರ್ತಿ ಮಾಡುವುದು.
* ಕನ್ನಡ ಕವಿ, ಸಾಹಿತಿಗಳ ಭಾವಚಿತ್ರಗಳನ್ನು ಮನೆಯಲ್ಲಿ ಪ್ರದರ್ಶಿಸುವುದು.
* ಕನ್ನಡ ಪರವಾಗಿ ನಡೆಯುವ ಸಭೆ, ಸಮಾರಂಭ, ಮುಂತಾದುವುಗಳಲ್ಲಿ ಭಾಗವಹಿಸುವುದು.

* ಸಮಿಾಪದಲ್ಲಿರುವ ಅನಕ್ಷರಸ್ಥರಿಗೆ ಕನ್ನಡ ಓದು ಬರಹ ಕಲಿಸುವುದು.

* ನೆರೆಹೊರೆಯಲ್ಲಿ ಅನ್ಯಭಾಷಿಕರಿದ್ದರೆ ಅವರಿಗೆ ಕನ್ನಡ ಕಲಿಸುವುದು.

* ಕಛೇರಿಯಲ್ಲಿ ಕಡತಗಳನ್ನು ಕನ್ನಡದಲ್ಲೇ ನಿರ್ವಹಿಸುವುದು.

* ಕಛೇರಿಗೆ ಯಾವುದೇ ಅರ್ಜಿ, ನಮೂನೆಗಳನ್ನು ಕನ್ನಡದಲ್ಲೇ ಸಲ್ಲಿಸುವುದು.

* ಹೊಟೇಲು, ಬಸ್ಸು ಮುಂತಾದವುಗಳಲ್ಲಿ ಇತರ ಭಾಷೆಯ ಹಾಡುಗಳನ್ನು ನುಡಿಸುತ್ತಿದ್ದರೆ, ಕನ್ನಡ ಹಾಡುಗಳನ್ನು ನುಡಿಸುವಂತೆ ಸಂಬಂಧಿಸಿದವರಿಗೆ ಸೌಜನ್ಯದಿಂದ ಮನವರಿಕೆ ಮಾಡಿಕೊಡುವುದು.

* ಹಂಪೆ, ಬನವಾಸಿಯಂತಹ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಏರ್ಪಡಿಸುವುದು.

* ಅನ್ಯಭಾಷೆಯ ವ್ಯಾಪಾರಿಗಳೊಂದಿಗೆ ಕನ್ನಡದಲ್ಲೇ ಮಾತನಾಡುವುದು.

ಹೊರಗಿನಿಂದ ಬಂದು ನಮ್ಮನ್ನು ತುಳಿದವರನ್ನು ಮತ್ತು ತುಳಿಯುತ್ತಿರುವವರನ್ನು ಪೂಜಿಸಿ ಪಾಪಿಗಳಾಗಿದ್ದೇವೆ. ಈಗ ಕ್ಲೈಬ್ಯವನ್ನು ದೂರ ಮಾಡಬೇಕಾದ ಕಾಲ. ನಮ್ಮ ಆಲಸ್ಯವೇ ನಮ್ಮ ಮೃತ್ಯು. ಕನ್ನಡಿಗರು ಮೂಲೆ ಮೂಲೆಗಳಲ್ಲಿ ಉಗ್ರ ಚಳುವಳಿಯನ್ನು ಕೈಗೊಳ್ಳಬೇಕು. ಸಾಹಿತ್ಯ, ಸಂಗೀತ, ರಾಜಕಾರಣ, ಔದ್ಯೋಗ, ಸಮಾಜ ಯಾವ ಹೆಸರಿನಲ್ಲಿ ಪರಾಕ್ರಮಣ ಕಂಡುಬಂದರೂ ಕನ್ನಡಿಗರು ಎದುರಿಸಬೇಕು.

—ಅನಕೃ

ಸೂಪರ್‌ಕಾಪ್ ಕಿರಣ್‌ಬೇಡಿ

ಡಾ॥ ಆರ್. ರಾಮಕೃಷ್ಣ

ನರಕ ಕೂಪವೆಂದೇ ಕುಖ್ಯಾತಿ ಪಡೆದಿರುವ ದೆಹಲಿಯ ತಿಹಾರ್ ಜೈಲಿನಲ್ಲಿ ಕೈಗೊಂಡ ಅಭೂತಪೂರ್ವ ಸುಧಾರಣ ಕ್ರಮಗಳಿಗಾಗಿ ಪ್ರತಿಷ್ಠಿತ ಮ್ಯಾಗ್ಸೆಸೆ ಪ್ರಶಸ್ತಿ ಗಳಿಸಿರುವ ಮಹಿಳೆ ಕಿರಣ್‌ಬೇಡಿ. ಅಧಿಕಾರದ ಜೊತೆಗೆ ಪ್ರಾಮಾಣಿಕತೆ ಮತ್ತು ಮಾನವೀಯತೆ ಒಟ್ಟುಗೂಡಿದರೆ ಎಂಥ ಪವಾಡಗಳನ್ನು ಸಾಧಿಸಬಹುದೆಂಬುದನ್ನು ಪ್ರಪಂಚಕ್ಕೆ ತೋರಿಸಿಕೊಟ್ಟ ದಿಟ್ಟ ಮಹಿಳೆ. ನೂತನ ಕಾರ್ಯಕ್ಷೇತ್ರಗಳಿಗೆ ಕಾಲಿಟ್ಟಿರುವ ಮಹಿಳೆಯರಿಗೆ ಮಾರ್ಗದರ್ಶನ ನೀಡಬಲ್ಲ ಕಿರಣ್‌ಬೇಡಿಯವರ ಸಾಧನೆಯನ್ನು ಕುರಿತ ಪರಿಚಯಾತ್ಮಕ ಲೇಖನವಿದು.

ಕಿರಣ್‌ಬೇಡಿಯವರು ಅಮೃತಸರದ ಪಂಜಾಬಿ ವ್ಯಾಪಾರಸ್ಥರ ಕುಟುಂಬವೊಂದರಲ್ಲಿ ೧೯೪೯ ಜೂನ್ ೯ ರಂದು ನಾಲ್ವರು ಹೆಣ್ಣುಮಕ್ಕಳ ಪೈಕಿ ಎರಡನೆಯವರಾಗಿ ಜನಿಸಿದರು. ಇವರ ಪೂರ್ವಜರು ಈಗ ಪಾಕಿಸ್ತಾನದ ಭಾಗವಾಗಿರುವ ಪೇಶಾವರದವರು. ಆದುದರಿಂದ ಇವರ ಕುಟುಂಬದವರನ್ನು ಪೇಶಾವರಿಯಾ ಎಂದು ಕರೆಯುತ್ತಾರೆ. ತಂದೆ ಪ್ರಕಾಶ್‌ಲಾಲ್ ತಾಯಿ ಜನಕ್. ತಮ್ಮ ಮಕ್ಕಳು ಆಟ ಪಾಠಗಳೆರಡರಲ್ಲೂ ಸಾಧನೆಮಾಡಬೇಕೆಂಬುದೇ ಅವರ ಹಂಬಲ, ಶಿಸ್ತು ಇದ್ದಂಥ ಮನೆಯಲ್ಲಿ ವಿದ್ಯಾರ್ಹತೆಗಳಿಸುವುದೇ ಗುರಿ. ಕಿರಣ್ ಶಾಲೆಯಲ್ಲಿ ಕಲಿಯುತ್ತಿರುವಾಗಲೆ ಚರ್ಚಾಕೂಟ, ನಾಟಕ, ಗ್ರಂಥಾಲಯ, ಎನ್‌ಸಿಸಿ, ಟೆನಿಸ್—ಈ ಮೊದಲಾದವುಗಳಲ್ಲಿ ಹೆಚ್ಚು ಆಸಕ್ತಿ ತಳೆದರು. ಬದುಕಿನ ಪ್ರತಿಕ್ಷಣಕ್ಕೂ ಬೆಲೆಯಿದೆ ಎಂಬ ತತ್ವವನ್ನು ಚಿಕ್ಕಂದಿನಿಂದಲೇ ಅರಿತರು. ತಂದೆಯ ಸಂಪಾದನೆಯ ಪ್ರತಿಯೊಂದು ಪೈಸೆಗೂ ಬೆಲೆಯಿದೆ, ಆದುದರಿಂದ ದುಂದು ಮಾಡಬಾರದು ಎಂಬ ಅರಿವಿತ್ತು. ಪ್ರೌಢಶಾಲೆಗೆ ಸೇರಿದಾಗಲೆ ತಮ್ಮ ಬದುಕಿನ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಂತ ತಲುಪಿದ್ದರು.

ಶಾಲಾ ದಿನಗಳಲ್ಲಿ ಉತ್ತಮ ವಿದ್ಯಾರ್ಥಿನಿಯಾಗಿದ್ದ ಕಿರಣ್, ತಮ್ಮ ಕಲಿಕೆಯ ಹಂತದಲ್ಲಿ ಡಬಲ್ ಪ್ರಮೋಷನ್ ಪಡೆದರು. ಮುಂದೆ ಅಮೃತಸರದ ಮಹಿಳೆಯರ ಕಾಲೇಜಿನಲ್ಲಿ ಶಿಕ್ಷಣ ಪಡೆದರು. ಇಂಗ್ಲಿಷ್ ಆನರ್ಸ್ ಬಳಿಕ ರಾಜ್ಯ ಶಾಸ್ತ್ರದಲ್ಲಿ ಸುವರ್ಣ ಪದಕದೊಂದಿಗೆ ಎಂ.ಎ. ಪದವಿ ಗಳಿಸಿದರು. ೧೯೭೨ ರಲ್ಲಿ ಏಷ್ಯನ್ ಮಹಿಳೆಯರ ಟೆನಿಸ್ ಪ್ರಶಸ್ತಿಯನ್ನು ಗೆದ್ದಾಗ ಮೊತ್ತಮೊದಲ

ಬಾರಿಗೆ ರಾಷ್ಟ್ರದ ಗಮನ ಸೆಳೆದ ಕಿರಣ್, ಅದೇ ವರ್ಷ ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಐ.ಪಿ.ಎಸ್. ಆಯ್ಕೆ ಮಾಡಿಕೊಂಡಾಗ ಸ್ತ್ರೀಯರು ಕಾಲಿರಿಸಲಾಗದ ಕ್ಷೇತ್ರವೆಂದು ಅವರ ಆಸಕ್ತಿಯನ್ನು ಬೇರೆ ಕಡೆಗೆ ತಿರುಗಿಸುವ ತೀವ್ರ ಪ್ರಯತ್ನ ನಡೆಯಿತು. ಪೊಲೀಸ್ ವೃತ್ತಿಯಲ್ಲಿಯ ಅಪಾಯಗಳ ಅರಿವಿದ್ದೇ ಆಯ್ಕೆ ಮಾಡಿಕೊಂಡಿದ್ದ ಕಿರಣ್ ಯಾರ ಮಾತಿಗೂ ಜಗ್ಗಲಿಲ್ಲ, ಅಳುಕಲಿಲ್ಲ, ಪೊಲೀಸ್ ಇಲಾಖೆಯಲ್ಲೇ ಸೇವೆ ಮಾಡಬೇಕೆಂಬುದು ಅವರ ಬಯಕೆಯಾಗಿತ್ತು. ಅದುವರೆಗೂ ಕೇವಲ ಪುರುಷರಿಗೆ ಮಾತ್ರ ಮೀಸಲಾಗಿದ್ದ ಈ ಕ್ಷೇತ್ರಕ್ಕೆ ಮೊತ್ತಮೊದಲ ಬಾರಿಗೆ ಹೆಣ್ಣೊಬ್ಬಳು ಹೆಜ್ಜೆಯಿಟ್ಟಾಗ ಗೃಹ ಖಾತೆಯ ಅಧಿಕಾರಶಾಹಿಗಳಲ್ಲಿ ಗೊಂದಲ, ತಳಮಳ. ಈ ಹೆಣ್ಣಿಗೆ ಕೆಲವು ರಿಯಾಯಿತಿ ಕೊಟ್ಟು ಪ್ರತ್ಯೇಕ ತರಬೇತಿ ಕೊಡಬೇಕೇ ಎಂದೂ ಯೋಚಿಸಲಾಯಿತು. ಆದರೆ ಕಿರಣ್ ಯಾವ ರಿಯಾಯಿತಿಯನ್ನು ಒಪ್ಪದೆ, ಎಲ್ಲ ಬಗೆಯ ಕಠಿಣ ತರಬೇತಿಯನ್ನು ಯಶಸ್ವಿಯಾಗಿ ಮುಗಿಸಿ, ಖಾಕಿ ಧರಿಸಿ, ಗಸ್ತು ತಿರುಗಲು ನಡೆದಾಗ ಮೊದಲು ಅನುಮಾನ ಪಟ್ಟಂಥ ವ್ಯಕ್ತಿಗಳೇ ಅಚ್ಚರಿಗೊಂಡರು.

೧೯೭೨ರಲ್ಲಿ ಅಮೃತಸರದ ಸರ್ವೀಸಸ್ ಕ್ಲಬ್‌ನಲ್ಲಿ ತಮ್ಮ ಭಾವೀಪತಿ ಬ್ರಿಜ್ ಬೇಡಿಯನ್ನು ಭೇಟಿಯಾದರು. ಪರಸ್ಪರ ಒಪ್ಪಿದರು. ಜೀವನ ಜೋಡಿಯಾದರು. ಅವರ ಮದುವೆಯೂ ತುಂಬ ಸರಳ. ೧೯೭೨ ಮಾರ್ಚ್ ೯ರಂದು ಅಮೃತಸರದ ಶಿವ ದೇವಾಲಯಕ್ಕೆ ಹೋಗಿ ಪರಸ್ಪರ ಹೂಮಾಲೆ ಹಾಕಿಕೊಂಡು ದಂಪತಿಗಳಾದರು. ತಾಯಿತಂದೆ, ಕೆಲವು ಸ್ನೇಹಿತರು, ಹಿರಿಯರು ಮಾತ್ರ ಈ ಸರಳ ವಿವಾಹದಲ್ಲಿ ಪಾಲ್ಗೊಂಡಿದ್ದರು.

ಬಂದೂಕು ಲಾಠಿಯ ಕ್ಷೇತ್ರದಲ್ಲಿ ಮಹಿಳೆಯೆಂದು ರಿಯಾಯಿತಿ ಪಡೆಯುವುದಿರಲಿ ದೊಂಬಿ ಗಲಭೆಗಳಲ್ಲಿ ಪುರುಷರನ್ನು ಮೀರಿಸಿ ಗಲಭೆಕೋರರ ಮಧ್ಯೆ ಲಾಠಿಯನ್ನು ಬೀಸಿ ಕಿರಣ್ ಬೇಡಿ ಓಡಾಡಿದಾಗ ಇಡೀ ರಾಷ್ಟ್ರವೇ ಆಶ್ಚರ್ಯದಿಂದ ಅವರನ್ನು ಗಮನಿಸಿತು. ೧೯೮೦ ರಲ್ಲಿ ದೆಹಲಿಯಲ್ಲಿ ನಡೆದ ಅಕಾಲಿಗಳ ಬೃಹತ್ ಪ್ರದರ್ಶನದಲ್ಲಿ ಕತ್ತಿ ಹಿಡಿದು ರೋಷಾವೇಶದಿಂದ ಉನ್ಮತ್ತರಾಗಿದ್ದ ಅಕಾಲಿಗಳನ್ನು ಲಾಠಿ ಹಿಡಿದು ಅವರನ್ನು ಅಟ್ಟಿಸಿಕೊಂಡು ಹೋದ ಕಿರಣ್ ಬೇಡಿ ತಮ್ಮ ಕಾರ್ಯದಲ್ಲಿ ಸಫಲರಾದರು. ಇದಕ್ಕಾಗಿ ಅವರಿಗೆ 'ಪೊಲೀಸ್ ಶೌರ್ಯ ಪ್ರಶಸ್ತಿ' ಸಿಕ್ಕಿತು.

ಐ.ಪಿ.ಎಸ್‌ಗೆ ಸೇರಿದ ಬಳಿಕ ಕಿರಣ್ ಬೇಡಿ ಕಾನೂನು ಪದವಿ ಗಳಿಸಿದರು. ಮಾದಕ ವಸ್ತುಗಳ ಬಗ್ಗೆ ಅಧ್ಯಯನ ನಡೆಸಿ ಡಾಕ್ಟರೇಟ್ ಪದವಿಯನ್ನು ಪಡೆದರು. ನವದೆಹಲಿ ಜಿಲ್ಲೆಯ ಅಡಿಷನಲ್ ಡೆಪ್ಯುಟಿ ಕಮೀಷನರ್, ಪಶ್ಚಿಮ ದೆಹಲಿ ಜಿಲ್ಲೆಯ ಪೊಲೀಸ್ ಮುಖ್ಯಾಧಿಕಾರಿ, ಟ್ರಾಫಿಕ್ ಡಿ.ಸಿ.ಪಿ, ದೆಹಲಿ ಉತ್ತರ ಜಿಲ್ಲೆಯ ಪೊಲೀಸ್ ಮುಖ್ಯಾಧಿಕಾರಿ, ಮಾದಕವಸ್ತು ನಿಯಂತ್ರಣ ಬ್ಯೂರೊ ಉಪನಿರ್ದೇಶಕಿ, ಕೇಂದ್ರ ಮೀಸಲು ಪಡೆ ಕಮಾಂಡೆಂಟ್, ದೆಹಲಿಯ ಇನ್ಸ್‌ಪೆಕ್ಟರ್ ಜನರಲ್ (ಸೆರೆಮನೆ)—ಹೀಗೆ ಕಿರಣ್ ಬೇಡಿ ೨೪ ವರ್ಷಗಳ ಅವಧಿಯಲ್ಲಿ ನಿರ್ವಹಿಸಿದ ಉನ್ನತ ಹುದ್ದೆಗಳು.

‘ಧೈರ್ಯಂ ಸರ್ವತ್ರ ಸಾಧನಂ’ ಎಂಬ ಧ್ಯೇಯವಾಕ್ಯವನ್ನೇ ಉಸಿರಾಗಿಸಿಕೊಂಡಿರುವ ಕಿರಣ್ ಬೇಡಿ ಯಾವುದಕ್ಕೂ ಹಿಂಜರಿಯುವ ಸ್ವಭಾವದವರಲ್ಲ, ೧೯೭೫ ಜನವರಿ ೨೬ ರಂದು ದೆಹಲಿ ಪೆರೇಡ್‌ಗೆ, ಮೊತ್ತಮೊದಲಬಾರಿ ದೆಹಲಿ ಪೊಲೀಸ್ ಪಡೆಯ ನಾಯಕಿಯಾಗಿ ಕಾರ್ಯನಿರ್ವಹಿಸಿದರು. ಅವರನ್ನು ಮಾರನೆಯ ದಿನ ತನ್ನ ಮನೆಯಲ್ಲಿ ಬೆಳಗಿನ ಉಪಾಹಾರಕ್ಕೆ ಪ್ರಧಾನಿ ಇಂದಿರಾಗಾಂಧಿ ಆಮಂತ್ರಣ ನೀಡಿದರು. ಈ ಸಂಗತಿಯ ಹಿಂದೆ ಪುರುಷಪ್ರಧಾನ ಸಮಾಜದ ಕೈವಾಡವಿದೆ. ಅಂದಿನ ಪೊಲೀಸ್ ಪೆರೇಡ್‌ನ ನಾಯಕಿ ಕಿರಣ್ ಬೇಡಿ ಎಂದು ಮೊದಲೇ ನಿರ್ಧಾರವಾಗಿದ್ದರೂ ಕೊನೆಗಳಿಗೆಯಲ್ಲಿ ಅವನ್ನು ಕೈಬಿಡಲಾಯಿತು. ಕೂಡಲೇ ಕಿರಣ್ ಬೇಡಿಯವರು ದೆಹಲಿಯ ಐ.ಜಿ. ಆಗಿದ್ದ ರಾಜಗೋಪಾಲ್ ಅವರನ್ನು ಕಂಡು ಹೀಗೇಕಾಯ್ತೆಂದು ವಿಚಾರಿಸಿದರು. “ಸುಮಾರು ಹದಿನೈದು ಕಿಲೋಮೀಟರ್ ಉದ್ದದ ಈ ಮಾರ್ಚ್‌ಪಾಸ್ಟಿನಲ್ಲಿ ಭಾರವಾದ ಖಡ್ಗ ಹಿಡಿದು ಮಾರ್ಚ್‌ಪಾಸ್ಟ್ ಮಾಡುವುದು ನಿಮಗೆ ಸಾಧ್ಯವೆ?” ಎಂದು ರಾಜಗೋಪಾಲ್ ಅನುಮಾನ ವ್ಯಕ್ತಪಡಿಸಿದರು. ಅದಕ್ಕೆ ತಕ್ಷಣವೇ ಕಿರಣ್ ಬೇಡಿ” ಈ ಕಾರ್ಯಕ್ಕಾಗಿಯೇ ಕಠಿಣ ತರಬೇತಿ ಪಡೆದ ಬಳಿಕ, ಈಗಲೂ ನಾನೂ ಈ ಪ್ರಶ್ನೆಗೆ ಉತ್ತರಿಸಬೇಕೇ?” ಎಂದು ದಿಟ್ಟತನದಿಂದ ಪ್ರಶ್ನಿಸಿದರು. ಅಂದಿನ ಪೆರೇಡ್ ಕಿರಣ್ ಬೇಡಿ ನಾಯಕತ್ವದಲ್ಲಿ ಸಮರ್ಥವಾಗಿ ನಡೆದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

೧೯೮೨ ರಲ್ಲಿ ದೆಹಲಿಯಲ್ಲಿ ಏಷ್ಯನ್ ಗೇಮ್ಸ್ ಸಿದ್ಧತೆ ನಡೆಯುತ್ತಿತ್ತು. ಆಗ ಕಿರಣ್ ಬೇಡಿಯವರು ಟ್ರಾಫಿಕ್ ಕಂಟ್ರೋಲ್ ಪೊಲೀಸ್ ಪರಿಷ್ಠಾಧಿಕಾರಿಯಾಗಿ ನೇಮಕವಾದರು. ದೆಹಲಿಯಲ್ಲಿ ಹತ್ತೊಂಬತ್ತು ವಿವಿಧ ಸ್ಟೇಡಿಯಂಗಳ ನಿರ್ಮಾಣಕಾರ್ಯ ಸಾಗುತ್ತಿದ್ದುದರಿಂದ, ರಸ್ತೆ ಸಂಚಾರದ ವ್ಯವಸ್ಥೆ ಆಗಬೇಕಿತ್ತು. ಆಗ ಬೆಳಗಿನಜಾವದಿಂದ ರಾತ್ರಿತನಕ ಅವರು ಸ್ವತಃ ನಿರ್ದಿಷ್ಟ ಸ್ಥಳಗಳಿಗೆ ಹೋಗಿ ಖುದ್ದು ಪರಿಶೀಲಿಸಿ, ಎಲ್ಲ ಕಾರ್ಯಗಳು ಸುಸೂತ್ರವಾಗಿ ನಡೆಯುವಂತೆ ಮಾಡಿದ್ದು ಅವರಿಗೆ ಜನಪ್ರಿಯತೆ ಲಭಿಸಿತು.

ಎಲ್ಲೆಂದರಲ್ಲಿ ವಾಹನಗಳನ್ನು ಪಾರ್ಕ್ ಮಾಡುವುದು ಕೆಲವರ ಹವ್ಯಾಸ. ಇದನ್ನು ತಡೆಗಟ್ಟಲು ಕಿರಣ್ ಬೇಡಿ ಶಿಸ್ತಿನ ಕ್ರಮ ಕೈಗೊಂಡರು. ವಾಹನಗಳ ಮಾಲೀಕರು ಇದನ್ನು ಲಘುವಾಗಿ ತೆಗೆದುಕೊಂಡು ತಮ್ಮ ಚಾಳಿಯನ್ನು ಮುಂದುವರಿಸಿದ್ದರು. ಕಿರಣ್ ಬೇಡಿ ಬಗ್ಗೆ ಕೇವಲವಾಗಿ ಮಾತನಾಡಿ ಲೇವಡಿಯನ್ನು ಮಾಡಿದ್ದರು. ಆದರೆ ಈ ವ್ಯವಸ್ಥೆಯನ್ನು ಬಹಳ ಸಮರ್ಥವಾಗಿ ಮಾಡಿ ತೋರಿಸಿದರು ಕಿರಣ್ ಬೇಡಿ. ಇದಕ್ಕಾಗಿ ಅವರ ವಿರುದ್ಧ ಅನೇಕ ಆರೋಪಗಳು ದೂರುಗಳೂ ಬಂದುವು. ಇವಾವುದಕ್ಕೂ ಅವರು ಜಗ್ಗಲಿಲ್ಲ. ಅವರ ಕರ್ತವ್ಯನಿಷ್ಠೆಗೊಂದು ಉದಾಹರಣೆ: ಪ್ರಧಾನಮಂತ್ರಿಯವರ ಅಂಬಾಸಿಡರ್ ಕಾರನ್ನು (ಡಿ.ಎಚ್.ಐ. ೧೮೧೭) ನಿರ್ದಿಷ್ಟ ಸ್ಥಳದಲ್ಲಿ ಪಾರ್ಕ್ ಮಾಡದೆ ಮತ್ತಾವುದೋ ಜಾಗದಲ್ಲಿ ತಪ್ಪಾಗಿ ಪಾರ್ಕ್ ಮಾಡಲಾಗಿತ್ತು. ಇದನ್ನು ತಿಳಿದ ಕಿರಣ್ ಬೇಡಿ, ಕಾರನ್ನು ಕ್ರೇನ್ ಮೂಲಕ ತೆಗೆಸಿದರು! ನಿಯಮ ಉಲ್ಲಂಘಿಸಿದವರಿಗೆ ದಂಡ ಹಾಕಿದರು. ಇದ

ರಿಂದಾಗಿ ಅವರಿಗೆ 'ಕ್ರೇನ್‌ಬೇಡಿ' ಎಂಬ ಅಡ್ಡಹೆಸರು ಬಂತು.

ಕಿರಣ್‌ಬೇಡಿಯವರ ಪ್ರಾಮಾಣಿಕತೆ, ಶಿಸ್ತು ಮತ್ತು ಕಾನೂನುರಕ್ಷಣೆ ಅವರನ್ನು ಗೋವೆಗೆ ವರ್ಗ ಮಾಡಿಸುವಂತಾಯಿತು. ಗೋವೆಯಲ್ಲೂ ಅವರು ತಮ್ಮ ಶಿಸ್ತಿನಿಂದಾಗಿ, ಪ್ರಾಮಾಣಿಕ ಕೆಲಸಗಳಿಂದಾಗಿ ಬೇಗನೆ ಜನಪ್ರಿಯತೆ ಗಳಿಸಿದರು. ಆರು ತಿಂಗಳಲ್ಲಿ ಮೂರುಸಾವಿರ ಟ್ರಾಫಿಕ್ ಅಪರಾಧಗಳನ್ನು ಕಂಡುಹಿಡಿದು, ಅಪರಾಧಿಗಳಿಗೆ ದಂಡಹಾಕಿ ಶಿಕ್ಷೆಯಾಗುವಂತೆ ಮಾಡಿದರು. ರಸ್ತೆಗಳಿರುವುದು ಜನರ ಉಪಯೋಗಕ್ಕೆ ಎಂಬ ವಿಚಾರವನ್ನು ತಮ್ಮ ಕಾರ್ಯದಿಂದ ತೋರಿಸಿಕೊಟ್ಟರು. ಗೋವಾದಲ್ಲಿ ಸಂತ ಕ್ಸೇವಿಯರ್ ಉತ್ಸವ ಸಮಾರಂಭದಲ್ಲಿ ಯಾವುದೇ ಪ್ರಮುಖ ವ್ಯಕ್ತಿಯ ಕಾರು ಕೂಡ ಚರ್ಚಿನ ಹತ್ತಿರ ಬರಲು ಕಿರಣ್‌ಬೇಡಿ ಬಿಡಲಿಲ್ಲ. ಶ್ರೀಸಾಮಾನ್ಯರ ನಡುವೆಯೇ ರಾಜಕೀಯ ವ್ಯಕ್ತಿಗಳೂ ಅತಿಗಣ್ಯ ವ್ಯಕ್ತಿ ಎನಿಸಿಕೊಂಡವರೂ ನಡೆದುಕೊಂಡೇ ಬಂದರು. ಆದರೆ ರಾಜಕಾರಣಿಗಳ ಅತಿಗಣ್ಯ ವ್ಯಕ್ತಿಗಳ ಬೆಂಬಲಿಗರು ಇದನ್ನು ತೀವ್ರವಾಗಿ ವಿರೋಧಿಸಿದರು. ಕಿರಣ್‌ಬೇಡಿ ತಮ್ಮ ಕಾರ್ಯಕ್ಕಾಗಿ ಕ್ಷಮಾಯಾಚನೆ ಮಾಡಬೇಕೆಂದು ಕೆಲವರು ಹಠ ಹಿಡಿದಿದ್ದರು. ಅದಕ್ಕಾಗಿ ಕಿರಣ್‌ಬೇಡಿ ಗೋವಾ ಮುಖ್ಯಮಂತ್ರಿಯೊಂದಿಗೆ ಚರ್ಚೆ ಮಾಡಬೇಕಾಗಿ ಬಂತು.

ಗೋವಾದಲ್ಲಿ ಕಟ್ಟಿದ ಒಂದು ಸೇತುವೆಯ ಉದ್ಘಾಟನೆಯನ್ನು ಕರ್ತವ್ಯನಿಷ್ಠ ವ್ಯಕ್ತಿಯೊಬ್ಬನಿಂದ ಮಾಡಿಸಿದರು ಕಿರಣ್‌ಬೇಡಿ. ಇದಕ್ಕಾಗಿ ಅವರು ಮಂತ್ರಿಗಳಿಗಾಗಿ ಕಾಯಲಿಲ್ಲ. ಮಂತ್ರಿಗಳ ಅಮೃತಹಸ್ತದ ಸಹಾಯವಿಲ್ಲದೆ ಸೇತುವೆ ಜನರ ಬಳಕೆಗೆ ಬಹುಬೇಗನೆ ಬರುವಂತಾಯಿತು.

ಜನರ ವಿಶ್ವಾಸಕ್ಕೆ ಪಾತ್ರರಾದ ಕಿರಣ್‌ಬೇಡಿ ಜನರಲ್ಲಿ ಹೊಸ ಭರವಸೆಯನ್ನುಂಟು ಮಾಡಿದರು. ಪೊಲೀಸರಲ್ಲಿ ನಂಬಿಕೆ ಕಳೆದುಕೊಂಡ ಜನರಲ್ಲಿ ಆಶಾಭಾವನೆ ಮೂಡಿತು. ಪೊಲೀಸ್ ಮರಿಷ್ಠಾಧಿಕಾರಿ ಆಗಿದ್ದಾಗ ಕಿರಣ್‌ಬೇಡಿ, ಕ್ರಿಮಿನಲ್ ಅಲ್ಲದ ಒಬ್ಬ ವ್ಯಕ್ತಿಯನ್ನು ದಸ್ತಗಿರಿ ಮಾಡಲಿಲ್ಲ. ಅವರು ಹೇಳಿದ ವಿವೇಕದಿಂದಾಗಿ ಸುಧಾರಿಸಿದ ಅನೇಕ ಕಳ್ಳಕಾಕರು ದರೋಡೆಕೋರರು ಪ್ರಾಮಾಣಿಕವಾಗಿ ಬದುಕಲು ಪ್ರಯತ್ನಪಟ್ಟಿದ್ದಾರೆ. ಯಾವ ಅಪರಾಧವನ್ನೂ ಮಾಡದೆ, ಸಂಶಯದಿಂದ ಪೊಲೀಸರು ಹಿಡಿದಿದ್ದ ನಿರಪರಾಧಿಗಳನ್ನು ಕಿರಣ್‌ಬೇಡಿ ಬಿಡಿಸಿದ್ದಾರೆ. ಪೊಲೀಸರು ಮಾನವೀಯತೆಯಿಂದ ನಡೆದುಕೊಳ್ಳಬೇಕು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಬೇಕು ಎಂಬುದು ಅವರ ಆದರ್ಶ. ಕಿರಣ್‌ಬೇಡಿಯವರ ಕಾರ್ಯತತ್ಪರತೆಯನ್ನು ಮೆಚ್ಚಿ ಮದರ್ ತೆರೆಸಾ ಕೂಡ ಅವರನ್ನು ಬಳಿಗೆ ಕರೆಸಿಕೊಂಡು ಆಶೀರ್ವಾದ ಮಾಡಿದ್ದಾರೆ.

ತಪ್ಪಿತಸ್ಥರನ್ನು ತಿದ್ದಬೇಕೆಂಬುದೇ ಪೊಲೀಸರ ಪ್ರಮುಖ ಕರ್ತವ್ಯ ಎಂಬುದು ಕಿರಣ್‌ಬೇಡಿಯವರ ನಂಬಿಕೆ. ದೆಹಲಿಯಲ್ಲಿ ಸಂಸಿ ಎಂಬ ಬುಡಕಟ್ಟು ಜನ ಕಳ್ಳಭಟ್ಟಿ ಕುಡಿತ ತಮ್ಮ ಜನರಿಗೆ ಬಂದ ಕುಲಕಸುಬು ಎಂದು ನಂಬಿದ್ದ ಜನ. ಅವರೊಂದಿಗೆ ಕಿರಣ್‌ಬೇಡಿ ಪ್ರೀತಿ ವಿಶ್ವಾಸದಿಂದ ಮಾತನಾಡಿ ಕುಡಿತದ ದುಷ್ಪರಿಣಾಮವನ್ನು ವಿವರಿಸಿದರು. ಇದಾರಿಂದಾಗಿ ಸಂಸಿಗಳು ಸುಧಾರಿಸಿ

ದರು. ದೆಹಲಿಯಲ್ಲಿ ಕೊಲೆ, ಕಳ್ಳತನ, ದರೋಡೆ ಕಡಿಮೆಯಾದುವು. ಪೊಲೀಸರು ಜನರನ್ನು ಪ್ರೀತಿಸಿದರೆ, ನಂಬಿಕೆಗಳಿಸಿದರೆ ಅಪರಾಧಗಳು ಖಂಡಿತ ಕಡಿಮೆಯಾಗುತ್ತವೆ ಎಂದು ತೋರಿಸಿಕೊಟ್ಟರು. ಪೊಲೀಸರೆಂದರೆ ಜನ ಭೀತಿಗೊಳ್ಳುವ ಬದಲು ಪ್ರೀತಿಸುವಂತಾಗಬೇಕು ನಂಬುವಂತಾಗಬೇಕು ಎಂದು ಹೇಳುತ್ತಿದ್ದರು. ದೆಹಲಿಯಲ್ಲಿದ್ದ ಸುಮಾರು ಮೂರು ಸಾವಿರ ಕುಪ್ರಸಿದ್ಧ ರೌಢಿಗಳ, ಸಮಾಜಘಾತುಕರ ೨೬೬ ಪುಟಗಳ ಒಂದು ಡೈರೆಕ್ಟರಿಯನ್ನು ಪ್ರಕಟಮಾಡಿ, ಅವನ್ನು ಬೇರೆ ಬೇರೆ ಪೊಲೀಸ್ ಠಾಣೆಗಳಿಗೆ ಹಂಚಿದರು. ಕ್ರಮೇಣ ಅಪರಾಧಗಳ ಸಂಖ್ಯೆ ಕಡಿಮೆಯಾಯಿತು. ಇದೇ ಕ್ರಮವನ್ನು ಅವರು ಉತ್ತರಪ್ರದೇಶ, ಮಿಜೋರಾಂ ರಾಜ್ಯಗಳಲ್ಲೂ ಕಾರ್ಯರೂಪಕ್ಕೆ ತಂದರು. ಅವರು ತಮ್ಮ ಇಲಾಖೆಯಲ್ಲಿ ಸೇವೆಸಲ್ಲಿಸುತ್ತಿರುವವರ ಕಷ್ಟಸುಖಗಳಿಗೂ ಸ್ಪಂದಿಸಿದ್ದಾರೆ. ದೆಹಲಿಯಲ್ಲಿ ಪೊಲೀಸರಿಗೆ ಆರೇಳು ವರ್ಷಗಳಿಂದ ಬಾಕಿಯಿದ್ದ ಬಡ್ತಿಯನ್ನು ಸಾವಿರದೈನೂರಕ್ಕೂ ಹೆಚ್ಚು ಮಂದಿಗೆ ಒಂದೇ ದಿನದಲ್ಲಿ ಕೊಟ್ಟ ನಿದರ್ಶನ ಉಂಟು. ಈ ಬಗ್ಗೆ ಗೃಹಖಾತೆಯ ವಿರುದ್ಧ ನ್ಯಾಯಾಲಯಕ್ಕೆ ಹೋಗುವಂತೆ ಮಾಡಿ ಪೊಲೀಸರಿಗೆ ನ್ಯಾಯ ಸಿಗುವಂತೆ ಮಾಡಿದ್ದರು. ಅವರ ಈ ಬಗೆಯ ನಿಸ್ವಾರ್ಥ ಸೇವೆಗಳೇ ಅವರನ್ನು ಜನರ ಬಳಿಗೆ ಕೊಂಡೊಯ್ದವು.

೧೯೮೮ರಲ್ಲಿ ದೆಹಲಿಯಲ್ಲಿ ಡೆಪ್ಯುಟಿ ಕಮಿಷನರ್ ಆಫ್ ಪೊಲೀಸ್ ಆಗಿ ಕಿರಣ್ ಬೇಡಿ ಅಧಿಕಾರ ವಹಿಸಿಕೊಂಡಾಗ ಮಾದಕ ವಸ್ತು ಸೇವನೆ, ಕುಡಿತ, ಹಿಂಸಾಚಾರ ಪ್ರಕರಣಗಳು ಅತಿಯಾಗಿದ್ದುವು. ಇವಕ್ಕೆ ತಕ್ಕ ಕಡಿವಾಣ ಹಾಕಲು ಕಿರಣ್‌ಬೇಡಿ ಪ್ರಯತ್ನಿಸಿದರು. ಚಿಕ್ಕ ಚಿಕ್ಕ ವ್ಯಾಜ್ಯಗಳನ್ನು ಉದ್ದೇಶಪೂರ್ವಕವಾಗಿ ಮುಂದಕ್ಕೆ ಹಾಕಿ ಕಕ್ಷಿಗಾರರನ್ನು ಪೀಡಿಸುತ್ತಿದ್ದ ವಕೀಲರಿಗೆ ಬುದ್ಧಿ ಹೇಳಿದರು. ಇದರಿಂದ ದೆಹಲಿಯ ತೀಸ್‌ಹಜಾರಿ ಕೋರ್ಟ್‌ನ ವಕೀಲರು ಕೋಪಗೊಂಡರು. ಇದಕ್ಕೆ ಒಂದು ನೆಪವಾಗಿ ಪರ್ಸೊಂದು ಕಳುವಾದ ಪ್ರಕರಣದಿಂದ ಶಾಂತಿಭಂಗ ಉಂಟಾಯಿತು. ರಾಜೇಶ್ ಅಗ್ನಿಹೋತ್ರಿ ಎಂಬ ವಕೀಲರ ಕೈಗೆ ಬೇಡಿಹಾಕಿ ಅವರನ್ನು ಪೊಲೀಸರು ನ್ಯಾಯಾಲಯಕ್ಕೆ ಕರೆದೊಯ್ದರು. ವಕೀಲರು, ವಿದ್ಯಾರ್ಥಿಗಳು ಮತ್ತು ಪೊಲೀಸರ ನಡುವೆ ಘರ್ಷಣೆಗಳುಂಟಾಗಿ ಪರಿಸ್ಥಿತಿ ಹದ್ದುಮೀರಿತು. ದೆಹಲಿಯ ವಕೀಲರೆಲ್ಲರು ಸಾಮೂಹಿಕವಾಗಿ ಒಂದಾಗಿ ಮುಷ್ಕರ ಹೂಡಿದರು. ಕಿರಣ್ ಬೇಡಿ ಹೆದರಲಿಲ್ಲ. ಪೊಲೀಸರ ಕ್ರಮವನ್ನು ಸಮರ್ಥಿಸಿದರು. ಮುಷ್ಕರ ಹೂಡಿದವರ ಮೇಲೆ ಬೇಡಿಯವರು ಲಾಠಿ ಪ್ರಯೋಗಿಸಲು ಅನುಮತಿ ನೀಡಿದರು ಎಂದು ಹೇಳಿದ ವಕೀಲ ಸಮೂಹ ಪ್ರತಿಭಟನೆಯ ಕುರುಹಾಗಿ ಎರಡು ತಿಂಗಳ ಕಾಲ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ. ಕಿರಣ್ ಬೇಡಿಯವರನ್ನು ವರ್ಗ ಮಾಡಿದಾಗಲೇ ಮುಷ್ಕರ ಕೊನೆಗೊಂಡಿತು.

ಕಿರಣ್ ಬೇಡಿಯವರ ವ್ಯಕ್ತಿತ್ವದ ಹಿರಿಮೆಯೆಂದರೆ ಪೊಲೀಸ್ ಪ್ರಪಂಚದಲ್ಲಿ ನಿರ್ದಾಕ್ಷಿಣ್ಯವಾಗಿ ಬಳಸುತ್ತಿದ್ದ ಬಂದೂಕು, ಲಾಠಿ, ಕೆಟ್ಟ ಬೈಗುಳಗಳನ್ನು

ಬಿಟ್ಟು, ಪಾಪಕೂಪ ನರಕಸದೃಶ ಎಂದು ಕುಖ್ಯಾತಿ ಪಡೆದಿದ್ದ ತಿಹಾರ್ ಜೈಲಿನೊಳಗೆ ಮಾನವೀಯತೆ ಪ್ರೀತಿ ವಿಶ್ವಾಸ ಅನುಕಂಪದ ಅಲೆಗಳನ್ನು ಅಸ್ತ್ರವಾಗಿ ಬಳಸಿದುದು. ಪೊಲೀಸು ಅಧಿಕಾರಿಗಳ ಕೆಟ್ಟ ವರ್ತನೆ, ಸಾಮಾಜಿಕ ಬಹಿಷ್ಕಾರ, ಹೆತ್ತವರ, ಸ್ನೇಹಿತರ ತಿರಸ್ಕಾರದಿಂದ ಮಾನವಸಹಜ ಭಾವನೆಗಳೇ ಸತ್ತಂತೆ ತೋರುತ್ತಿದ್ದ ಅಪರಾಧಿಗಳನ್ನು ಮನುಷ್ಯರಂತೆ ಕಂಡ ಮೊತ್ತಮೊದಲ ಪೊಲೀಸ್ ಅಧಿಕಾರಿ ಕಿರಣ್ ಬೇಡಿ. ಅಪರಾಧಿಗಳ ಮಾನವಸಹಜ ಭಾವನೆಗಳನ್ನು ತಮ್ಮ ಅಮೃತಸ್ಪರ್ಶ ಹಸ್ತದಿಂದ ಮೃದುವಾಗಿ ತಟ್ಟಿ ಎಬ್ಬಿಸಿ, ಕೈದಿಗಳಲ್ಲಿ ಆತ್ಮವಿಶ್ವಾಸ, ಆತ್ಮ ಗೌರವವನ್ನು ಮೂಡಿಸಿದ ಕಿರಣ್ ಬೇಡಿ ಸೆರೆಮನೆಗಳ ಇತಿಹಾಸದಲ್ಲೇ ನೂತನ ಅಧ್ಯಾಯವನ್ನು ಪ್ರಾರಂಭಮಾಡಿದರು. ಸೆರೆಯಾಳಾದರೂ ಅವರಲ್ಲೂ ಇರುವ ವ್ಯಕ್ತಿತ್ವದ ವೈಯಕ್ತಿಕ ಗೌರವವನ್ನು ಗೌರವಿಸುವ ಕ್ರಮ ಕಿರಣ್ ಬೇಡಿಯವರ ವ್ಯಕ್ತಿತ್ವದ ಮಾನವೀಯತೆಯನ್ನು ಪ್ರಕಟಪಡಿಸುತ್ತದೆ.

ತಿಹಾರ್ ಜೈಲು ಸುಮಾರು ೧೮೦ ಎಕರೆ ವಿಸ್ತಾರದಲ್ಲಿ ಹರಡಿಕೊಂಡಿದೆ. ಈ ಸೆರೆಮನೆಯಲ್ಲಿ ಸ್ಥಳಾವಕಾಶ ಇರುವುದು ೨೫೦೦ ಮಂದಿಗೆ ಮಾತ್ರ ಎಂದು ಮಿತಿಹಾಕಲಾಗಿದೆ. ಆದರೆ ಅಲ್ಲಿ ತುಂಬಿರುವುದು ೮೫೦೦ ರಿಂದ ೯೫೦೦ ಮಂದಿ! ತಿಹಾರ್ ಜೈಲಿಗೆ ಪೊಲೀಸ್ ಅಧಿಕಾರಿಯಾಗಿ ನೇಮಕವಾಗುವುದೆಂದರೆ ಅದೊಂದು ಬಗೆಯ ಹಿಂಬಡ್ತಿ ಇದ್ದಂತೆ. ಒಂದು ಬಗೆಯಲ್ಲಿ ತೊಂದರೆ ಅನುಭವಿಸಲೆಂದೇ ಆ ಜೈಲಿಗೆ ಅಧಿಕಾರಿಯಾಗಿ ವರ್ಗಾವಣೆ ಮಾಡುವುದು ಎಂದೇ ದೆಹಲಿಯ ಪೊಲೀಸ್ ಪ್ರಪಂಚದ ಭಾವನೆ. ಈ ಸೆರೆಮನೆ ಬಗ್ಗೆ, ಅಲ್ಲಿಯ ಅಧಿಕಾರಿಗಳ ಬಗ್ಗೆ ಜನರಲ್ಲಿ ಯಾವ ಸದಭಿಪ್ರಾಯಗಳಿಲ್ಲ, ಮಿಜೋರಾಂನಿಂದ ದೆಹಲಿಗೆ ವರ್ಗವಾದ ಕಿರಣ್ ಬೇಡಿಯವರನ್ನು ಸರ್ಕಾರ ತಿಹಾರ್ ಜೈಲಿಗೆ ಇನ್ಸ್‌ಪೆಕ್ಟರ್ ಜನರಲ್ ಆಗಿ ನೇಮಿಸಿತು. ತಿಹಾರ್ ಜೈಲಿನ ಹದಗೆಟ್ಟ ವ್ಯವಸ್ಥೆಯನ್ನು ಸರಿಪಡಿಸಲೆಂದೇ ಅವರನ್ನು ನೇಮಕಮಾಡಿದಂತಿತ್ತು. ಕಿರಣ್ ಬೇಡಿ ಅದನ್ನೊಂದು ಸವಾಲಾಗಿ ಸ್ವೀಕರಿಸಿದರು.

ತಿಹಾರ್ ಜೈಲು ಒಂದು ಮಹಾನರಕ. ಅಲ್ಲಿ ಪ್ರತಿಯೊಂದು ಕಾರ್ಯವೂ ಅತ್ಯಂತ ಗುಟ್ಟಾಗಿ ನಡೆಯುತ್ತಿತ್ತು. ಅಪರಾಧಿಗಳನ್ನು ಪ್ರಾಣಿಗಿಂತ ಕಡೆಯಾಗಿ ಕಾಣಲಾಗುತ್ತಿತ್ತು. ಮನುಷ್ಯತ್ವ ಮಾನವೀಯತೆಗಳಿಗೆ ಸ್ಥಾನವಿರಲಿಲ್ಲ. ಹೊರಗಿನ ಯಾವ ವ್ಯಕ್ತಿಯನ್ನು ಒಳಗೆ ಬಿಡುತ್ತಿರಲಿಲ್ಲ. ಜೈಲಿನ ಅಧಿಕಾರಿಗಳು ಆಡಿದ್ದೇ ಆಟ. ಅವರದೇ ಕಾನೂನು. ಅವರು ಹೇಳಿದಂತೆಯೇ ಎಲ್ಲವೂ ನಡೆಯುತ್ತಿತ್ತು. ಒಂದು ರೀತಿಯಲ್ಲಿ ವಸಾಹತು ಪ್ರವೃತ್ತಿ. ಲಾಠಿ, ಬೆಲ್ಟು, ಬೂಟು ಇಲ್ಲದೆ ಅವರು ಮಾತನಾಡುತ್ತಿರಲಿಲ್ಲ. ಕೈದಿಗಳು ಉಸಿರೆತ್ತಿದರೆ ಹೊಲಸು ಬೈಗುಳಗಳು. ಮಾರಕ ಹೊಡೆತಗಳು ಜೈಲಿನ ಇನ್ಸ್‌ಪೆಕ್ಟರ್ ಜನರಲ್ ಆದವರು ಎಂದೂ ಜೈಲನ್ನು ಕೂಲಂಕಷವಾಗಿ ಪರಿಶೀಲಿಸುತ್ತಿರಲಿಲ್ಲ. ಅಧಿಕಾರಿಗಳು ಬರುವಾಗ ಅಪರಾಧಿಗಳನ್ನು ಕೊಠಡಿಯೊಳಗೆ ಕೂಡಿಹಾಕುತ್ತಿದ್ದರು. ರಕ್ಷಣೆಯ ಹೆಸರಿನಲ್ಲಿ ಅಧಿಕಾರಿಗಳು ನಾಟಕವಾಡುತ್ತಿದ್ದರು. ಅಪರಾಧಿಗಳ ಸ್ಥಿತಿಗತಿ

ಗಳೇನು ಸಮಸ್ಯೆಗಳಾವುವು ಎಂಬುದನ್ನು ಐ.ಜಿ.ಗೆ ತಿಳಿಯದಂತೆ ಜೈಲಿನ ಸಿಬ್ಬಂದಿ ಜಾಗರೂಕತೆ ವಹಿಸುತ್ತಿದ್ದರು. ಇಂಥ ವಿಷಮ ಪರಿಸ್ಥಿತಿಯಲ್ಲಿ ಐ.ಜಿ. ಕಿರಣ್ ಬೇಡಿ ಜೈಲಿನೊಳಗೆ ನಿರಾಯುಧರಾಗಿ ಬಂದರು. ಯಾವ ಅಪರಾಧಿಗಳನ್ನೂ ಕೂಡಿ ಹಾಕಿ ಬೀಗ ಹಾಕಬಾರದೆಂದೂ ಅಜ್ಞೆಮಾಡಿದ್ದರು. ಕೈದಿಗಳ ಜೊತೆಯಲ್ಲಿ ಆತ್ಮೀಯ ಸ್ನೇಹಿತೆಯಂತೆ ನಡೆದುಕೊಂಡರು. ಅವರೊಂದಿಗೆ ಕಷ್ಟ ಸುಖಗಳನ್ನು ಹಂಚಿಕೊಂಡರು. ಊಟ ತಿಂಡಿ ಮಾಡಿದರು. ಎಲ್ಲರಿಗೂ ಅಚ್ಚರಿ. ಭಯದ ವಾತಾವರಣದಿಂದ ಸಾಧನೆ ಮಾಡಲಾಗದಿದ್ದುದನ್ನು ಅವರು ಪ್ರೀತಿಯಿಂದ ಮಾನವೀಯ ದೃಷ್ಟಿಯಿಂದ ಮಾಡಿ ತೋರಿಸಿ, ತಿಹಾರ್ ಜೈಲಿನ ಇತಿಹಾಸದಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿದರು. ಹೀಗಾಗಿ ಅಪನಂಬಿಕೆ ಭಯದ ವಾತಾವರಣ ಕ್ರಮೇಣ ಕಡಿಮೆಯಾಗಿ ಕೈದಿಗಳಲ್ಲಿ ಪ್ರೀತಿ ನಂಬಿಕೆ ಭರವಸೆ ಮೂಡಿದುವು. ಅಪರಾಧಿಗಳ ಬದುಕಿನಲ್ಲಿ ಹೊಸಗಾಳಿ ಬೀಸತೊಡಗಿತು. ಕೈದಿಗಳ ಮನಸ್ಸೂ ಖಂಡಿತ ಬದಲಾಗುವುದು ಎಂಬ ವಿಚಾರ ಸ್ಪಷ್ಟವಾಗತೊಡಗಿತು.

ಕಿರಣ್ ಬೇಡಿಯವರ ದಕ್ಷತೆಯನ್ನು ಜೈಲಿನ ಸಿಬ್ಬಂದಿ ಮೆಚ್ಚಿದರು. ಅವರನ್ನು ಗೌರವಿಸಲು ತೊಡಗಿದರು. ಕೈದಿಗಳೊಂದಿಗೆ ನಿಷ್ಠುರವಾಗಿ ನಡೆಯುವುದೇ ಸರಿಯಾದ ಮಾರ್ಗವೆಂದು ತಿಳಿದಿದ್ದ ಸಿಬ್ಬಂದಿಯ ಪೈಕಿ ಒಬ್ಬೊಬ್ಬರನ್ನೇ ಕರೆದು ವಿಚಾರವಿನಿಮಯ ನಡೆಸಿದರು. ಕೈದಿಗಳನ್ನು ಶಿಕ್ಷಿಸುವ ಯಾವ ಅಧಿಕಾರವೂ ಅಲ್ಲಿಯ ಪೊಲೀಸ್ ಸಿಬ್ಬಂದಿಗೆ ಇರಲಿಲ್ಲ. ಅವರು ಈ ಕೈದಿಗಳ ಬದುಕಿನಲ್ಲಿ ತೀರ್ಪು ಕೊಡುವ ನ್ಯಾಯಾಧೀಶರಾಗಿರಲು ಸಾಧ್ಯವಿಲ್ಲ ಎಂದು ಕಿರಣ್ ಬೇಡಿ ಬಹಳ ಸೂಕ್ಷ್ಮವಾಗಿ ವಿನಯದಿಂದ ಹೇಳಿದರು. ಟೀಮ್ ವರ್ಕ್‌ನಂತೆ ನಾವೆಲ್ಲರೂ ಕೆಲಸ ಮಾಡಬೇಕು ಎಂದು ಹೇಳುತ್ತಿದ್ದರು. ಜೈಲಿನೊಳಗಡೆ ಅಪರಾಧಿಗಳೊಡನೆ ರಹಸ್ಯವಾಗಿ ಭ್ರಷ್ಟ ಕೆಲಸ ಕಾರ್ಯಗಳಲ್ಲಿ ಭಾಗಿಯಾಗುತ್ತಿದ್ದವರನ್ನು ಅಪರಾಧಿಗಳಿಂದ ದೂರಮಾಡಿ ಅಂಥ ಸಿಬ್ಬಂದಿಗಳಿಗೆ ಬೇರೆ ಕೆಲಸ ನಿಯೋಜಿಸಿದರು. ಕಾವಲು ಕಾಯುವ ಮೊದಲಾದ ಕೆಲಸಗಳನ್ನು ಕೊಟ್ಟರು. ಯಾರು ಯಾರು ಯಾವ ಯಾವ ಕೆಲಸಮಾಡಬೇಕು ಎಂಬುದನ್ನು ಅವರವರಿಗೆ ತೋರಿಸಿಕೊಟ್ಟರು. ಜೈಲಿನಲ್ಲಿ ಒಳ್ಳೆಯ ಕೆಲಸ ಮಾಡಿದ ಪೊಲೀಸ್ ಅಧಿಕಾರಿಗಳ ಹೆಸರನ್ನು ನೋಟೀಸ್ ಬೋರ್ಡಿನಲ್ಲಿ ನಮೂದಿಸುವ ಹೊಸ ಪರಂಪರೆಯನ್ನು ಕಿರಣ್ ಬೇಡಿ ಹುಟ್ಟುಹಾಕಿದರು. ತಿಹಾರ್ ಜೈಲಿನಲ್ಲಿ ಇಂಗ್ಲೆಂಡಿನ ಒಬ್ಬ ಯುವತಿ ಸೆರೆಯಾಳಾಗಿದ್ದಳು. ಅವಳನ್ನು ಯಾರಾದರೂ ನೋಡಲು ಬಂದರೆ. ಅವರೊಡನೆ ಅವಳು ಮಾತಾಡಬೇಕೆಂದಿದ್ದರೆ, ಆಕೆ ಯಾರೋ ಅಧಿಕಾರಿಯ ಲೈಂಗಿಕ ತೃಷೆಗೆ ಈಡಾಗಬೇಕಾಗುತ್ತಿತ್ತು. ಈ ವಿಷಯವನ್ನು ಆಕೆ ಇಂಗ್ಲೆಂಡಿನಲ್ಲಿರುವ ತನ್ನ ಜನ್ಮದಾತರಿಗೆ ಪತ್ರ ಬರೆದು ತಿಳಿಸಿದಳು. ಹೆತ್ತವರು ಈ ವಿಷಯವನ್ನು ಕಿರಣ್ ಬೇಡಿಯವರ ಗಮನಕ್ಕೆ ತಂದರು. ಒಡನೆಯೇ ಕಿರಣ್ ಬೇಡಿಯವರು ಈ ಬಗ್ಗೆ ವಿಚಾರಣೆ ನಡೆಸಿ ತಪ್ಪಿತಸ್ಥ ಮಹಿಳಾ ಹೋಂಗಾರ್ಡ್‌ಳನ್ನು ಸಸ್ಪೆಂಡ್ ಮಾಡಿದರು.

ಕಿರಣ್ ಬೇಡಿಯವರ ಪ್ರಯತ್ನಗಳಿಂದ ತಿಹಾರ್ ಜೈಲಿನಲ್ಲಿ ಬದಲಾವಣೆಯ ಶುದ್ಧ

ಗಾಳಿ ಬೀಸತೊಡಗಿತು. ನಿರ್ಜೀವ ನೋಟದಿಂದ ಆಕಾಶದತ್ತ ಮುಖಮಾಡುತ್ತಿದ್ದ ಇಲ್ಲವೆ ಹರಟೆಯಲ್ಲಿ ಕಾಲದೂಡುತ್ತಿದ್ದ ಅಪರಾಧಿಗಳು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗುವಂತಾಯಿತು. ಜೈಲಿನಲ್ಲಿ ಕೈದಿಗಳಿಗೆ ವಿದ್ಯಾಭ್ಯಾಸ ವ್ಯವಸ್ಥೆ ಉಂಟಾಯಿತು. ಅಪರಾಧಿಗಳಲ್ಲೇ, ಕಲಿತವರಿಂದ ಇನ್ನಿತರ ಕೈದಿಗಳಿಗೆ ಶಿಕ್ಷಣ, ಇಂದಿರಾ ಗಾಂಧಿ ಮುಕ್ತ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಕೂರುವ ಸೌಲಭ್ಯ, ತರಬೇತಿ, ಸಂಗೀತ, ಹಾಡುಗಾರಿಕೆ, ನೃತ್ಯ, ನಾಟಕಾಭಿನಯಗಳಿಗೆ ಅವಕಾಶ ಉಂಟಾಯಿತು. ಸಂಜೆ ವೇಳೆ ಕ್ರಿಕೆಟ್, ಚೆಸ್, ಕೇರಂ ಮೊದಲಾದ ಆಟಗಳಿಗೆ ಅವಕಾಶ ದೊರೆಯಿತು. ಹೀಗೆ ನಿಷ್ಕ್ರಿಯರಾಗಿದ್ದ ಅಪರಾಧಿಗಳ ಬದುಕಿಗೆ ಕಿರಣ್ ಬೇಡಿ ಉಲ್ಲಾಸದ ಸ್ಪರ್ಶ ನೀಡಿದರು. ಅಪರಾಧಿಗಳಿಗಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವಂತಾಯಿತು ಆಧ್ಯಾತ್ಮಿಗಳ ಪ್ರವಚನಗಳು, ಪ್ರಾರ್ಥನೆ, ಭಜನೆಗಳು ಏರ್ಪಾಡಾದುವು. ಹೀಗಾಗಿ ತಿಹಾರ್ ಜೈಲು ತಿಹಾರ್ ಆಶ್ರಮವಾಗಿ ರೂಪುಗೊಂಡಿತು.

ಅಪರಾಧಿಗಳಿಗೆ ಹೊಲಿಗೆ ತರಬೇತಿ, ಮರಗೆಲಸ, ರೇಡಿಯೋ, ಟೆಲಿವಿಷನ್ ಕಾರ್ಯಾಗಾರ ಮೊದಲಾದ ಅನೇಕ ಬಗೆಯ ತರಬೇತಿಗಳನ್ನು ನೀಡುವ ವ್ಯವಸ್ಥೆ ಉಂಟಾಯಿತು. ಜೈಲಿನೊಳಗೆ ದುಡಿದು ಗಳಿಸುವ ಹಣವನ್ನು ಎಷ್ಟೋ ಮಂದಿ ಅಪರಾಧಿಗಳು ಬ್ಯಾಂಕಿನಲ್ಲಿ ಖಾತೆ ತೆರೆದು ತಮ್ಮ ಹಣ ಉಳಿಸುವಂತಾಯಿತು. ಅಪರಾಧಿಗಳೇ ಸೇರಿ ಒಂದು ಪತ್ರಿಕೆಯನ್ನು ಹೊರತರುವ ಸೌಲಭ್ಯ ಲಭಿಸಿತು. ಇಷ್ಟೆಲ್ಲ ಪರಿವರ್ತನೆಯ ಹಿಂದೆ ಕಿರಣ್ ಬೇಡಿಯವರ ಅವಿರತಶ್ರಮ, ದಕ್ಷತೆ, ಉತ್ಸಾಹ, ಧೈರ್ಯ ಅಡಗಿವೆ. ಅಪರಾಧಿಗಳ ಬಗ್ಗೆ ಮಾನವೀಯ ಅನುಕಂಪ, ಅವರ ಬದುಕನ್ನು ಸಹ್ಯವನ್ನಾಗಿಸುವ ಪ್ರಾಮಾಣಿಕ ಕಾಳಜಿ ಇವೆ.

ಕಿರಣ್ ಬೇಡಿ, ಪ್ರಚಾರಪ್ರಿಯೆ ಎಂಬ ಆರೋಪಮಾಡಿ ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಕೆಲಸವನ್ನು ಕೆಲವರು ಮಾಡಿದರು. ಆದರೆ ಇದಕ್ಕೆ ಕಿರಣ್ ಬೇಡಿ ಸೊಪ್ಪು ಹಾಕಲಿಲ್ಲ. ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಿಲ್ಲ. ಅವರ ಕಾರ್ಯಸಾಧನೆಯನ್ನು ಮೆಚ್ಚಿದ ಅಮೆರಿಕದ ಗೃಹಮಂತ್ರಿಯವರಿಂದ ಬೆಳಗಿನ ಉಪಾಹಾರಕ್ಕೆ ಆಹ್ವಾನ ಬಂದಿತು. ಯುನೈಟೆಡ್ ನೇಷನ್ಸ್‌ನಿಂದಲೂ ಗೌರವಾನ್ವಿತ ಆಮಂತ್ರಣ ಬಂದಿತು. ನೆಹರೂ ಫೆಲೋಷಿಪ್ ಕೂಡ ಲಭಿಸಿತು. ಇವೆಲ್ಲಕ್ಕಿಂತ ಮಿಗಿಲಾಗಿ ಮ್ಯಾಗ್ಸೆಸೆ ಪ್ರಶಸ್ತಿ ಲಭಿಸಿ, ೧೯೯೪ರಲ್ಲಿ ಇಡೀ ಏಷ್ಯಾಖಂಡವೇ ಕಿರಣ್ ಬೇಡಿಯವರ ಸಾಧನೆಯನ್ನು ಗುರುತಿಸಿತು.

೧೯೯೫ ಮೇ ೧೪ರಂದು ಕಿರಣ್ ಬೇಡಿಯವರಿಗೆ ವರ್ಗಾವಣೆಯಾಯಿತು. ತಿಹಾರ್ ಜೈಲಿನ ಅವರ ಪ್ರಯೋಗಗಳು ಒಂದೇ ವರ್ಷದಲ್ಲಿ ಕೊನೆಗೊಂಡವು.

ಮಕ್ಕಳ ಶಾಲೆ ಮನೆಯಲ್ಲೇ !

ಎಸ್. ರೋಹಿಣಿ ಶರ್ಮಾ

"ಅಮ್ಮಾ! ಸೌಮ್ಯ ನನ್ನ ಲಂಗ ಹರಿದಳು. ಅಮ್ಮಾ, ರಮಾ ನನ್ನ ಹೊಡೆದಳು. ಅಮ್ಮಾ ಸುರೇಶ ನನ್ನ ಆಟಕ್ಕೆ ಸೇರಿಸಿಕೊಳ್ಳುವುದಿಲ್ಲ ನೋಡಮ್ಮ. ಅಮ್ಮಾ, ರಘು ನನ್ನ ಪೆನ್ನು ಮುರಿದುಹಾಕಿದ್ದಾನೆ. ಬೇರೆ ಕೊಡಿಸಮ್ಮಾ." ಇಂಥ ದೂರುಗಳನ್ನು ನಮ್ಮ ಮಕ್ಕಳು ಆಟ ಆಡಲು ಹೊರ ಹೋಗಿ ಮನೆ ಒಳಗೆ ಬಂದಾಗ ಕೇಳಿ ಬಂದರೆ "ಅಮ್ಮಾ, ಅಕ್ಕ ನನಗೆ ಜಡೆ ಹಾಕುವುದಿಲ್ಲವಂತೆ, ಬರೆಯಲು ಪೆನ್ನು ಕೊಡುವುದಿಲ್ಲ. ಅಣ್ಣ, ಓದುವಲ್ಲಿ ಬರಬೇಡ ಎಂದು ಏಟು ಹಾಕುತ್ತಾನಮ್ಮ" ಎಂದು ಮನೆ ಒಳಗಿನ ದೂರು ಮಕ್ಕಳಿಂದ ಬರುವುದು ವಿಶೇಷವೇನಲ್ಲ. ತಾಯಂದಿರಿಗೆ ಮಕ್ಕಳ ಈ ಕಿರಿಕಿರಿ ತಲೆನೋವೇ ತರುವುದು. ಪ್ರತಿದಿನ ಮಕ್ಕಳಿಂದ ಬರುವ ಇಂಥ ನೂರಾರು ದೂರುಗಳಿಗೆ ಉತ್ತರ ಕೊಡುವವರಾರು? ಅಂಥ ಪರಿಸ್ಥಿತಿಯಲ್ಲಿ ಸಹನೆ ಕಳೆದುಕೊಳ್ಳದೆ ಅವರ ಹೇಳಿಕೆಗಳನ್ನು ನಿಧಾನವಾಗಿ ಕೇಳಿಸಿಕೊಂಡು ಅವರಿಗೆ ಅಷ್ಟೇ ಸರಳವಾಗಿ ಉತ್ತರ ನೀಡಿ ಅವರ ಗೊಂದಲವನ್ನು ಪರಿಹರಿಸುವುದು ಪ್ರತಿಯೊಬ್ಬ ತಾಯಿಯ ಕರ್ತವ್ಯ. ಆದ್ದರಿಂದ ಮಕ್ಕಳ ಮಾನಸಿಕ ವಿಕಾಸಕ್ಕೆ ಸಹಕರಿಸುತ್ತ ಅವರ ಮೇಲೆ ನಮ್ಮ ಅಭಿಪ್ರಾಯಗಳನ್ನು ಹೇರದೆ ಅವರ ವಯಸ್ಸಿಗನುಗುಣವಾಗಿ ಸೂಕ್ತ ಪರಿಸರ ನಿರ್ಮಿಸುವುದು ತಂದೆ-ತಾಯಿಯರ ಮುಖ್ಯ ಕೆಲಸವಾಗಿದೆ. ಆದ್ದರಿಂದಲೇ "ಮನೆಯೆ ಮೊದಲ ಪಾಠಶಾಲೆ, ಜನನಿತಾನೆ ಮೊದಲ ಗುರುವು" ಎನ್ನುವುದು.

ಬೆಳೆಯುವ ಮಕ್ಕಳಿಗೆ ಮನೆಯ ಪರಿಸರವಷ್ಟೇ ಸಾಲದು. ಬಾಹ್ಯ ಪರಿಸರದ ಪರಿಚಯವಾಗಬೇಕಾದರೆ ಮೂರನೆಯ ವರ್ಷಕ್ಕೆ ಮಗುವನ್ನು ಹತ್ತಿರದ ಬಾಲವಾಡಿಗೆ ಕಳುಹಿಸಬೇಕು. ಇದರಿಂದ ಸುಪ್ತವಾಗಿರುವ ಬುದ್ಧಿಶಕ್ತಿ, ಪ್ರತಿಭೆಗಳು ವಿಕಾಸಗೊಳ್ಳುತ್ತವೆ. ತಾಯಿ-ತಂದೆ-ಕುಟುಂಬದ ಮಧ್ಯೆ ಬೆಳೆದ ಮಗು ಹೊರ ಪ್ರಪಂಚಕ್ಕೆ ಬಂದಾಗ ಇತರ ಮಕ್ಕಳೊಡನೆ ಬೆರೆತು ಸೌಹಾರ್ದತೆ, ದೊಡ್ಡವರಾದ ಮೇಲೆ ನಾಲ್ಕು ಜನರೊಂದಿಗೆ ಹೊಂದಾಣಿಕೆ ಕಲಿಯುತ್ತಾರೆ.

ಕುತೂಹಲ ಮಾನವ ಸಹಜಗುಣ

ಮಕ್ಕಳ ಕುತೂಹಲಕ್ಕೆ ಕೊನೆಯಿರುವುದಿಲ್ಲ. ಕೆಲವೊಮ್ಮೆ ಅವರ ಕುತೂಹಲ ಕಂಡು ಬೆರಗಾದರೆ ಮತ್ತೆ ಕೆಲವೊಮ್ಮೆ ನಿಲ್ಲಿಸಿದರೆ

ಸಾಕಷ್ಟು ಎನಿಸುವುದೂ ಉಂಟು. ಅವು ನಿರಂತರವಾಗಿ ಪ್ರಶ್ನೆ ಕೇಳುತ್ತವೆ. 'ಏಕೆ?' ಎಂಬುದಾಗಿ ಪ್ರಾರಂಭವಾದ ಪ್ರಶ್ನೆ 'ಹೇಗೆ?' ಎಂಬ ರೂಪ ತಾಳುತ್ತವೆ. ಹೊಸ ವಸ್ತು, ಹೊಸ ವ್ಯಕ್ತಿಯನ್ನು ಕಂಡಾಗ ಮಗುವಿನ ಕುತೂಹಲ ಕೆರಳುತ್ತದೆ. ಆಗ ತಂದೆ-ತಾಯಿ ಆ ಮಗುವಿನ ಕುತೂಹಲಗಳಿಗೆ ಸಮಂಜಸ ಉತ್ತರ ಕೊಡದಿದ್ದರೆ, ಹೊರಗಿನ ಒತ್ತಡ, ಉತ್ತರ ದೊರೆಯದೆ ಇರುವ ಕಾರಣಕ್ಕೆ ಮನಸ್ಸು ಮುರುಟಿ ಹೋಗಲೂಬಹುದು. ವಸ್ತುಸ್ಥಿತಿಯನ್ನರಿಯಲು ಮಕ್ಕಳು ಕುತೂಹಲದಿಂದ ಪ್ರಶ್ನೆ ಕೇಳುತ್ತವೆ. ಬುದ್ಧಿ ವಿಕಾಸವಾದ ಹಾಗೆ ಆ ಪ್ರಶ್ನೆ ಕೇಳುವ ಅಭ್ಯಾಸ ಹೆಚ್ಚಾಗುತ್ತದೆ. ಮಗುವಿಗೆ ಸಮಂಜಸ ಉತ್ತರ ದೊರೆತಾಗ ಸಂತೃಪ್ತಿಯೂ, ದೊರೆಯದಿದ್ದಾಗ ಉತ್ಸಾಹ ಭಂಗವೂ ಮಕ್ಕಳಲ್ಲಿ ಉಂಟಾಗುತ್ತದೆ. ಕುತೂಹಲ ಹೆಚ್ಚಿದಷ್ಟೂ ಮಕ್ಕಳಬುದ್ಧಿ ಮತ್ತೆ ಹೆಚ್ಚುತ್ತದೆ. ತನಗೆ ಸುಖಕೊಡುವ ತನ್ನನ್ನು ಪ್ರೀತಿಸುವ ವ್ಯಕ್ತಿಯನ್ನು ಮಗು ಪ್ರೀತಿಸಲು ಕಲಿಯುತ್ತದೆ. ಮನುಷ್ಯರನ್ನು ಮಾತ್ರವಲ್ಲದೆ ಪ್ರಾಣಿಗಳನ್ನೂ ವಸ್ತುವನ್ನೂ ಪ್ರೀತಿಸಲು ತೊಡಗುತ್ತದೆ. ಪ್ರೀತಿಸುವ ಮನೋಭಾವ ಚೆನ್ನಾಗಿ ಬೆಳೆಯಲು ಮಕ್ಕಳು-ಮಕ್ಕಳಲ್ಲಿ ಅನ್ಯೋನ್ಯ ಬಾಂಧವ್ಯವಿರುವುದು ಅತ್ಯಾವಶ್ಯಕ. ಹಾಗೆಂದು ಅತಿಯಾದ ಪ್ರೀತಿ ಎಂದೂ ಒಳ್ಳೆಯದಲ್ಲ.

ಮಕ್ಕಳ ಮನಸ್ಸು ವಿಕಾಸವಾಗುತ್ತಲೇ ಇರುತ್ತದೆ. ಆದ್ದರಿಂದ ಆ ವಿಕಾಸದಲ್ಲಿ ಅವರ ಅಭ್ಯುದಯ, ನೋವು-ನಲಿವು ಮುಂತಾದ ಸಮಚಿತ್ತಗಳಿಗೆ ತಂದೆ-ತಾಯಿಯರೇ ಗಮನ ಕೊಡಬೇಕು. ಉತ್ತಮ ಸಾಮಾಜಿಕ ಸಂಪರ್ಕಗಳಿಗೆ ಅವಕಾಶ ಕಲ್ಪಿಸಿಕೊಟ್ಟು ಅವರಲ್ಲಿ ವೈವಿಧ್ಯಪೂರ್ಣವಾದ ಅಭಿರುಚಿಗಳು ಮತ್ತು ಸಾಮಾಜಿಕ ನೈಪುಣ್ಯಗಳು ಬೆಳೆಯಲು ಅನುವು ಮಾಡಿಕೊಡಬೇಕು. ಅನುಕರಣವೃತ್ತಿಗೆ ತಂದೆ-ತಾಯಿಯರೇ ಮಾದರಿಯಾಗುತ್ತಾರೆ. ಆದ್ದರಿಂದ ಉತ್ತಮ ಅಭಿರುಚಿ-ನಡೆನುಡಿಗಳನ್ನು ನಾವೂ ಕಲಿತು ಮಕ್ಕಳಿಗೂ ಕಲಿಸಬೇಕು. ಜಗಳ ಕಾಯುವುದು, ಹೊಡೆಯುವುದು ಚಿಕ್ಕ ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡುಬರುವ ವರ್ತನೆ. ತಮ್ಮ ಸಹೋದರ-ಸಹೋದರಿಯರು, ಸಹಪಾಠಿಗಳೊಂದಿಗೆ ಯಾವುದಕ್ಕಾದರೂ ಜಗಳ ಕಾಯುತ್ತಾರೆ. ಆ ಜಗಳ ಆಟದ ಸಾಮಾನಿನಿಂದಿರಬಹುದು, ಸುಮ್ಮ ಸುಮ್ಮನೆ ಒದೆಯುವುದು, ಕಚ್ಚುವುದು, ಚುಚ್ಚುವುದು ಆಗಿರಬಹುದು. ಆಗ ತಂದೆ ತಾಯಿ ಖಂಡಿತ ಮಧ್ಯ ಪ್ರವೇಶಿಸಬಾರದು. ಏಕೆಂದರೆ ಅಷ್ಟೇ ಆಶ್ಚರ್ಯಕರವಾಗಿ ಜಗಳ ಮಾಡಿದ ಮಕ್ಕಳು ಒಂದೆರಡು ನಿಮಿಷದಲ್ಲಿ ಎಲ್ಲವನ್ನೂ ಮರೆತು ಮತ್ತೆ ಆಟದಲ್ಲಿ ನಿರತರಾಗುವರು. ಪೆಚ್ಚಾಗುವವರು ನಾವೇ!

ಒಂಟಿಯಾದ ಮಕ್ಕಳಲ್ಲಿ ಸ್ವಾರ್ಥ ಪ್ರವೃತ್ತಿ, ಸ್ಪರ್ಧಾಮನೋಭಾವ ಹೆಚ್ಚಾಗಿರುತ್ತದೆ. ಆದರೆ ಇತರ ಮಕ್ಕಳೊಂದಿಗೆ ಬೆರೆತು-ಕಲೆತು-ಹೊಂದಿಕೊಂಡು ಆಟವಾಡಿದರೆ ಸ್ವಾರ್ಥಪರತೆ ಮಾಯವಾಗಿ ನಡವಳಿಕೆ ಪ್ರಬುದ್ಧವಾಗುತ್ತದೆ. ಹೊರಗಡೆ ನಾಲ್ಕು ಜನ ಮಕ್ಕಳೊಂದಿಗೆ ಆಟವಾಡಿಕೊಂಡಿರುವ ಮಕ್ಕಳಿಗೆ, ಮೇಲಿನ ವರ್ಗದ ಜನರಿಗೆ ಸ್ನೇಹಿತರು ಬಹಳ ಇರುತ್ತಾರೆ. ಹಸುಳೆತನದಲ್ಲಿ ಬಹುಮಟ್ಟಿಗೆ ಮನೆಯ ಒಳಗೇ ಇರು

ತ್ತಿದ್ದ ಮಗು ಕ್ರಮೇಣ ಮನೆಯ ಹೊರಗಿನವರೊಂದಿಗೂ ಹೊಂದಿಕೊಂಡು ಬೆಳೆಯುತ್ತದೆ. ತಂದೆ-ತಾಯಿಯನ್ನೇ ಅಂಟಿಕೊಂಡಿರಲು ಬಿಡದೆ, ಇತರೆ ಮಕ್ಕಳೊಡನೆ ಬೆರೆತು ಆಟ ಆಡಲು ಪ್ರೋತ್ಸಾಹಿಸಬೇಕು. ಇದರಿಂದ ಮಕ್ಕಳ ಸಹಜ ಬೆಳವಣಿಗೆಗೆ ದಾರಿಯಾಗುತ್ತದೆ. ಬದುಕಿನಲ್ಲಿ ಶಿಸ್ತನ್ನೂ, ಹೊಸ ಹೊಸ ವಿಷಯದ ಅನುಭವ ಪಡೆಯಲೂ ಅವಕಾಶವಾಗುತ್ತದೆ.

“ಸ್ನೇಹ” ಜೀವನಕ್ಕೆ ಸ್ಥಿರವಾದ ಬುನಾದಿ

ಸ್ನೇಹಿತರೇ ಇಲ್ಲದ ಬಾಳು ಬೀಳು. ಸ್ನೇಹಿತರೇ ಇಲ್ಲದ ಮಕ್ಕಳು ಆತಂಕ ಮತ್ತು ಅವಿಶ್ರಾಂತ ಭಾವದಿಂದ ಕೂಡಿರುತ್ತಾರೆ. ಸ್ನೇಹಿತರನ್ನು ಪಡೆಯಲು ವಿಫಲರಾದ ಮಕ್ಕಳು ಮನೆಯ ಸಾಕುಪ್ರಾಣಿಗಳೊಂದಿಗೆ ಕಾಲ ಕಳೆಯುತ್ತಾರೆ. ಸಾಕು-ಪ್ರಾಣಿ ಇಲ್ಲದಿದ್ದರೆ ಆಟದ ಸಾಮಾನುಗಳೇ ಅವರ ಗೆಳೆಯರಾಗಬಹುದು. ಪ್ರಾಕೃತಿಕ ವಸ್ತುಗಳ ಜ್ಞಾನವನ್ನೂ ನೈಪುಣ್ಯವನ್ನೂ ಗಳಿಸಿಕೊಳ್ಳುವುದರ ಜೊತೆಗೆ ಆಟದಿಂದ ಸಾಮಾಜಿಕ ರೀತಿನೀತಿಗಳ ಜ್ಞಾನವನ್ನು ಪಡೆದುಕೊಳ್ಳುತ್ತವೆ. ಸಾಮಾನ್ಯವಾಗಿ ಚಿಕ್ಕ ವಯಸ್ಸಿನಲ್ಲಿ ಹೆಣ್ಣು ಮಕ್ಕಳು ಆಡುವ ಆಟ ಗೊಂಬೆ ಆಟ. ಗೊಂಬೆ ಅವರ ಕೈಯಲ್ಲಿ ಜೀವಂತ ಪ್ರಾಣಿಗಳೂ-ವ್ಯಕ್ತಿಗಳೂ ಆಗುತ್ತಾರೆ. ಅವು ಗೊಂಬೆ ಜೊತೆ ಆಡುವಾಗ ಸ್ನಾನ ಮಾಡಿಸುವುದು, ಬಟ್ಟೆ ತೊಡಿಸುವುದು, ಹಾಲು ಕುಡಿಸುವುದು, ಜೋಗುಳ ಹಾಡಿ ಮಲಗಿಸುವುದು ಮುಂತಾದ ವಾಸ್ತವಿಕ ಜೀವನದ ದೃಶ್ಯಗಳನ್ನು ಅಭಿನಯಿಸುತ್ತವೆ. ಮಕ್ಕಳು ಆಡುವಾಗ ಮಗುವಿನ ತಂದೆ-ತಾಯಿಯರು ಮಗುವಿಗೆ ಪ್ರೇರಕ ಶಕ್ತಿಯಾಗಬೇಕು. ಮಕ್ಕಳೊಡನೆ ಪೋಷಕರೂ ಆಟವಾಡಿ ನಕ್ಕುನಲಿದಾಗ ಅವು ಸಂತೋಷಪಡುತ್ತವೆ. ಮಣ್ಣು ಮಕ್ಕಳ ಪ್ರೀತಿಯ ಆಟದ ವಸ್ತು, ಮರಳಿನಲ್ಲಿ ಗೂಡು ಕಟ್ಟುವುದು, ಮಣ್ಣಿನಲ್ಲಿ ಮನೆ ಕಟ್ಟುವುದು, ಮಣಿ, ಬಳೆಚೂರು, ಕಾಗದ ಮುಂತಾದವುಗಳನ್ನು ಆಟಿಕೆಗಳಾಗಿ ಉಪಯೋಗಿಸುತ್ತವೆ. ಎಷ್ಟೇ ಬೆಲೆ ಬಾಳುವ ಆಟಿಕೆ ಕೊಡಿಸಿದರೂ ಪ್ರಕೃತಿದತ್ತ ಕೊಡುಗೆಯೇ ಅವಕ್ಕೆ ಪ್ರಿಯವಾಗುತ್ತದೆ. ಕಾಗದ, ಸೀಸದ ಕಡ್ಡಿ ಉಪಯೋಗಿಸಿಕೊಂಡು ತಮ್ಮದೇ ಆದ ರೇಖಾಚಿತ್ರ ಬಿಡಿಸುತ್ತವೆ. ಇದಕ್ಕೆ ಹೆತ್ತವರೂ ಪ್ರೋತ್ಸಾಹ ನೀಡಿದರೆ ಸುಪ್ತವಾಗಿರುವ ಕಲೆ ಅರಳೀತು.

ಸರಿ ತಪ್ಪುಗಳ ಪ್ರಜ್ಞೆ

ಸಾಮಾಜಿಕ ರೀತಿನೀತಿಗಳಿಗೆ ಅನುಗುಣವಾಗಿ ನಡೆಯಲು ಮಕ್ಕಳಿಗೆ ಕಲಿಸುವುದೇ ಶಿಸ್ತಿನ ಪ್ರಮುಖ ಗುರಿ. ಮಕ್ಕಳು ತಪ್ಪು ಮಾಡಿದರೆ ಹಿರಿಯರು ಮುಖಮೂತಿ ನೋಡದೆ ಹೊಡೆಯುತ್ತಾರೆ. ಕೊಠಡಿಯಲ್ಲಿ ಒಂಟಿಯಾಗಿ ಬಿಡುವುದು, ಪ್ರೀತಿಸುವುದಿಲ್ಲವೆಂದು ಬೆದರಿಸುವುದು, ಗುಮ್ಮ ಬಂದನೆಂದು ಬೆದರಿಸುವುದು ಪ್ರಮುಖ ಶಿಸ್ತಿನ ಕ್ರಮಗಳು. ಹೆದರಿಸಿ-ಬೆದರಿಸಿ ಮಕ್ಕಳನ್ನು ಉತ್ತಮದಾರಿಗೆ ತರಲು ಸಾಧ್ಯವಿಲ್ಲ. ತಪ್ಪು ಮಾಡಿದಾಗಲೇ ತಪ್ಪನ್ನು ಅಲ್ಲೇ ತಿದ್ದಿ, ಬೇಕೆನಿಸಿದರೆ ಸಣ್ಣ ಶಿಕ್ಷೆ ಕೊಟ್ಟು ಪ್ರೀತಿಯಿಂದ ಸರಿದಾರಿಗೆ ತರಬೇಕು.


ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗದು

ಚಿಕ್ಕಂದಿನಲ್ಲಿ ಉತ್ತಮ ನಡವಳಿಕೆಗಳನ್ನು ಕಲಿಸದಿದ್ದರೆ ದೊಡ್ಡವರಾದ ಮೇಲೆ ಸ್ವಾರ್ಥಬುದ್ಧಿ, ದೌರ್ಜನ್ಯಕಾರಿ ಪ್ರವೃತ್ತಿ, ಬೇರೆಯವರಿಗೆ ಕಿರುಕುಳ ಕೊಡುವುದು ಬೆಳೆದುಬರುತ್ತದೆ. ಅತಿ ಹೆಚ್ಚಿನ ಶಿಸ್ತು ಆಕ್ರಮಣಕಾರಿ ಪ್ರವೃತ್ತಿಗೆ ದಾರಿ. ಸ್ವತಂತ್ರ ಹಾಗೂ ಹಿತಕರವಾದ ವಾತಾವರಣದಲ್ಲಿ ವಿವೇಚನೆಯಿಂದ ಕೂಡಿದ ಚೌಕಟ್ಟಿನಲ್ಲಿ ಬೆಳೆದ ಮಕ್ಕಳು ತಮ್ಮನ್ನು ತಾವೇ ನಿಯಂತ್ರಿಸಿಕೊಳ್ಳುವುದನ್ನು ಕಲಿಯುತ್ತಾರೆ. ತನ್ನ ತಂದೆ ತಾಯಿಗಳು, ಒಡಹುಟ್ಟಿದವರು, ಕುಟುಂಬದ ಇತರ ಸದಸ್ಯರೊಂದಿಗೆ ಉತ್ತಮ ನಡೆನುಡಿಯಿಂದ ಕೂಡಿರುವ ಮಕ್ಕಳು ತಮ್ಮ ಕುಟುಂಬದ ಸದಸ್ಯರುಗಳನ್ನೇ ಅದರಲ್ಲಿಯೂ ಹೆಚ್ಚಾಗಿ ತಂದೆತಾಯಿಗಳ ಅಭಿರುಚಿ, ನಡವಳಿಕೆಗಳನ್ನು ತನ್ನ ಆದರ್ಶವನ್ನಾಗಿ ಸ್ವೀಕರಿಸುತ್ತವೆ. ಮಕ್ಕಳಲ್ಲಿ ಉತ್ತಮವಾದ ಜೀವನ ಮೌಲ್ಯಗಳು ಬೆಳೆಯಬೇಕಾದರೆ ತಂದೆ ತಾಯಿಗಳ ನಡುವೆ ಸಾಮರಸ್ಯವಿರಬೇಕು. ಕುಟುಂಬದಲ್ಲಿ ತಮ್ಮ ಸ್ಥಾನಮಾನಗಳನ್ನು ಅರಿತು ನಡೆಯಲು ಮಕ್ಕಳಿಗೆ ಕುಟುಂಬದ ಸದಸ್ಯರೇ ನೆರವಾಗಬೇಕು. ಒಡಹುಟ್ಟಿದವರೊಂದಿಗೆ ಸಹಚರ್ಯ ಮಧುರವಾಗಿದ್ದರೆ ಮಕ್ಕಳ ವೈಯಕ್ತಿಕ ಮತ್ತು ಸಾಮಾಜಿಕ ಹೊಂದಾಣಿಕೆಗಳು ಹೆಚ್ಚು ಸುಲಭವಾಗಲು ಸಾಧ್ಯ. ತಾಯಿಯು ಮಕ್ಕಳ ಮೇಲೆ ತೋರುವ ಪ್ರೀತಿವಾತ್ಸಲ್ಯಗಳು ಅವರನ್ನು ಉಪಚರಿಸುವ ರೀತಿನೀತಿ ಮಕ್ಕಳ ವಿಕಾಸದ ಮೇಲೆ ಗಾಢ ಪ್ರಭಾವ ಬೀರುತ್ತವೆ. ತಂದೆ ತಾಯಿಗಳು ತಮ್ಮ ಮಕ್ಕಳಲ್ಲೇ ಭೇದಭಾವ ಖಂಡಿತ ಮಾಡಬಾರದು. ಮಕ್ಕಳೆಲ್ಲರನ್ನೂ ಸಮಾನಭಾವದಿಂದ ಕಾಣಬೇಕು. ಮಕ್ಕಳ ಸಹಜ ಪ್ರವೃತ್ತಿಗಳಿಗೆ, ಅಭಿರುಚಿಗಳಿಗೆ ಪೂರಕವಾದ ಯೋಜನೆ ರೂಪಿಸಿ ಹೊಸತನ್ನು ತಂದು ಮನೋವಿಕಾಸಕ್ಕೆ ಅನುವು ಮಾಡಿಕೊಡುವುದೇ ಹಿರಿಯರು ಹೊರಬೇಕಾದ ಜವಾಬ್ದಾರಿ. ಮಕ್ಕಳ ಸುಖ ಸಂತೋಷಗಳು ಕುಟುಂಬ ಪರಿಸರವನ್ನು ಬಹುವಾಗಿ ಅವಲಂಬಿಸುತ್ತವೆ. ಒಳ್ಳೆಯ ಆಹಾರ, ಸಕಾಲಕ್ಕೆ ನಿದ್ದೆ, ವಿಶ್ರಾಂತಿ, ಆಟಗಳು ಸರಿಯಾಗಿ ದೊರೆತರೆ ಉತ್ತಮವಾಗಿ ಆರೋಗ್ಯವಂತರಾಗಿ ಬೆಳೆಯಲು ಅನುಕೂಲವಾಗುತ್ತದೆ. ತಂದೆತಾಯಿ ಮಕ್ಕಳ ಆರೋಗ್ಯ, ಮೂಲ ಅಗತ್ಯಗಳ ಜೊತೆ ಸೌಹಾರ್ದಪೂರ್ಣವಾದ ಪ್ರೀತಿವಾತ್ಸಲ್ಯದಿಂದ ಕೂಡಿದ ವಾತಾವರಣ ಸೃಷ್ಟಿಸಬೇಕು. ಕೆಲವು ಮಕ್ಕಳಿಗೆ ಶಿಷ್ಟಾಚಾರದ ಕಲ್ಪನೆಯೇ ಇರುವುದಿಲ್ಲ. ಗುರುಹಿರಿಯರ ಜೊತೆ, ಓರಗೆಯವರ ಜೊತೆ ಹೇಗೆ ನಡೆದುಕೊಳ್ಳಬೇಕೆಂಬ ನಡತೆಯೇ ಗೊತ್ತಿರುವುದಿಲ್ಲ. ತಂದೆತಾಯಿಗಳು ಸರಿಯಾದ ವಯಸ್ಸಿನಲ್ಲಿ ಸೂಕ್ತ ಮಾರ್ಗದರ್ಶನ ನೀಡಬೇಕು. ಇದರಿಂದ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಬಾಳಲು ಸಾಧ್ಯ. ರಾಷ್ಟ್ರಪ್ರೇಮ, ರಾಷ್ಟ್ರೀಯ ಭಾವನೆಗಳನ್ನು ಚಿಕ್ಕಂದಿನಿಂದಲೇ ಬೋಧಿಸಬೇಕು.

ಮನೆಯೇ ಮಕ್ಕಳ ಜಗತ್ತು. ಈ ಜಗತ್ತಿನಲ್ಲಿ ಅವರ ಬೆಳವಣಿಗೆ ಸರ್ವತೋಮುಖವಾದ ಪ್ರಗತಿಗೆ ಫಲವತ್ತಾದ ಹಾಗೂ ಹಿತಕರ ವಾತಾವರಣವಿರುವುದು ಬಹುಮುಖ್ಯ. ಎಳೆಯ ಹೃದಯಕ್ಕೆಂದೂ

ನೋವಾಗದಂತೆ ನೋಡಿಕೊಳ್ಳಬೇಕು. ಇಂದಿನ ನಡವಳಿಕೆಯ ಪ್ರತಿಬಿಂಬ ನಾಳಿನ ಮಕ್ಕಳಲ್ಲಿ ಕಾಣುತ್ತೇವೆ. ಇಂದಿನ ಕಿರಿಯರೇ ನಾಳಿನ ಹಿರಿಯರು; ತಂದೆತಾಯಿಗಳೇ ಮಕ್ಕಳ ಶಿಕ್ಷಕರು.

ಮಕ್ಕಳು ಸಮಾಜದ ಸುಂದರ ಸ್ವತ್ತು. ಮನೆ ತುಂಬ ಮಕ್ಕಳನ್ನು ಬೆಳೆಸದೆ ಇದ್ದವನ್ನೇ ಮುದ್ದಾಗಿ ಬೆಳೆಸಿ ನಾಡಿನ ಸತ್ಪ್ರಜೆಯನ್ನಾಗಿ ಬೆಳೆಸುವುದೇ ನಮ್ಮೆಲ್ಲರ ಆದ್ಯ ಕರ್ತವ್ಯ.



ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ !
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ !

ನಮ್ಮ ತಪ್ಪನೆನಿತೊ ತಾಳ್ವೆ,
ಅಕ್ಕರೆಯಿಂದೆಮ್ಮ ನಾಳ್ವೆ;
ನೀನೆ ಕಣಾ ನಮ್ಮ ಬಾಳ್ವೆ,
ನಿನ್ನ ಮರೆಯಲಮ್ಮೆವು—

ತನು ಕನ್ನಡ, ಮನ ಕನ್ನಡ, ಧನ ಕನ್ನಡವೆಮ್ಮವು.

—ಎಂ. ಗೋವಿಂದ ಪೈ

ಬೆಳ್ಳಿಯ ದೀಪಗಳು

ಟಿ. ಎಸ್. ಲಲಿತ

ಎಷ್ಟೊಂದು ನಿಶ್ಶಬ್ದತೆ ಗುಡ್ಡಗಳ ಮೇಲೆ ....ಎಷ್ಟೊಂದು ನಿಶ್ಚಲತೆ. ತನ್ನ ಆಹಾರವನ್ನು ಹುಡುಕುತ್ತಿರುವ ಕಾಗೆಯಂತೆ ಮೌನ ಸುಳಿದಾಡುತ್ತ ಬಂದು ಮೇಲೆರಗುವಂತಿತ್ತು. ಚಿಕ್ಕ ಬೂದು ಬಣ್ಣದ ಗುಡಿಯ ಮೇಲೆ, ಹಿಂದಿನ ಗುಡ್ಡಸಾಲು, ನಿದ್ರೆ ಮಾಡುವಂತೆ ನಟಿಸುವ, ವೃದ್ಧ, ಕುಟಿಲ ಕಾವಲುಗಾರರಂತೆ ಕಾಣುತ್ತಿದ್ದವು.

ಎಲ್ಲವನ್ನೂ ಅವಲೋಕಿಸೋಣ. ಹೊಸದಾಗಿ ದೇವಸ್ಥಾನದ ಪೂಜಾರಿಯಾಗಿ ನೇಮಕಗೊಂಡು ೩೦ ವರ್ಷಗಳ ಹಿಂದೆ ನಾನಿಲ್ಲಿಗೆ ಬಂದೆ. ಅತಿ ಕಡಿಮೆ ಸಂಬಳ ಬರುವ ಪೂಜಾರಿಯ ಕೆಲಸ ಸಿಕ್ಕಿದ್ದು, ನನ್ನ ಅದೃಷ್ಟವೆಂದೇ ಎಲ್ಲರ ಹೇಳಿಕೆ. ಆದ್ದರಿಂದಲೇ ಆಗಿನಿಂದಲೂ ನಾನಿಲ್ಲಿ ಉಳಿವಿರುವೆನೆ?

ಹೌದು, ಅವಳು ನನ್ನ ಹೆಂಡತಿ–ಇನ್ನೂ ಇಪ್ಪತ್ತರವಳೇನಲ್ಲ. ಬಾಗಿಲ ಮೆಟ್ಟಿಲ ಮೇಲೆ ಕುಳಿತಾಗ ಅವಳೇನು ಯೋಚಿಸುತ್ತಿರಬಹುದೆಂದು ಆಶ್ಚರ್ಯ ಪಡುತ್ತೇನೆ. ಅವಳು ಯಾವಾಗಲೂ ತನ್ನಷ್ಟಕ್ಕೆ ತಾನೇ ಇರುವ ಮೌನದ ವ್ಯಕ್ತಿ. ನನ್ನ ಸ್ವಭಾವವೇ ಬೇರೆ–ಮಾತನಾಡುವುದೆಂದರೆ ನನಗೆ ಆನಂದ. ಇತರರು ಹೇಳಬಯಸುವುದನ್ನು ಗಮನವಿಟ್ಟು ಕೇಳುತ್ತೇನೆ. ವೈವಿಧ್ಯವಿಲ್ಲದ, ನೀಳ ಸಂಜೆಗಳ ಮಂಕುತನವನ್ನು ಹೋಗಲಾಡಿಸಲು, ನನ್ನವಳನ್ನು ಏನಾದರೂ ಮಾತಾಡುವಂತೆ ಒತ್ತಾಯಿಸುತ್ತೇನೆ.

"ಯಾವುದರ ಬಗ್ಗೆ ಮಾತಾಡಬೇಕೆಂದು ನೀವು ಬಯಸುತ್ತೀರಿ?" ಎನ್ನುವ ಅವಳು ತನ್ನ ಮೃದು ಮಂದಹಾಸವನ್ನು ಸೂಸುತ್ತಾಳೆ. ಮೂವತ್ತು ವರ್ಷಗಳ ನಂತರವೂ ನಾನವಳನ್ನು ಅರ್ಥಮಾಡಿಕೊಂಡಿಲ್ಲವೆಂದು ನನಗನಿಸುತ್ತದೆ. ಗುಡ್ಡಗಳಲ್ಲಿ ಅವಿತುಕೊಂಡಿರುವ, ಗುಡಿಯ ಪೂಜಾರಿಯನ್ನು ಮದುವೆಯಾದುದಕ್ಕೆ ಅವಳು ವಿಷಾದಿಸುತ್ತಾಳೆಯೆ?

ತಾವು ಕಾಯುವ ನಾಚಿಕೆಯ ಸ್ವಭಾವದ, ಅರೆಹೊಟ್ಟೆಯ ಕುರಿಗಳಂತೆಯೇ ಸಾಧು ಸ್ವಭಾವದವರು, ಈ ಹಳ್ಳಿಯ ಜನ. ಹಾಲು ಹಾಗೂ ಆಹಾರ ಸಾಮಗ್ರಿ ಮುಂತಾದ ನನ್ನ ಅವಶ್ಯಕತೆಗಳನ್ನೇನೋ ಅವರು ಪೂರೈಸುತ್ತಿದ್ದರು. ಆದರೆ ಅವರು ಆತ್ಮೀಯ ಸ್ನೇಹಿತರಾಗಲಾರರು. ದೇವಾಲಯದ ಪೂಜಾರಿ 'ಜ್ಞಾನಿ' ಹಾಗೂ

ಬಿ. ಜಾರಿ ಅವರ 'ದ ಸಿಲ್ವರ್ ಲ್ಯಾಂಪ್ಸ್' ಎಂಬ ಇಂಗ್ಲಿಷ್ ಕಥೆಯ ಅನುವಾದ.

‘ಕಲಿತವರು’ ಎಂದು ಅವರು ನನ್ನ ಬಗ್ಗೆ ಗೌರವದಿಂದ ಯೋಚಿಸಿದ್ದರು. ನಾನು ಪ್ರತಿ ದಿನ ಅಲ್ಲಿಯ ಮೂರ್ತಿಯ ಪುಟ್ಟ ಕಲ್ಲು ಪ್ರತಿಮೆ ಎದುರು ಯಾವ ಸ್ತೋತ್ರಗಳನ್ನು ಪಠಿಸುತ್ತಿದ್ದೆನೋ ಅದಕ್ಕಿಂತ ಹೆಚ್ಚು ನನಗೇನೂ ತಿಳಿದಿಲ್ಲ. ಅದನ್ನು ಭಗವಂತ ಬಲ್ಲ. ಬಹುಶಃ ನನ್ನ ಹೆಂಡತಿಗೂ ಗೊತ್ತಿರಬಹುದು.

ದೇವಸ್ಥಾನಕ್ಕೆ, ಆ ದೀಪಗಳನ್ನು ಕಾಣಿಕೆಯಾಗಿ ಸಮರ್ಪಿಸಿದ ದಿನ ಜೋರಾಗಿ ಮಳೆ ಸುರಿಯುತ್ತಿತ್ತು. ಆದ್ದರಿಂದಲೇ ಕಾರೊಂದರಲ್ಲಿ ಗುಡ್ಡದ ಮೇಲೆ ಬಂದ ಆ ಮುದುಕನನ್ನು ಬೇರಾರೂ ನೋಡಿರಲಿಲ್ಲ. ಹಲ್ಲಿಲ್ಲದೆ ಬಾತುಕೊಂಡ ಕಣ್ಣುಗಳನ್ನು ಹೊಂದಿದ್ದ ಆತ ತೀರ ಮುದುಕನಾಗಿದ್ದ. ಆತ ನನಗೆ ಕೊಟ್ಟ ದೀಪಗಳು, ಆಕಾರದಲ್ಲಿ ದೊಡ್ಡದಾಗಿರಲಿಲ್ಲವಾದರೂ ಸೂಕ್ಷ್ಮವಾದ ಕುಸುರಿ ಕೆಲಸದಿಂದ ಕೂಡಿದ್ದವು.

ದೀಪಗಳು ಸುಂದರವಾಗಿವೆಯಲ್ಲವೆ ?” ಎಂದಾತ ಕೇಳಿದ.

“ವಂಶಪಾರಂಪರ್ಯವಾಗಿ ಬಂದ ಸ್ವತ್ತು ಅದು ಆದರಿಂದಲೇ ನಾನವುಗಳನ್ನು ದೇವರಿಗೆ ಸಮರ್ಪಿಸುತ್ತಿದ್ದೇನೆ.”

ತನ್ನ ಕಾಣಿಕೆಯನ್ನರ್ಪಿಸಲು ಅವನು ಈ ದೇವಸ್ಥಾನವನ್ನೇ ಏಕೆ ಆರಿಸಿಕೊಂಡನೆಂದು ನಾನು ಆಶ್ಚರ್ಯಪಟ್ಟೆ.

“ನಾನು ಮಗುವಾಗಿದ್ದಾಗಿನಿಂದಲೂ ನನ್ನ ತಂದೆಯೊಂದಿಗೆ ಆಗಾಗ್ಗೆ ಇಲ್ಲಿಗೆ ಬರುತ್ತಿದ್ದೆ. ಮನುಷ್ಯ ಮುದುಕನಾದಾಗ, ಅದರಲ್ಲೂ ವಿಶೇಷವಾಗಿ, ಅವನು ಸಾಯುವುದರಲ್ಲಿರುವಾಗ ದೇವರನ್ನು ಪುನಃ ಜ್ಞಾಪಿಸಿಕೊಳ್ಳುತ್ತಾನೆ.... ನನಗೀಗ ೯೫ ವರ್ಷಗಳು. ಅವರು ಆ ವೈದ್ಯರುಗಳು ನಾನು ಬದುಕುವುದು ಇನ್ನು ಕೆಲವೇ ತಿಂಗಳುಗಳಿಗಿಂತ ಹೆಚ್ಚಿಲ್ಲವೆನ್ನುತ್ತಾರೆ.”

ನಾನು ಆ ದೀಪಗಳನ್ನು ಹಚ್ಚುವಾಗ, ಆತ ಕಂಬಕ್ಕೊರಗಿ ಕುಳಿತುಕೊಳ್ಳುತ್ತಿರುವಂತೆಯೇ ಅವನ ಉಸಿರಾಟ ಭಾರವಾಗಿ, ನೋವಿನಿಂದ ಕೂಡಿತ್ತು. ಆತನ ಕಾರಿನ ಚಾಲಕ, ನನ್ನ ಮನೆಯ ಪಡಸಾಲೆಯಲ್ಲಿ ಕುಳಿತು ಹಲ್ಲನ್ನು ಕಡ್ಡಿಯಿಂದ ಚುಚ್ಚುತ್ತ, ಮಳೆಯನ್ನೇ ದೃಷ್ಟಿಸುತ್ತಿದ್ದ.

ಒಂದು ವರ್ಷದ ವರೆಗೂ ನಾನು ಆ ಬೆಳ್ಳಿಯ ದೀಪಗಳನ್ನು ದಿನಕ್ಕೆರಡು ಬಾರಿ ಹಚ್ಚಿ ವಾರಕ್ಕೊಂದು ಬಾರಿ ಅವುಗಳಿಗೆ ಮೆರಗು ಕೊಡುತ್ತಿದ್ದೆ. ವಾರಗಳ ನಂತರ ವಾರಗಳು, ಶಾಂತವಾಗಿ ಉರುಳಿಹೋದರೂ ಇದ್ದಕ್ಕಿದ್ದಂತೆ ಮಂದಹಾಸದಿಂದ ಬೆಳಗುವ ಮಗುವಿನಂತೆ, ಅಲ್ಲಿನ ಮೌನವನ್ನು ಒಡೆಯುವಂತಹ ಯಾವುದೋ ಆಘಾತ ಅಥವಾ ಶಬ್ದಗಳು ಅನಿರೀಕ್ಷಿತವಾದ ಉದ್ರೇಕ, ಒಂದೂ ಹೊರ ಹಣುಕುವಂತೆ ಕಾಣಲಿಲ್ಲ.

ಆದ್ದರಿಂದಲೇ ನಾನವುಗಳನ್ನು ಮಾರಿದೆ. ಆ ದೀಪಗಳನ್ನು–ಗುಡ್ಡಗಳ ಮೌನವನ್ನು ಬೇಧಿಸುವುದಕ್ಕಾಗಿ. ಅವು ನನಗೆ ಸಾಕಷ್ಟು ಹಣವನ್ನು ತಂದುಕೊಟ್ಟವು. ಎಚ್ಚರಿಕೆಯನ್ನು ಗಾಳಿಗೆ ತೂರಿ, ಚಿತ್ರ ವಿಚಿತ್ರ ಕೆಲಸಗಳನ್ನು ಮಾಡಲು ನಾನು ಇಷ್ಟಪಟ್ಟೆ. ನನ್ನ ಹೆಂಡತಿಗಾಗಿ ಒಂದು ರೇಷ್ಮೆಯ ಸೀರೆಯನ್ನು ಕೊಂಡು ತಂದೆ. ಅದೊಂದು ಮೂರ್ಖತನದ ಉಡುಗೊರೆಯೇ ಆಗಿತ್ತು. ಅದನ್ನಾಕೆ ಮನೆಯಲ್ಲಿ ಉಡುವಂತಿರಲಿಲ್ಲ ಹಾಗೂ ನಾವು ಬೇರೆಲ್ಲೂ ಹೊರಗೆ ಹೋಗುತ್ತಿರಲಿಲ್ಲ. ಆದರೆ ಒಂದು ಕ್ಷಣ ಅವಳ ಕಣ್ಣು

ಗಳು ಸಂತೋಷದಿಂದ ಮಿನುಗಿದವು, ಪುನಃ ಅನೇಕ ವರ್ಷಗಳ ಹಿಂದಿನ ನವ ವಧುವಿನಂತಾಗಿದ್ದಳು ಅವಳು!

ಉಳಿದ ಹಣದಲ್ಲಿ ನಾನು ಹಲವಾರು ವರ್ಷಗಳಿಂದ ಆಸೆಪಡುತ್ತಿದ್ದ, ಹೊಳೆಯುವ ಕಪ್ಪು ಟ್ರಾನ್ಸಿಸ್ಟರ್ ಒಂದನ್ನು ಕೊಂಡೆ. ಕಡೆಗೂ ಮೌನವನ್ನು ಅಣಕಿಸುವಂತೆ, ನೂರಾರು ಸಣ್ಣ ಸ್ವರಗಳನ್ನು ಈಗ ಕೇಳಬಹುದಾಗಿತ್ತು.

ಹೌದು–ನನ್ನ ಹೆಂಡತಿ, ಆ ದೀಪಗಳಿಲ್ಲವಾಗಿರುವುದನ್ನು ಗಮನಿಸಿದ್ದಳು ಮತ್ತು ನಾನೇನು ಮಾಡಿದೆನೆಂಬುದನ್ನು ತಿಳಿದುಕೊಂಡಿದ್ದಳು. ಅವಳು ಕಳವಳಗೊಂಡಂತೆ ಕಂಡರೂ ಒಂದು ಮಾತನ್ನೂ ಆಡಲಿಲ್ಲ.

ನಾನು ಮದುವೆ ಮಾಡಿಕೊಂಡ ಈ ಹೆಂಗಸು ವಿಚಿತ್ರ ಸ್ವಭಾವದವಳು ಎಂದು ನಾನು ಬೆರಗಾದೆ.

ಐದು ವರ್ಷಗಳ ಅನಂತರ, ಮೂರಲು ಆ ದೀಪಗಳು ನನ್ನವಾಗಿರಲಿಲ್ಲವೆನ್ನುವ ವಿಷಯವನ್ನು ನಾನು ಸಂಪೂರ್ಣ ಮರೆತೇ ಬಿಟ್ಟಿದ್ದೇನೆ. ನನ್ನ ಹೆಂಡತಿ ಸಹ ಅದನ್ನು ಜ್ಞಾಪಿಸುವುದಿಲ್ಲ.

ಅದೊಂದು ಬೇಸಗೆಯ ಸಂಜೆ. ನಾನು ನನ್ನ ಪ್ರಾರ್ಥನೆ ಸಲ್ಲಿಸಿ ರೇಡಿಯೋ ಕೇಳುತ್ತ, ವರಾಂಡದಲ್ಲಿ ವಿಶ್ರಮಿಸುತ್ತಿದ್ದೆ. ನನ್ನ ಹೆಂಡತಿ ಅಡುಗೆ ಮಾಡುತ್ತಿರುವಾಗ, ಪಾತ್ರೆಗಳು ಖಣಿಲ್ಲೆಂದು ಶಬ್ದ ಮಾಡುತ್ತಿವೆ. ಆದರೆ ಆ ಮತ್ತೊಂದು ಶಬ್ದ-ಯಾವುದು? ಸಣ್ಣ ಶಕ್ತಿಯುತವಾದ ಯಾವುದೋ ವಸ್ತು ಗುಡ್ಡದ ಮೇಲೇರಿ ಬರುತ್ತಿದೆ. ಒಂದು ಮೋಟಾರ್‌ಕಾರ್ ಮತ್ತು ಅದರ ಹಿಂದೆ ಹಳ್ಳಿಯ ಜನರ ಗುಂಪೊಂದು ಓಡಿ ಬರುತ್ತಿದೆ. ಒಬ್ಬ ಅಭ್ಯಾಗತ–ಅದೂ ಒಂದು ಕಾರಿನಲ್ಲಿ! ಎರಡೂ ಇಲ್ಲಿ ಆಸಕ್ತಿ ಕೆರಳಿಸುವಂತಹ, ಅಪರೂಪದ ವಿಷಯಗಳೇ ಸರಿ.

ಆ ಮುದುಕನಿಗೆ ನೂರು ವರ್ಷಗಳ ಮೇಲಾಗಿರಬಹುದು ಮತ್ತು ಅವನೊಂದಿಗೆ ಇರುವ ಯುವಕ, ಬಹುಶಃ ಅವನ ಮೊಮ್ಮಗನಿರಬಹುದು. ಅವನು ಪಡಸಾಲೆಯಲ್ಲಿ ಕುಳಿತುಕೊಳ್ಳುತ್ತಾನೆ. ಪ್ರಜ್ಞಾವಂತನಾದ ಮುದಿ ಕವಿಯ ಹೆಣದಂತಿದ್ದ ಅವನನ್ನು ಕುರಿಗಾಹಿಗಳು ದೂರ ನಿಂತು ನೋಡುತ್ತಿದ್ದಾರೆ.

ಅವನ ಧ್ವನಿ ಎತ್ತರವಾಗಿಯೂ, ಮಗುವಿನದರಂತೆ ತೀಕ್ಷ್ಣವಾಗಿಯೂ ಇದೆ.

"ನೀವು ನೋಡುತ್ತಿರುವಂತೆ, ನಾನಿನ್ನೂ ಬದುಕಿದ್ದೇನೆ ಪೂಜಾರಿ!" ಎಂದು ಹೆಮ್ಮೆಯ ನಗೆ ನಗುತ್ತಾನೆ ಮುದುಕ.

"ಆದರೆ ನಾನು ಮುದುಕನಾಗಿದ್ದೇನೆ. ಇನ್ನೊಂದು ತಿಂಗಳು ಅಥವಾ ಮೇಲೊಂದು ದಿನ ಹೆಚ್ಚು....", ಹೆಮ್ಮೆಯ ಲೇಪನದೊಂದಿಗೆ ಮುಂದುವರೆಸುತ್ತಾನೆ.

"ನಾನು ದೀಪಗಳನ್ನು ನೋಡುವುದಕ್ಕಾಗಿ, ಕಡೆಯ ಬಾರಿ, ನನ್ನ ಮೊಮ್ಮಗನೊಂದಿಗೆ ಇಲ್ಲಿಗೆ ಬಂದಿದ್ದೇನೆ."

"ತಾವು ದೇವರಿಗೆ ಸಮರ್ಪಿಸಿದ ಕಾಣಿಕೆಯ ಬಗ್ಗೆ ಯಾರೂ ಅಷ್ಟೊಂದು ಉಬ್ಬಬಾರದು,"ರೋಷದಿಂದ ಆಲೋಚಿಸುತ್ತೇನೆ. ನಾನು. ಆದರೆ ಯಾವ ಸುಳ್ಳು ಹೇಳಲೂ ತೋಚುತ್ತಿಲ್ಲ ನನಗೆ. ಪ್ರತಿಯೊಬ್ಬರೂ ನಸುನಗುತ್ತ, ನನ್ನೆಡೆ ನೋಡುತ್ತಾರೆ.

ಒಳ ಕೋಣೆಯಲ್ಲಿ ಮೌನವಿದೆ. ನನ್ನ ಹೆಂಡತಿ, ಪಾತ್ರೆಗಳ ಖಣಿಲ್ಲೆನ್ನುವ ಹಾಗೂ ಮರ್ಮರ ಶಬ್ದವನ್ನು ನಿಲ್ಲಿಸಿ, ನಾನು ಉತ್ತರ ಕೊಡಲೆಂದು ಕಾಯುತ್ತಿದ್ದಾಳೆ.

ಧೂಮಪಾನ ಪುರುಷರ ಸೊತ್ತೇ?

ಜಿ. ಟಿ. ರಾಘವೇಂದ್ರ

ಧೂಮಪಾನ ಒಂದು ಚಟ. ವ್ಯಕ್ತಿಗೆ ಮಾನಸಿಕ ಸ್ವಾಸ್ಥ್ಯ ಒದಗಿಸುವ ಇದರ ಮುಸುಕು ಅತ್ಯಂತ ಅಪಾಯಕಾರಿ: ನೆತ್ತರು, ನೆಣ ಮಜ್ಜೆಗಳ ಕಣ ಕಣವನ್ನು ತಂಬಾಕಿನ ಗರಳ ಸ್ವಾಹಾಕರಿಸಿ ವ್ಯಕ್ತಿಯನ್ನು ಎಲುಬಿನ ಹಂದರವಾಗಿಸಿ ನಿಧಾನ ಮರಣಕ್ಕೆ ಕಾರಣವಾಗುವ ಧೂಮಪಾನ ಯಾರಿಗೂ ಶ್ರೇಯಸ್ಕರವಲ್ಲ.

ಸಾಮಾಜಿಕವಾಗಿ ಸ್ತ್ರೀಯರು ಧೂಮಪಾನಿಸುವುವನ್ನು ಯಾರೂ ಇಚ್ಛಿಸುವುದಿಲ್ಲ. ಆದರೆ, ಬರಲಿರುವ ಅಪಾಯದ ಅರಿವಿದ್ದರೂ ಅದನ್ನು ಎದುರಿಸುವ ಮೊಂಡು ಧೈರ್ಯದಿಂದ ಮತ್ತು ಪ್ರತಿಭಟನಾರೂಪವಾಗಿ ಭಾರತೀಯ ಸ್ತ್ರೀಯರಲ್ಲಿ ಧೂಮಪಾನಿಗಳ ಸಂಖ್ಯೆ ರಭಸದಿಂದ ಏರುತ್ತಿರುವುದು ಕಳವಳಕಾರಿಯಾದ ವಿಚಾರವಾಗಿದೆ.

ಒಂದು ಕಾಲದಲ್ಲಿ ಧೂಮಪಾನ ಪುರುಷರ ಅಬಾಧಿತ ಅಧಿಕಾರವಾಗಿದ್ದದ್ದು ಈಗ ಬದಲಾವಣೆ ಹೊಂದಿದೆ. "ಸ್ತ್ರೀಯರು ಧೂಮಪಾನ ಮಾಡಿದರೆ ತಪ್ಪೇನು?" ಇದು ಧೂಮಪಾನೀ ಸ್ತ್ರೀಯರ ಪ್ರಶ್ನೆ. ಪುರುಷರು ಧೂಮಪಾನಿಸಿದಾಗ ಸಮಾಜ ಅದನ್ನು ಅರಗಿಸಿಕೊಳ್ಳುತ್ತದೆ. ಆದರೆ, ಅದೇ ಸಮಾಜದ ಸ್ತ್ರೀಯರು ಮಾಡಿದಾಗ ಮಾತ್ರ ಶೀಲಗೆಟ್ಟವರು ಎನಿಸಿಕೊಳ್ಳುತ್ತಾರೆ. ಇದ್ಯಾವ ನ್ಯಾಯ? ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನವು ತಪ್ಪು ಎಂದು ಧೂಮಪಾನೀ ಸ್ತ್ರೀಯರು ತಿಳಿಯುವುದಿಲ್ಲ. ಆದರೆ, ಕೆಲವು ಸ್ಥಳಗಳಲ್ಲಿ ಅನಾವಶ್ಯಕವಾಗಿ ಜನರು ಅಶ್ಲೀಲ ಟೀಕೆ ಮಾಡುವುದರಿಂದಾಗಿ ಅಂತಹ ಸ್ಥಳಗಳಲ್ಲಿ ಸ್ತ್ರೀಯರು ಧೂಮಪಾನ ಮಾಡಬಯಸುವುದಿಲ್ಲ.

ಭಾರತದಲ್ಲಿ ಪುರುಷ ಧೂಮಪಾನಿಗಳು ಪ್ರತಿ ಶತ ಎಪ್ಪತ್ತರಿಂದ ಎಂಭತ್ತರಷ್ಟಿದ್ದರೆ ಸ್ತ್ರೀಯರ ಸಂಖ್ಯೆ ಕೇವಲ ಹದಿನೆಂಟರಿಂದ ಇಪ್ಪತ್ತರಷ್ಟಿದೆ ಎನ್ನುತ್ತಾರೆ ದೆಹಲಿಯಲ್ಲಿ ಅಸ್ತಮ ವಿರೋಧ ಶುಶ್ರೂಶಾಲಯವನ್ನು ನಡೆಸುತ್ತಿರುವ ಡಾ॥ ಕೌಶಿಕ್‌ರವರು. ಆದರೆ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯೂ. ಹೆಚ್. ಓ.) ಇತ್ತೀಚಿಗಿನ ವರದಿ ಪ್ರಕಾರ ೧೯೯೨ರಲ್ಲಿ ಸ್ತ್ರೀ ಧೂಮಪಾನಿಗಳ ಸಂಖ್ಯೆ ಪ್ರತಿಶತ ಕೇವಲ ಎರಡರಿಂದ ಹತ್ತರಷ್ಟಿತ್ತು. ಡಬ್ಲ್ಯೂ. ಹೆಚ್. ಓ. ವರದಿಯ ಪ್ರಕಾರ,

ಮುಕ್ತ ವಾತಾವರಣದ ಇತರ ರಾಷ್ಟ್ರಗಳಿಗೆ ಹೋಲಿಸಿದಾಗ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಐಶ್ವರ್ಯವಂತ ಸಮಾಜದ ವೃತ್ತಿನಿರತ ಸ್ತ್ರೀಯರಲ್ಲಿ ಧೂಮಪಾನ ಅಭ್ಯಾಸವಾಗಿ ಹೋಗಿರುವುದು ಕಂಡು ಬರುತ್ತಿದೆ.

ಪರಿಣತರ ಅಭಿಪ್ರಾಯದಂತೆ ಭಾರತದ ವಿದ್ಯಾವಂತ ಮಹಿಳೆಯರಲ್ಲಿ ಧೂಮಪಾನಿಗಳಾಗುವುದೆಂದರೆ ಅದೇನೋ ಒಂದು ಬಗೆಯ ಭಾವನಾತ್ಮಕ ಸಂಬಂಧ ಎಂದು ತಿಳಿದುಕೊಂಡಂತೆ ಕಂಡುಬರುತ್ತದೆ. ಗ್ರಾಮಾಂತರ ಪ್ರದೇಶದ ಸ್ತ್ರೀಯರು ಸಾಂಪ್ರದಾಯಿಕವಾಗಿ ಬೆಳೆಸಿಕೊಂಡು ಬಂದ ಅಭ್ಯಾಸ ಬೀಡಿ ಸೇವನೆಯನ್ನು ಮುಂದುವರಿಸುತ್ತಿದ್ದಾರೆ. ಆದರೆ ಒಂದು ಕಾಲದಲ್ಲಿ ಧೂಮಪಾನ ಸ್ತ್ರೀಯರಿಗೆ ಬಹಿಷ್ಕಾರ ಯೋಗ್ಯ ಎಂದು ತಿಳಿದಿದ್ದ ಪಟ್ಟಣ, ನಗರ ಪ್ರದೇಶಗಳಲ್ಲಿಯ ವಿದ್ಯಾವಂತ ಸ್ತ್ರೀಯರು ಈಗ ಸಿಗರೇಟ್ ಅಥವಾ ಸಿಗಾರ್ ಸೇದುವುದೇ ತಮ್ಮ ಗೌರವದ ಪ್ರಶ್ನೆ ಎಂದು ಭಾವಿಸಿದಂತಿದೆ. "ಸ್ತ್ರೀ ಧೂಮಪಾನಿಗಳನ್ನು ಸಮಾಜ ಈಗಲೂ ತುಂಬಾ ಕೀಳಾಗಿ ನೋಡುತ್ತಿದೆ" ಎನ್ನುತ್ತಾಳೆ—ತನ್ನ ಕಛೇರಿಯ ಶೌಚಾಲಯಾವರಣದಲ್ಲಿ ಮಾತ್ರ ಧೂಮಪಾನ ಮಾಡುವ ಸರಕಾರೀ ಉದ್ಯೋಗಸ್ಥ ಮಹಿಳೆಯೊಬ್ಬಳು. ತಮ್ಮ ಚಿಕಿತ್ಸಾ ಕೇಂದ್ರಕ್ಕೆ ಬರುವ ಅಸ್ತಮಾ ಮಹಿಳೆಯರು ಸಾಮಾನ್ಯವಾಗಿ ತಾವು ಧೂಮಪಾನಿಗಳು ಎಂದು ಒಪ್ಪಲು ತಯಾರಿರುವುದಿಲ್ಲ ಎನ್ನುತ್ತಾರೆ ಡಾ|| ಕೌಶಿಕ್‌ರವರು.

ಧೂಮಪಾನ ತಮ್ಮ ಆರೋಗ್ಯವನ್ನು ಅದೆಷ್ಟು ಅಪಾಯಕ್ಕೆ ಒಳಪಡಿಸುತ್ತದೆ ಎಂದು ಧೂಮಪಾನಪೀಡಿತ ವಿದ್ಯಾವಂತ ತರುಣಿಯರಲ್ಲಿ ಹೆಚ್ಚಿನವರು ತಿಳಿದಿರುವುದಿಲ್ಲ. ಮಾತ್ರವಲ್ಲ, ತಿಳಿಯಲು ಪ್ರಯತ್ನಿಸುವುದೂ ಇಲ್ಲ ಎಂಬ ವಿಚಾರ ತಿಳಿದಾಗ ಬಹಳ ಆಶ್ಚರ್ಯವಾಗುತ್ತದೆ.

ದಿನ ಒಂದಕ್ಕೆ ಇಪ್ಪತ್ತು ಸಿಗರೇಟ್ ಸೇದುವ ಸ್ತ್ರೀಯರಲ್ಲಿರುವ ರೋಗನಿರೋಧ ಶಕ್ತಿ ಸೇದದಿರುವ ಸ್ತ್ರೀಯರಿಗಿಂತ ಮೂರು ಪಟ್ಟು ಕಡಿಮೆ ಇರುತ್ತದೆ. ಬಸಿರನ್ನು ಬಯಸುವ ಧೂಮಪಾನೀ ಸ್ತ್ರೀಯರು ಸೇದದಿರುವ ಸ್ತ್ರೀಯರಿಗಿಂತ ಮೂರುಪಟ್ಟು ಹೆಚ್ಚು ಅಪಾಯವನ್ನು ಎದುರಿಸಬೇಕಾಗುತ್ತದೆ. ಗರ್ಭಧಾರಣಾ ಸಾಮರ್ಥ್ಯ ಸಾಮಾನ್ಯ ಸ್ತ್ರೀಯರಿಗಿಂತ ಮೂರುಪಟ್ಟು ಕಡಿಮೆ ಇರುವ ಸಾಧ್ಯತೆ ಇದೆ. ಮಾತ್ರವಲ್ಲ ಬದುಕಿ ಉಳಿದ ಗರ್ಭವನ್ನು ಕಾಪಾಡಿಕೊಳ್ಳುವುದರಲ್ಲೂ ಮೂರುಪಟ್ಟು ಹೆಚ್ಚಿನ ಅಪಾಯವಿದೆ. ಇನ್ನೂ ಹೆಚ್ಚಿಗೆ ಹೇಳುವುದಾದರೆ ಬಾಯಿ ಮೂಲಕ ಗರ್ಭ ನಿರೋಧಕವನ್ನು ಸೇವಿಸುವ ಸ್ತ್ರೀ ಧೂಮಪಾನಿಗಳು ಹೃದಯ ರಕ್ತನಾಳದ ರೋಗಕ್ಕೆ ತುತ್ತಾಗುವ ಅಪಾಯ ಧೂಮಪಾನಿಗಳಲ್ಲದ ಸ್ತ್ರೀಯರಿಗಿಂತ ಹೆಚ್ಚಿಗೆ ಇರುವುದು ಕಂಡು ಬಂದಿದೆ.

ಸ್ವತಃ ಧೂಮಪಾನಿ ಅಲ್ಲದ ಸೀಮಾ ಎಂಬ ಶಾಲಾ ಅಧ್ಯಾಪಿಕೆಯ ಅಭಿಪ್ರಾಯ ಈ ರೀತಿಯಾಗಿದೆ—ಎಲ್ಲಿವರೆಗೆ ಸ್ತ್ರೀಗೆ ಮಕ್ಕಳು ಬೇಡ ಎನಿಸುತ್ತದೋ ಅಲ್ಲಿವರೆಗೆ ಧೂಮಪಾನವೇನೂ ಕೇಡಲ್ಲ. ಆದರೆ, ಭವಿಷ್ಯದ ಅಪಾಯವನ್ನು ಹುಟ್ಟಲಿರುವ ಮಗುವಿಗೆ ವರ್ಗಾಯಿಸಬಾರದಷ್ಟೆ.

ಡಾ॥ ಮಧುನಾಗು ಎಂಬ ಸ್ತ್ರೀರೋಗ ತಜ್ಞೆ ಹೇಳುತ್ತಾರೆ–ಧೂಮಪಾನೀ ಸ್ತ್ರೀಯರು ತಮ್ಮ ನಾಲ್ಕನೇ ಗರ್ಭಧಾರಣಾ ತಿಂಗಳಲ್ಲಿ ಮಗುವಿಗೆ ಸಾಕಷ್ಟು ತೂಕವಿಲ್ಲದ ಅತ್ಯಂತ ಹೆಚ್ಚಿನ ಅಪಾಯವನ್ನು ಎದುರಿಸಬೇಕಾಗುತ್ತದೆ. ಆದರೆ, ಹೆಚ್ಚಿನ ಸ್ತ್ರೀಯರಿಗೆ ಈ ಬಗ್ಗೆ ತಿಳುವಳಿಕೆ ಬರುವುದು ಗರ್ಭಧರಿಸಿದ ಮೂರು ತಿಂಗಳ ಅನಂತರವೇ ಆಗಿರುತ್ತದಷ್ಟೆ.

ಸದ್ಯದ ಪರಿಸ್ಥಿತಿಯಲ್ಲಿ ಸ್ತ್ರೀ ಧೂಮಪಾನಿಗಳಿಗೆ ಧೂಮಪಾನವು ಆರೋಗ್ಯದ ಮೇಲೆ ಯಾವ ರೀತಿಯ ಅಪಾಯವನ್ನುಂಟು ಮಾಡುತ್ತದೆ ಎಂಬ ತಿಳುವಳಿಕೆಯನ್ನು ನೀಡುವ ಕಾರ್ಯಕ್ರಮಗಳನ್ನು ಅಳವಡಿಸುವ ದೃಷ್ಟಿ ಸರಕಾರಕ್ಕಾಗಲೀ ಇತರ ಸೇವಾಸಂಸ್ಥೆಗಳಿಗಾಗಲೀ ಇದ್ದಂತೆ ಕಂಡು ಬರುತ್ತಿಲ್ಲ.

"ಹೆಚ್ಚಿನ ಸ್ತ್ರೀಯರು ಧೂಮಪಾನಿಗಳಾಗಲು ಕಾರಣ–ತಾವು ಪರಿಸ್ಥಿತಿಗೆ ಹೊಂದಿಕೊಂಡಿದ್ದೇವೆಂದು ತೋರಿಸಿಕೊಳ್ಳಲು ಮತ್ತು ಸೊಗಸುಗಾರ್ತಿಯರೆಂದು ಕಾಣಿಸಿಕೊಳ್ಳಲು" ಎಂದು ಹೇಳುತ್ತಾರೆ ಜವಾಹರಲಾಲ್ ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಂಶೋಧಕ ವಿದ್ಯಾರ್ಥಿ ಅನಿರುದ್ಧ. ಜೊತೆಯಲ್ಲಿ ತನ್ನ ಮೇಲೆ ಉಳಿದವರಿಗೆ ಒಳ್ಳೆ ಅಭಿಪ್ರಾಯ ಬರಲಿ ಎಂಬ ಉದ್ದೇಶದಿಂದ ತಾನೂ ಸಿಗರೇಟ್ ಸೇದುವುದಾಗಿ ಒಪ್ಪಿಕೊಂಡರು.

ಪತ್ರಕರ್ತ ಸುರೇಶ್‌ರ ಅಭಿಪ್ರಾಯದಲ್ಲಿ ಪಶ್ಚಿಮ ದೇಶಗಳ ಗಾಢವಾದ ಪ್ರಭಾವದಿಂದಾಗಿ ಹೆಚ್ಚು ಹೆಚ್ಚಾಗಿ ಸ್ತ್ರೀಯರು ಧೂಮಪಾನಿಗಳಾಗುತ್ತಿದ್ದಾರೆ. ಭಾರತೀಯ ಸ್ತ್ರೀಯರಲ್ಲಿ ಧೂಮಪಾನ ಚಟ ಪಸರಿಸಿರುವುದು ಬಹಳ ಅಲ್ಪಪ್ರಮಾಣದಲ್ಲಿ ಎಂಬುದು ಸಮಾಧಾನಕರ ಅಂಶವಾದರೂ ಸಮಯ ವಿಳಂಬ ಮಾಡದೆ ತಕ್ಷಣ ತಿಳುವಳಿಕೆ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳದಿದ್ದರೆ ಮುಂದೆ ಇದು ಸಮಾಜಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸೀತು. ಈ ಕಾರ್ಯಕ್ರಮಗಳನ್ನು ಶಾಲಾಕಾಲೇಜ್‌ಗಳಲ್ಲಿ ಆರಂಭಿಸುವುದು ಎಲ್ಲಾ ರೀತಿಯಲ್ಲಿ ಯೋಗ್ಯ ಪ್ರಯತ್ನವೆನಿಸುತ್ತದೆ ಎಂದಿದ್ದಾರೆ ಡಾ॥ ಎಚ್. ಎಸ್. ಓಗ್ರಾ. ಇವರ ಅಭಿಪ್ರಾಯದಲ್ಲಿ ಹೆಚ್ಚಿನ ಯುವಕ ಯುವತಿಯರು ಅವರ ಹತ್ತೊಂಬತ್ತು ವರ್ಷ ಪ್ರಾಯದೊಳಗೆ (ಟೀನ್ ಏಜ್) ಈ ದುರಭ್ಯಾಸವನ್ನು ಆರಂಭಿಸಿರುವುದು ಕಂಡುಬಂದಿದೆ ಹಾಗೂ ಪ್ರತಿ ಹತ್ತು ಯುವಕರಲ್ಲಿ ಇಬ್ಬರು ಸ್ತ್ರೀಯರಾಗಿರುತ್ತಾರೆ. ಇವರಲ್ಲಿ ಹೆಚ್ಚಿನವರು ತಮಾಷೆಗಾಗಿ ಕುತೂಹಲಕ್ಕಾಗಿ ಮತ್ತು ಪಂಥಾಹ್ವಾನಕ್ಕಾಗಿ ಆರಂಭಿಸಿದ್ದೆಂದು ಕಂಡು ಬರುತ್ತದೆ.

೧೨ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿ ಜ್ಯೂಲಿ ಹೇಳುತ್ತಾಳೆ–'ಅವಳಿಗೆ ೯ ವರ್ಷವಾಗಿದ್ದಾಗ ಕುತೂಹಲಕ್ಕಾಗಿ ತಂದೆ ಸೇದಿ ಎಸೆದಿದ್ದ ಸಿಗರೇಟ್ ತುಂಡನ್ನು ತಾನು ಸೇದಿದ್ದೇನೆ'. ಇದು ಆ ಪ್ರಾಯದ ಮಕ್ಕಳಿಗೆ ಬರುವ ನೇರ ಸ್ವಾಭಾವಿಕ ಪ್ರಕ್ರಿಯೆ, ಇದು ತಪ್ಪು ಎಂದೆನಿಸುವುದಿಲ್ಲ. ಮನಶ್ಶಾಸ್ತ್ರಜ್ಞರು ಮೇಲಿನ ಮಾತನ್ನು ಪುಷ್ಟೀಕರಿಸುತ್ತಾ ತರುಣ ಪ್ರಾಯದ ಯುವಕ ಯುವತಿಯರು ಸ್ವಾಭಾವಿಕವಾಗಿ ಪ್ರತಿಯೊಂದನ್ನು ವಿರೋಧಿಸುವ ಪ್ರಕೃತಿ

ಯುವರಿದ್ದು ಧೂಮಪಾನವು ಒಳ್ಳೆಯದಲ್ಲ ಎಂಬುದನ್ನು ವಿರೋಧಿಸಲು, ಸ್ತ್ರೀಯರು ಧೂಮಪಾನ ಮಾಡಿದರೆ ತಪ್ಪೇನು ಎಂದು ಸಾಧಿಸಿ ತೋರಿಸಲೋಸ್ಕರ ತಮ್ಮನ್ನು ತಾವಾಗಿಯೇ ಈ ದುರಭ್ಯಾಸಕ್ಕೆ ಬಲಿ ಕೊಟ್ಟುಕೊಳ್ಳುತ್ತಾರೆ.

ಭಾರತೀಯ ಸಿನಿಮಾ ಕ್ಷೇತ್ರದಲ್ಲಿ ಸಾಧಾರಣವಾಗಿ ಪ್ರಣಯ ಚೇಷ್ಟೆಗಳಿಂದ ಗಂಡಸರನ್ನು ಬಗಲಿಗೆ ಎಳೆಯುವ ಸ್ತ್ರೀ ಪಾತ್ರವನ್ನು ತೋರಿಸುವಾಗ ಅಂಥವರು ಧೂಮಪಾನ ಮಾಡುತ್ತಿರುವಂತೆ ಕಾಣಿಸುತ್ತಾರೆ. ಎಂದರೆ, 'ನೀತಿಗೆಟ್ಟ ನಡತೆ' ಎಂದು ಕಾಣಿಸುವುದು ಉದ್ದೇಶವಾಗಿರುತ್ತದೆ. ಇದೂ ಒಂದು ಕಾರಣದಿಂದ ಸ್ತ್ರೀಯರು ಗುಟ್ಟಾಗಿ ಧೂಮಪಾನ ಮಾಡಲು ಕಾರಣ ಎಂಬುದು ಅಭಿನೇತ್ರಿ ವೀಣಾರ ಅಭಿಪ್ರಾಯವಾಗಿದೆ.

ಪ್ರಗತಿಶೀಲ ರಾಷ್ಟ್ರಗಳಲ್ಲಿ ದೇಹದ ತೂಕವನ್ನು ತಗ್ಗಿಸಲು ಆಹಾರ ನಿಯಂತ್ರಣದ ಜೊತೆಗೆ ಧೂಮಪಾನವೂ ಸಹಕಾರಿಯಾಗುತ್ತದೆಂಬ ಅಭಿಪ್ರಾಯದಿಂದ ಯುವತಿಯರು ಧೂಮಪಾನವನ್ನು ಆರಂಭಿಸುತ್ತಾರೆ ಎಂಬುದು ವೈದರ ಅಭಿಪ್ರಾಯ. ಸರಕಾರೀ ಉದ್ಯೋಗಸ್ತ ಧೂಮಪಾನೀ ಮಹಿಳೆಯೊಬ್ಬಳು, ನಾನು ವಿದೇಶಕ್ಕೆ ಹೋಗಿದ್ದಾಗ ನನ್ನ ದೇಹ ಗಾತ್ರ ತಗ್ಗಿಸಲು ಇದು ಸರಳ ಉಪಾಯ ಎಂಬ ಸಲಹೆ ಕೊಟ್ಟರು, ಹಾಗಾಗಿ ನಾನು ಧೂಮಪಾನಿಯಾದೆ ಎನ್ನುತ್ತಾಳೆ, ಆದರೆ, ವಿಶ್ವ ಆರೋಗ್ಯ ಸಂಸ್ಥೆ ಸಾಕಷ್ಟು ಮಾಹಿತಿ ಸಂಗ್ರಹಿಸಿ ತಿಳಿದಂತೆ ತನ್ನ ಆರೋಗ್ಯ ಮತ್ತು ತನ್ನ ಜೀವಿತಾವಧಿಯ ಬಗ್ಗೆ ಗಮನಿಸುವ ಯಾವುದೇ ಸ್ತ್ರೀ ಸಾಮಾನ್ಯವಾಗಿ ಧೂಮಪಾನವನ್ನು ಇಚ್ಛಿಸುವುದಿಲ್ಲ.

ಒಟ್ಟು ಅಭಿಪ್ರಾಯದ ಮೇಲೆ ಅಂದಾಜು ಮಾಡಿದಾಗ ಧೂಮಪಾನ ಭಾರತದ ಸ್ತ್ರೀಯರ ಮೇಲೆ ಭಾರಿಯಾದ ಯಶಸ್ಸನ್ನೇನೂ ಸಾಧಿಸಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಇಲ್ಲಿಯ ಸಾಮಾಜಿಕ ಮತ್ತು ಧಾರ್ಮಿಕ ಪ್ರಜ್ಞೆಯಾಗಿದೆ.

ಕನ್ನಡಿಗರು ಒಟ್ಟಾಗಲು ಇರುವ ಏಕಮಾತ್ರ ಸಾಧನ ಅವರ ನುಡಿ. ಸಾವಿರಾರು ವರ್ಷಗಳಿಂದ ದಷ್ಟಪುಷ್ಟವಾಗಿ ಕಲ್ಪವೃಕ್ಷದಂತೆ ಬೆಳೆದು ಸಕಲ ಇಷ್ಟಾರ್ಥಗಳನ್ನು ಕೊಡಬಲ್ಲ ಅವರ ನುಡಿ. ಅದ್ದರಿಂದ ನಾವು ಮೊದಲು ಕನ್ನಡಿಗರು, ಅನಂತರ ಭಾರತೀಯರು' ಎಂದರೆ ಅದು ಸ್ವಾಭಾವಿಕ, ಕಾರ್ಯಸಾಧ್ಯ.

ಎ. ಆರ್. ಕೃಷ್ಣಶಾಸ್ತ್ರಿ

ನೀವು ಬಡ್ತಿ ಅಪೇಕ್ಷಿಸುವುದಾದರೆ

ಅಧಿಕಾರಿಯೊಂದಿಗೆ ಸುಮಧುರ ಸಂಬಂಧ ಇಟ್ಟುಕೊಳ್ಳಿ

ಟಿ. ವಿ. ಅನ್ನಪೂರ್ಣಮ್ಮ

ಕನಿಷ್ಠ ದರ್ಜೆಯ ಗುಮಾಸ್ತನಿಂದ ಹಿಡಿದು ಉನ್ನತ ಮಟ್ಟದ ಅಧಿಕಾರಿಯವರೆಗೂ ಪ್ರತಿಯೊಬ್ಬರಿಗೂ ಒಬ್ಬನಲ್ಲ ಒಬ್ಬ ಮೇಲಧಿಕಾರಿ ಇದ್ದೇ ಇರುತ್ತಾನೆ. ಸಾಮಾಜಿಕ, ಧಾರ್ಮಿಕ ಅಥವಾ ಸ್ವಯಂಸೇವಾ ಸಂಸ್ಥೆಗಳಲ್ಲೂ ಅಷ್ಟೆ. ಈತ ತನ್ನ ಕೈಕೆಳಗಿನ ನೌಕರ ಅಥವಾ ಕಾರ್ಯಕರ್ತನ ಭವಿಷ್ಯ, ಮಾನಸಿಕ ಶಾಂತಿ ಮತ್ತು ಆರೋಗ್ಯದ ಮೇಲೆ ಪ್ರಭಾವ ಬೀರಬಲ್ಲವನಾಗಿರುತ್ತಾನೆ. ನಿಮ್ಮ ಮೇಲಧಿಕಾರಿಯೊಡನೆ ಸುಮಧುರ ಸಂಬಂಧ ಇಟ್ಟುಕೊಂಡರೆ ಮಾತ್ರ ನೀವು ನಿಮ್ಮ ಭವಿಷ್ಯವನ್ನು ಸುರಕ್ಷಿತವಾಗಿಸಿಕೊಳ್ಳಬಹುದು. ನಿಮ್ಮ ಮಾರ್ಗದರ್ಶನಕ್ಕಾಗಿ ಇಲ್ಲಿ ಹತ್ತು ವಿಧಾನಗಳನ್ನು ಕೊಡಲಾಗಿದೆ.

೧) ಲಕ್ಷ್ಯವಿಟ್ಟು ಮಾತನ್ನು ಕೇಳಿ

ಸಂಭಾಷಣೆಯ ಮಧ್ಯದಲ್ಲಿ, ಸಾಧಾರಣವಾಗಿ, ನಾವು ಇತರರ ಮಾತನ್ನು ಕೇಳುವಂತೆ ತೋರಿಸಿಕೊಳ್ಳುತ್ತೇವೆ. ಆದರೆ ಅವರ ಮಾತನ್ನು ನಾವು ಪೂರ್ತಿಯಾಗಿ ಕೇಳುವುದೇ ಇಲ್ಲ. ವಿಷಯದ ಬಗ್ಗೆ-ಅದರ ಸ್ವೀಕಾರ-ತಿರಸ್ಕಾರದ ಸುಳಿವನ್ನು ಗಮನಿಸುವುದರಲ್ಲೇ ಮಗ್ನರಾಗಿರುತ್ತೇವೆ. ನಮ್ಮ ಮಾತಿಗೆ ಅವರ ಪ್ರತಿಕ್ರಿಯೆ ತಿಳಿಯಲು ಉತ್ಸುಕರಾಗಿರುತ್ತೇವೆ. ಲಕ್ಷ್ಯವಿಟ್ಟು ಮಾತನ್ನು ಕೇಳಲೇಬೇಕೆಂಬುದರ ಅರ್ಥ– "ನೀವು ಕೇವಲ ಮೇಲಧಿಕಾರಿಯ ಮಾತನ್ನೇ ಕೇಳಿ" ಎಂದಲ್ಲ. ಅವರ ಅಭಿಪ್ರಾಯವನ್ನೂ ತಿಳಿದುಕೊಳ್ಳಿ. ವಿಷಯವನ್ನು ಚೆನ್ನಾಗಿ ತಿಳಿದು ಬುದ್ಧಿವಂತಿಕೆಯಿಂದ ಉತ್ತರ ಕೊಡಿ ಎಂಬುದು ಇದರ ಅರ್ಥ.

ನಿಮ್ಮ ಮೇಲಧಿಕಾರಿ ಏನು ಹೇಳುತ್ತಿದ್ದಾನೆಂಬುದನ್ನು ಗಾಬರಿ ಪಡದೆ ಎಚ್ಚರಿಕೆಯಿಂದ ಆಲಿಸಿ. ಕಣ್ಣಲ್ಲಿ ಕಣ್ಣಿಟ್ಟು ನೋಡದಿದ್ದರೂ, ನಿಮ್ಮ ದೃಷ್ಟಿ ಆತನ ಮೇಲೆ ಕೇಂದ್ರೀಕೃತವಾಗಿರಲಿ. ಅವಶ್ಯ

ಮೂಲ: ಡಿಸೆಂಬರ್ ೧೯೮೯ರ ಹಿಂದಿ ಮಾಸ ಪತ್ರಿಕೆ 'ಸರ್ವೋತ್ತಮ್'ನಲ್ಲಿ ಪ್ರಕಟವಾದ ಜಾರ್ಜ್ ಬರ್ಕ್ಲಿ ಅವರ ಲೇಖನ.

ವಿದ್ದಲ್ಲಿ ಆತ ಹೇಳಿದ ವಿಷಯವನ್ನು ಕಾಗದದ ಮೇಲೆ ಬರೆದುಕೊಳ್ಳಿ. ನೀವು ಆತ ಹೇಳಿದ ವಿಷಯಗಳ ಬಗ್ಗೆ ಬಹಳ ಗಂಭೀರವಾಗಿ ಆಲೋಚಿಸುತ್ತಿದ್ದೀರೆಂದು ತೋರಿಸಿ. ವಿಷಯಗಳನ್ನು ಸ್ಪಷ್ಟ ಪಡಿಸಲು ಒಂದೆರಡು ಪ್ರಶ್ನೆಗಳನ್ನೂ ಕೇಳಿ ಅಥವಾ ಆತ ಹೇಳಿದ್ದನ್ನು ನೀವು ಸಂಕ್ಷೇಪವಾಗಿ ಸೂಚಿಸಿ. ಪುನರಾವರ್ತನೆ ಮಾಡುವ ಆವಶ್ಯಕತೆ ಇಲ್ಲದಂತಹ ನೌಕರನನ್ನು ಮೇಲಧಿಕಾರಿ ಇಷ್ಟಪಡುತ್ತಾನೆ ಎಂಬುದನ್ನು ನೆನಪಿನಲ್ಲಿಡಿ.

೨) ಸಂಕ್ಷೇಪವಾಗಿ ಹೇಳಿ

ಅಧಿಕಾರಿಗೆ 'ಸಮಯ' ಅತ್ಯಮೂಲ್ಯ ಸಾಧನವಾಗಿರುತ್ತದೆ. ಆದ್ದರಿಂದ ಸಂಕ್ಷೇಪವಾಗಿ ಹೇಳಬೇಕಾದ್ದು ಅತ್ಯಾವಶ್ಯಕ. ಸಂಕ್ಷೇಪವಾಗಿ ಹೇಳುವುದು ಎಂದರೆ, ಬಹಳ ಕಡಿಮೆ ಕಾಲಾವಕಾಶದಲ್ಲಿ, ತಿಳಿದಿದ್ದನ್ನೆಲ್ಲಾ ಒಂದೇ ಉಸಿರಿಗೆ ಹೇಳಿಬಿಡುವುದು ಎಂದು ಇದರ ಅರ್ಥ ಖಂಡಿತ ಅಲ್ಲ. ಸ್ಪಷ್ಟವಾದ ಹಾಗೂ ಸಂಬಂಧಪಟ್ಟ ವಿಷಯಗಳನ್ನು ಮಾತ್ರ ಆರಿಸಿ ಹೇಳಬೇಕೆನ್ನುವುದು ಇದರ ಅರ್ಥ.

ಸಾರಾಂಶವನ್ನು ಒಂದು ಪುಟಕ್ಕೆ ಸೀಮಿತಗೊಳಿಸುವುದು ಒಳ್ಳೆಯದು. ಒಂದು ವೇಳೆ ಸುದೀರ್ಘ ವರದಿ ಸಿದ್ಧಪಡಿಸಬೇಕಾದ್ದು ಆವಶ್ಯವಾಗಿದಲ್ಲಿ, ಪ್ರಾರಂಭದಲ್ಲಿ ಒಂದು ಪುಟದ ಸಾರಾಂಶವನ್ನು ಬರೆದು ಲಗತ್ತಿಸಿ. ಪರಿಣಾಮಕಾರಿ ಲೇಖನ ಬರವಣಿಗೆಯು ದಕ್ಷತೆಯನ್ನು ತೋರಿಸುವುದಿಲ್ಲ. ನಿಮ್ಮ ಆಲೋಚನಾ ಶಕ್ತಿಯನ್ನು ತೋರಿಸುತ್ತದೆ. ಮೊದಲು ವಿಷಯವನ್ನು ಚೆನ್ನಾಗಿ ಆಲೋಚಿಸಿ ತಿಳಿದುಕೊಳ್ಳಿ. ನಂತರ ಬರೆಯಿರಿ.

೩) ಕಾರ್ಯನಿರತರಾಗಿ

ಸಂಭಾಷಿಸುವಾಗ, ಯಾವುದಾದರೂ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ಅಭಿಪ್ರಾಯ ತಿಳಿಸಬೇಕೆಂದಾದಾಗ ಆ ವಿಷಯವನ್ನು ವಾಸ್ತವಾಂಶಗಳ ಸಹಿತ ತಿಳಿಸಿ. ಪರೀಕ್ಷಿಸಿದಾಗ ಅದು ಉಪಯೋಗಕರ ಎಂದು ಸಾಬೀತುಪಡಿಸುವಂತೆ ಮಾತಾಡಿ. ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಿಮ್ಮ ಮೇಲಧಿಕಾರಿಗೆ ಅತಿ ಹೆಚ್ಚಿನ ಅವಕಾಶ ಸಿಗುವಂತೆ ಪ್ರಯತ್ನಪಡಿ.

ಯಾವುದೇ ವಿಷಯದಲ್ಲಿ ಒಂದು ನಿರ್ದಿಷ್ಟ ಕಾರ್ಯನೀತಿಯನ್ನು ಪ್ರಸ್ತುತಪಡಿಸಬೇಡಿ. ಅದಕ್ಕೆ ಬದಲು ಆ ವಿಷಯಕ್ಕೆ ಸಂಬಂಧಪಟ್ಟಂತೆ ಕೆಲವು ಪರ್ಯಾಯಗಳನ್ನು ಸೂಚಿಸಿ. ಅವುಗಳ ಗುಣಾವಗುಣಗಳನ್ನು ಮಂಡಿಸಿ. ಆಯ್ಕೆಯ ಸ್ವಾತಂತ್ರ್ಯವನ್ನು ನಿಮ್ಮ ಮೇಲಧಿಕಾರಿಗೆ ಬಿಡಿ. ಅಮೆರಿಕಾದ ಮಾಜಿ ರಾಜ್ಯ ಸಚಿವ ಹೆನ್ರಿ ಕಿಸಿಂಗರ್‌ರವರಿಗೆ ಪ್ರಿಯವಾದ ಕಾರ್ಯನೀತಿ ಇದೇ ಆಗಿತ್ತು.

ಈ ರೀತಿ ಮಾಡುವುದರಿಂದ ನಿಮ್ಮ ಮೇಲಧಿಕಾರಿಗೆ ಅಂತಿಮ ನಿರ್ಣಯ ತೆಗೆದುಕೊಳ್ಳಲು ಸಹಾಯವಾಗುವುದು. ನೀವು ಸಹ ವಿಷಯದ ಎಲ್ಲಾ ಅಂಶಗಳ ಮೇಲೆ ಸಾವಧಾನವಾಗಿ ಆಲೋಚನೆ ಮಾಡಲು ಬದ್ಧರಾಗುವಿರಿ. ಇದರ ಪರಿಣಾಮ, ಇಬ್ಬರಿಗೂ ಲಾಭವಾಗುವುದು. ವಿಶದವಾಗಿ ಆಲೋಚನೆ ಮಾಡದೆ, ನಿಮ್ಮ ಮೇಲಧಿಕಾರಿಯ ಪ್ರಸ್ತಾಪವನ್ನು ರದ್ದುಪಡಿಸ

ಬೇಡಿ. ಆ ಪ್ರಸ್ತಾಪದಲ್ಲಿ ಆತ ಕೆಲವು ಒಳ್ಳೆಯ ಅಂಶ ಕಂಡಿರಬಹುದು ಅಥವಾ ಆ ವಿಷಯದಲ್ಲಿ ಆತ ನಿಮ್ಮ ಪ್ರತಿಕ್ರಿಯೆಯನ್ನು ತಿಳಿಯಲು ಅಪೇಕ್ಷಿಸದೇ ಇರಬಹುದು. ನೀವು ನಿಮ್ಮ ಭಿನ್ನಾಭಿಪ್ರಾಯಗಳನ್ನು ತೊಡೆದು ಹಾಕಲು, ನಿಮ್ಮ ಆಕ್ಷೇಪಣೆಗಳನ್ನು ಪ್ರಶ್ನೆಗಳ ರೂಪದಲ್ಲಿ ಪ್ರಸ್ತುತಪಡಿಸಬಹುದು. ಉದಾಹರಣೆಗೆ (ಹೆಚ್ಚು ಬದಲಾವಣೆಯಿಲ್ಲದೆ ಈ ಪರಿವರ್ತನೆ ಮಾಡಬಹುದೇ) ಇತರರು ಮಾಡುವ ಆಕ್ಷೇಪಣೆಗಳನ್ನು ಈ ರೀತಿ ಹೇಳಬಹುದು. (ಕಾನೂನು ವಿಭಾಗ ಇದರ ಬಗ್ಗೆ ಆಕ್ಷೇಪಣೆ ಎತ್ತಬಹುದು.) ನಿಮ್ಮ ಮೇಲಧಿಕಾರಿಗೆ ಕೆಲವು ವಿಷಯಗಳು ತಿಳಿದಿರಲಾರವು. ಅಂಥ ಪ್ರಸಕ್ತ ಅಂಕಿ ಅಂಶಗಳ ಆಧಾರದ ಮೇಲೆ ನಿಮ್ಮ ಆಕ್ಷೇಪಣೆ ಎತ್ತಲಾಗಿದೆ ಎಂಬುದನ್ನು ಸ್ಪಷ್ಟಪಡಿಸಿ. ಅದರ ಪರಿಣಾಮ ಉತ್ತಮವಾಗುವುದು.

ಎಷ್ಟೇ ಅಪ್ರಿಯ ವಿಷಯವಾದರೂ ನಿಮ್ಮ ಮೇಲಧಿಕಾರಿಗೆ ಹೇಳಲು ಹಿಂಜರಿಯಬೇಡಿ. ಸುಳ್ಳು ಹೊಗಳಿಕೆ ಹೇರಿ ಆತನನ್ನು ವಾಸ್ತವತೆಯಿಂದ ದೂರವಿಟ್ಟು, ತಪ್ಪು ನಿರ್ಣಯ ತೆಗೆದುಕೊಳ್ಳುವಂತೆ ಮಾಡುವ ನೌಕರರು ಎಂದಿಗೂ ಹಿತಚಿಂತಕರಲ್ಲ. ಅವರಿಗಿಂತ ಇದ್ದದ್ದನ್ನು ಇದ್ದಂತೆಯೇ ಹೇಳುವವರು ಉತ್ತಮರೆಂದು ಪರಿಗಣಿಸಲ್ಪಡುವರು.

೪) ನಿಮ್ಮ ಸಮಸ್ಯೆಗಳನ್ನು ನೀವೇ ಪರಿಹರಿಸಿಕೊಳ್ಳಿ

ತಮ್ಮ ಸಮಸ್ಯೆಗಳನ್ನು ಸ್ವತಃ ಪರಿಹರಿಸಿಕೊಳ್ಳಲಾರದ ನೌಕರರು ತಮ್ಮ ಮೇಲಾಧಿಕಾರಿಗಳ ಸಮಯವನ್ನು ಹಾಳು ಮಾಡುತ್ತಾರೆ. ಸಮಸ್ಯೆಗಳನ್ನು ಸ್ವತಃ ಪರಿಹರಿಸಿಕೊಳ್ಳುವುದರಿಂದ ದಕ್ಷತೆ ಹೆಚ್ಚಿಸಿಕೊಳ್ಳಲು ಸಹಾಯವಾಗುತ್ತದೆ. ಅಷ್ಟೇ ಅಲ್ಲ, ಕೆಲಸವನ್ನು ಉತ್ತಮ ರೀತಿಯಲ್ಲಿ ಮಾಡಲು ಅನುಕೂಲವಾಗುತ್ತದೆ. ಹಾಗಾದಾಗ ಅಧಿಕಾರಿಯ ದೃಷ್ಟಿಯಲ್ಲಿ ನಿಮ್ಮ ಬೆಲೆ ಹೆಚ್ಚಾಗುತ್ತದೆ.

೫) ನಿಮ್ಮ ಅಧಿಕಾರಿಯ ಗುಣಗಾನ ಮಾಡಿರಿ

ಅಧಿಕಾರಿಯನ್ನು ಆಡಳಿತ ಮಂಡಳಿಯ ಮನಸ್ಸು ಮತ್ತು ಆತ್ಮವೆಂದು ಹೇಳಬಹುದು. ಆತನ ಗುಣ ಮತ್ತು ಮಹತ್ವವನ್ನು ಇತರರೊಡನೆ ವರ್ಣಿಸಿ. ಆತನಿಗೆ ವಿಷಯದ ಬಗ್ಗೆ ಮುಂಚಿತವಾಗಿಯೇ ಸೂಚನೆಗಳನ್ನು ಕೊಟ್ಟಿರಿ. ಸಭೆಯಲ್ಲಿ ನಿಮ್ಮ ಮೇಲಧಿಕಾರಿ ಹಾಜರಿದ್ದಾಗ ವಿಷಯದ ಬಗ್ಗೆ ಯಾವ ಹೊಸ ತಿಳುವಳಿಕೆಯನ್ನು ಕೊಡಬೇಡಿ. ವಸ್ತುಸ್ಥಿತಿಯನ್ನು ಆತನಿಗೆ ಮೊದಲೇ ತಿಳಿಸಿ. ಆ ಅಂಶಗಳನ್ನು ಆತನೇ ಪ್ರಸ್ತುತ ಪಡಿಸಲು ಅವಕಾಶ ಕೊಡಿ.

ನಿಮ್ಮ ಮೇಲಧಿಕಾರಿಯ ದಕ್ಷತೆಯನ್ನು ಹೆಚ್ಚಿಸಲು, ನಿಮ್ಮ ಬುದ್ಧಿವಂತಿಕೆಯ ಯಶಸ್ಸನ್ನು ಆತನಿಗೇ ಕೊಡಬೇಕಾಗುವುದು. ನಿಮ್ಮ ಆಲೋಚನೆಗಳನ್ನು ಆತನೇ ತನ್ನದೆಂದು ಹೇಳುವವರೆಗೂ ನಿಮ್ಮ ಯಶಸ್ಸನ್ನು ಆತನಿಗೆ ಅರ್ಪಿಸುವುದು ನಿಮಗೆ ಕ್ಷೇಮಕರ. ಯಾರೋ ಒಮ್ಮೆ ಹೇಳಿದ್ದರು, "ತನ್ನ ಕೆಲಸಗಳ ಯಶಸ್ಸನ್ನು ಇತರರಿಗೆ ಕೊಡಲು ಸಿದ್ಧನಿರುವ ವ್ಯಕ್ತಿ, ಈ ಪ್ರಪಂಚದಲ್ಲಿ ಎಲ್ಲರಿಗಿಂತ ಉತ್ತಮವಾದ ಕೆಲಸ ಮಾಡಬಲ್ಲ."

ನಿಮ್ಮ ಮೇಲಧಿಕಾರಿ ಸಂತುಷ್ಟನಾದರೆ, ನೀವೂ ಸಂತುಷ್ಟರಾಗ ಬಲ್ಲಿರಿ. ಆತನಿಗೆ ಬಡ್ತಿ ದೊರಕಿದರೆ ನಿಮಗೂ ಬಡ್ತಿ ದೊರಕುವ ಸಂಭವ ಹೆಚ್ಚುತ್ತದೆ.

೬) ಸದಾ ಸಕಾರಾತ್ಮಕ ಮನೋಭಾವ ಇಟ್ಟುಕೊಳ್ಳಿ

ಯಶಸ್ವಿ ಮೇಲಧಿಕಾರಿಗಳು ಸದಾ ಆಶಾವಾದಿಗಳಾಗಿರುತ್ತಾರೆ. ತಮ್ಮ ಕೈಕೆಳಗಿನ ಅಧಿಕಾರಿಗಳೂ ಇದೇ ದೃಷ್ಟಿ ಇಟ್ಟುಕೊಳ್ಳಲಿ ಎಂದು ಆಶಿಸುತ್ತಾರೆ. ನಾನು ಒಬ್ಬ ದಕ್ಷ ನೌಕರನನ್ನು ಬಲ್ಲೆ. ಆತ 'ಸಮಸ್ಯೆ', 'ಸಂಕಟ', 'ನಷ್ಟ'–ಇಂಥ ಪದಗಳನ್ನು ಎಂದಿಗೂ ಉಪಯೋಗಿಸುವುದೇ ಇಲ್ಲ. ಕಠಿಣ ಪರಿಸ್ಥಿತಿಗೆ ಆತ "ಸವಾಲ್" ಎಂಬ ಹೆಸರು ಕೊಡುತ್ತಾನೆ. ಅದಕ್ಕೆ ಜವಾಬು ನೀಡಲು ಅವಶ್ಯವಾದ ಯೋಜನೆಗಳನ್ನು ರೂಪಿಸುತ್ತಾನೆ.

ಮೇಲಧಿಕಾರಿಗಳೊಡನೆ ತನ್ನ ಸಹೋದ್ಯೋಗಿಗಳ ವಿಷಯ ಮಾತನಾಡುವಾಗ, ಅವರನ್ನು ನಿಂದಿಸುವ ಬದಲು–ಪ್ರಶಂಸಿಸಿ. ಈ ರೀತಿ ಮಾಡುವುದರಿಂದ, ಕಛೇರಿಯಲ್ಲಿ ನಿಮ್ಮ ವ್ಯಕ್ತಿತ್ವ ಪ್ರಭಾವಶಾಲಿಯಾಗುವುದು. ಹಾಗೂ ನಿಮ್ಮ ಸಹೋದ್ಯೋಗಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತೀರೆಂಬ ನಂಬಿಕೆ ಮೂಡುವುದು.

೭) ಕಛೇರಿಯಲ್ಲಿ ಹೊತ್ತು ಮೀರಿ, ಕುಳಿತುಕೊಳ್ಳಬೇಡಿ.

ಬೆಳಿಗ್ಗೆ ಹೊತ್ತಿಗೆ ಮುಂಚೆ ಬನ್ನಿ!

ಕಠಿಣ ಪರಿಶ್ರಮ ಮನುಷ್ಯನಲ್ಲಿ ಉತ್ಸಾಹ ಮತ್ತು ನಿಷ್ಠಾಭಾವಗಳನ್ನು ಉಂಟುಮಾಡುತ್ತದೆ. ಇದು ಇತರರಿಗೂ ಪ್ರೇರಣೆ ಕೊಡುತ್ತದೆ. ನಿಮ್ಮ ಅಧಿಕಾರಿಯನ್ನೂ ಪ್ರಸನ್ನಗೊಳಿಸುತ್ತದೆ. ಎಷ್ಟಾದರೂ ನೀವು ಆತನಿಗಾಗಿಯೇ ಕೆಲಸ ಮಾಡುತ್ತಿದ್ದೀರಲ್ಲವೇ? ಬೆಳಿಗ್ಗೆ ಕಛೇರಿ ಪ್ರಾರಂಭವಾಗುವ ಮುಂಚೆಯೇ ಬಂದು ಕೆಲಸ ಪ್ರಾರಂಭಿಸಿ. ಸಂಜೆ ಹೊತ್ತು ಮೀರಿ ಕುಳಿತುಕೊಳ್ಳಬೇಡಿ. ಹಾಗೆ ಮಾಡಿದರೆ ಮಾತ್ರ ನೀವು ಆಯಾಸವಿಲ್ಲದೆ ಆಹ್ಲಾದದಿಂದಿರಬಲ್ಲಿರಿ. ಬೆಳಿಗ್ಗೆ ಹೊತ್ತಿಗೆ ಮುಂಚೆ ಬರುವುದರಿಂದ, ನೀವು ಕೆಲಸವನ್ನು ಶೀಘ್ರವಾಗಿ ಪ್ರಾರಂಭಿಸುವ ಅಪೇಕ್ಷೆಯುಳ್ಳವರಾಗಿದ್ದೀರಿ ಎಂಬುದು ತಿಳಿಯುತ್ತದೆ. ಸಂಜೆ ಹೊತ್ತು ಮೀರಿ ಕುಳಿತುಕೊಳ್ಳುವುದರ ಅರ್ಥ, 'ನಿಮ್ಮ ಕೆಲಸ ಇನ್ನೂ ಪೂರೈಸಿಲ್ಲ' ಎಂದಾಗುತ್ತದೆ.

೮) ನಿಮ್ಮ ವಾಗ್ದಾನವನ್ನು ನೆರವೇರಿಸಿ

ತಮ್ಮ ಕೈಕೆಳಗಿನ ನೌಕರರ ನ್ಯೂನತೆಗಳನ್ನು, ಅಧಿಕಾರಿಗಳು ತಮಗೆ ತೊಂದರೆಯಾಗದಿದ್ದಲ್ಲಿ, ಪರಿಗಣಿಸುವುದಿಲ್ಲ. ಅವರು ಸಹಿಸಲಾರದ ವಿಷಯವೆಂದರೆ ಸಂದಿಗ್ಧತೆ, ಅಸ್ಪಷ್ಟತೆ. ನೀವು ಯಾವುದೇ ಕೆಲಸ ಮಾಡುವೆನೆಂದು ಹಟತೊಟ್ಟು ಮಾಡುವಲ್ಲಿ ವಿಫಲರಾದರೆ, ಮೇಲಧಿಕಾರಿ ನಿಮ್ಮ ಮೇಲೆ ಇಟ್ಟಿರುವ ನಂಬಿಕೆ ಕಳೆದುಕೊಳ್ಳುತ್ತೀರಿ. ಆ ಕೆಲಸವನ್ನು ನೀವು ಮಾಡಲಾರಿರಿ ಎಂದು ನಿಮಗನಿಸಿದರೆ, ಸಾಧ್ಯವಾದಷ್ಟು ಬೇಗ ಆ ವಿಷಯವನ್ನು ಮೇಲಧಿಕಾರಿಗೆ ತಿಳಿಸಿ. ಈ ಸೂಚನೆ ಮುಂಚಿತವಾಗಿಯೇ ತಿಳಿದರೆ ಆತನ ಕೋಪ ಕಡಿಮೆಯಾಗಬಹುದು. ಆಡಳಿತ ಮಂಡಲಿಯ ಸಲಹೆ

ಗಾರ ವಿಲಿಯಂ ಡೆಲಾನ್ ಈ ರೀತಿ ಹೇಳುತ್ತಾನೆ. "ವಿಶ್ವಾಸಘಾತುಕರಾಗುವ ಬದಲು ಪ್ರಾಮಾಣಿಕರಾಗಿ ತಪ್ಪು ಒಪ್ಪಿಕೊಳ್ಳುವುದು ಒಳ್ಳೆಯದು."

೯) ನಿಮ್ಮ ಮೇಲಧಿಕಾರಿಯನ್ನು ಚೆನ್ನಾಗಿ ಅರಿತುಕೊಳ್ಳಿ

ಪ್ರಸಿದ್ಧ ಆಂಗ್ಲ ಪ್ರಬಂಧಕಾರ ಮತ್ತು ವ್ಯವಹಾರ ಪಟು ಫ್ರಾನ್ಸಿಸ್ ಬೇಕನ್ ಒಮ್ಮೆ ಹೇಳಿದ್ದ –"ಜ್ಞಾನವೇ ಶಕ್ತಿ." ಮೇಲಧಿಕಾರಿಯ ಹಿಂದಿನ ಜೀವನ, ಆತನ ಅಭ್ಯಾಸಗಳು, ಸಂಸ್ಥೆಯ ಚರಿತ್ರೆ, ಕೆಲಸ ಮಾಡುವ ರೀತಿ, ವೃತ್ತಿಯ ಗುರಿ, ಹಿತ, ಅಹಿತಗಳ ವಿಷಯವಾಗಿ ತಿಳಿದುಕೊಳ್ಳಿ.

ನಿಮ್ಮ ಮೇಲಧಿಕಾರಿಗೆ ಕ್ರೀಡಾಭಿರುಚಿ ಇದೆಯೆಂದು ಇಟ್ಟುಕೊಳ್ಳಿ. ಆತನ ಪ್ರಿಯವಾದ ತಂಡ ಪಂದ್ಯದಲ್ಲಿ ಸೋತಿದೆ. ಆ ದಿನವೇ ನೀವು ಒಂದು ಬೃಹತ್ ಸಮಸ್ಯೆಯನ್ನು ಪರಿಹರಿಸಲು ಆತನ ಮುಂದಿಡಬೇಡಿ. ಅದು ಬುದ್ಧಿವಂತಿಕೆ ಅಲ್ಲ. ತನ್ನನ್ನು ಚೆನ್ನಾಗಿ ಅರಿತು, ತನ್ನ ಮನಸ್ಥಿತಿ ಹಾಗೂ ಅಪೇಕ್ಷೆಯನ್ನು ತಿಳಿದುಕೊಳ್ಳುವ, ತನ್ನ ಕೈಕೆಳಗಿನ ದಕ್ಷ ನೌಕರನನ್ನು ಅಧಿಕಾರಿ ಪ್ರಶಂಸಿಸುತ್ತಾನೆ.

ಎಂದಿಗೂ ಒಮ್ಮೆಲೇ ಯಾವ ನಿರ್ಣಯಕ್ಕೂ ಬರಲು ಪ್ರಯತ್ನಿಸಬೇಡಿ. ಕಾರಣಾಂತರದಿಂದ, ನಿಮ್ಮ ಮೇಲಧಿಕಾರಿ ತನ್ನ ಕಸುಬಿಗೆ ಸಂಬಂಧಪಟ್ಟ ತಂತ್ರ ವಿದ್ಯೆಯು ನಿಮ್ಮಂತ ಪದವೀಧರನಾಗದಿರಬಹುದು. ಆತ ನಿಮ್ಮ ಪದವಿಯ ಬಗ್ಗೆ ಅಸೂಯೆ ಪಡುವನೆಂಬ ಸಂಶಯ ನಿಮಗಾಗಬಹುದು. ಕೆಲವೊಮ್ಮೆ ತನ್ನ ಕೈಕೆಳಗಿನ ಪದವೀಧರ ನೌಕರ ಕಾರ್ಯನಿರತನಾಗಿದ್ದರೆ, ಅಧಿಕಾರಿಯ ಅಹಂಭಾವಕ್ಕೆ ಒತ್ತುಕೊಟ್ಟಂತಾಗಲೂಬಹುದು.

೧೦) ಮೇಲಧಿಕಾರಿಯೊಂದಿಗೆ ಅತಿ ನಿಕಟ ಸಂಬಂಧ ಇಟ್ಟುಕೊಳ್ಳಬೇಡಿ

ನಿಮ್ಮ ಅಧಿಕಾರಿಯನ್ನು ಚೆನ್ನಾಗಿ ಅರಿತುಕೊಳ್ಳಿ. ಆದರೆ ಪರಸ್ಪರ ವೈಯಕ್ತಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಷ್ಟು ಗಾಢ ಸಂಬಂಧ ಬೆಳಸಿಕೊಳ್ಳಬೇಡಿ. ಸಂಸ್ಥೆಯಲ್ಲಿ ನಿಮ್ಮ ಮತ್ತು ಮೇಲಧಿಕಾರಿಯ ಸ್ಥಾನಮಾನಗಳು ಸಮಾನವಲ್ಲ. ಗಾಢ ಪರಿಚಯದಿಂದ ಕೆಲವು ವೇಳೆ ಕೆಟ್ಟ ಪರಿಣಾಮಗಳಾಗುವ ಸಾಧ್ಯತೆಯೂ ಇರುತ್ತದೆ. ಪರಸ್ಪರ ನಂಬಿಕೆ ಹೆಚ್ಚಾಗುವುದರಿಂದ ಆಕಾಂಕ್ಷೆಗಳು ಹೆಚ್ಚಾಗುತ್ತವೆ. ಕೊನೆಗೆ ಇದರ ಪರಿಣಾಮ ದುಃಖದಾಯಕವೂ ಆಗಬಹುದು.

ನಿಮ್ಮಿಂದ ಹೆಚ್ಚಿನ ಆಸೆ, ಅಪೇಕ್ಷೆಗಳನ್ನು ಮೇಲಧಿಕಾರಿ ನಿರೀಕ್ಷಿಸಬಹುದು. ಅದರ ಒತ್ತಡದಿಂದ ನಿಮ್ಮ ಆಲೋಚನೆ ಹಾಗೂ ಕೆಲಸದ ಸ್ವಾತಂತ್ರ್ಯಕ್ಕೆ ಧಕ್ಕೆ ಬರಬಹುದು. ಮೇಲಧಿಕಾರಿಗೆ ಅತಿ ನಿಕಟವಾಗಿರುವ ಕಾರಣ, ಸಹೋದ್ಯೋಗಿಗಳು ನಿಮ್ಮನ್ನು ಸಂದೇಹದ ದೃಷ್ಟಿಯಿಂದ ನೋಡಬಹುದು. ನಿಮ್ಮನ್ನು ಅಪಮಾನಗೊಳಿಸಲು ಯತ್ನಿಸಬಹುದು. ಕೇವಲ ಮೇಲಧಿಕಾರಿಯೊಡನೆ ಸುಮಧುರ ಸಂಬಂಧವಿಟ್ಟುಕೊಂಡು ಸಂಸ್ಥೆಯಲ್ಲಿ ತನ್ನ ಸ್ಥಾನಮಾನಗಳನ್ನು ಸ್ಥಾಪಿಸಲು ಪ್ರಯತ್ನಿಸುವ ನೌಕರ ವಿಫಲನಾಗು

ತ್ತಾನೆ. ಆತನ ಸ್ಥಿತಿ, ಸಡಿಲವಾದ ಮಣ್ಣಿನಲ್ಲಿರುವ ಬೇರು. ಸಣ್ಣ ಪ್ರವಾಹದಲ್ಲೂ ಕೊಚ್ಚಿಹೋಗುವಂತಾಗಬಹುದು.

ನಿಮ್ಮ ಕೆಲಸಕಾರ್ಯಗಳಲ್ಲಿ ತಡೆಯಾಗುವಷ್ಟು ಗಾಢ ಸಂಬಂಧವನ್ನು ನಿಮ್ಮ ಮೇಲಧಿಕಾರಿಯೊಡನೆ ಬೆಳಸಬೇಡಿ. ಆ ಸಂಬಂಧ ನಿಮ್ಮ ಸೃಜನಶೀಲತೆ ಹಾಗೂ ದಕ್ಷತೆಗೆ ಭಂಗ ತರದಂತಿರಲಿ. ಕೆಲಸವನ್ನು ದಕ್ಷ ರೀತಿಯಲ್ಲಿ ಮಾಡುವುದರಿಂದ ಮಾತ್ರವೇ ನೀವು ಮೇಲಧಿಕಾರಿಗೆ ಹಿತ ಬಯಸಬಲ್ಲಿರಿ.

ಮೇಲಧಿಕಾರಿ ಹಾಗೂ ಕೆಳನೌಕರನ ನಡುವೆ ಇರುವ ಉತ್ತಮ ಸಂಬಂಧ ಇಬ್ಬರನ್ನೂ ಪ್ರಭಾವಶಾಲಿಗಳನ್ನಾಗಿ ಮಾಡಲು ಸಹಾಯಕವಾಗುವುದು. ಜೊತೆಗೆ ಎಲ್ಲರಿಗೂ ಲಾಭವನ್ನುಂಟುಮಾಡುವುದು.

ಅಧಿಕಾರಿ–ನೌಕರ ಸಂಬಂಧ ಹಸನಾಗಿ ವ್ಯವಸ್ಥಿ ನಳನಳಿಸಿ ನೌಕರನ ಉತ್ಕರ್ಷೆ ಆಗಬೇಕಾದರೆ ನೌಕರ ಅನುಸರಿಸಬಹುದಾದ ಕೆಲವು ಸೂತ್ರಗಳನ್ನು ಪ್ರಸ್ತುತ ಲೇಖನದಲ್ಲಿ ಕಾಣಬಹುದು. ಅಧಿಕಾರಿಯೂ ನೌಕರನೂ ಸಭ್ಯತೆಯ ಚೌಕಟ್ಟಿನೊಳಗೆ ವ್ಯವಹರಿಸುತ್ತಿರುವಾಗ ಇದು ಸರಿ. ಮುಂದಿನ ಈ ಎರಡು ನಿದರ್ಶನಗಳನ್ನು ಗಮನಿಸಿ.

ಸಿ. ವಿ. ರಾಮನ್ (೧೮೮೮–೧೯೭೦) ಆಗ(೧೯೦೯) ಭಾರತ ಸರ್ಕಾರದ ಸಹಾಯಕ ಮಹಾ ಲೆಕ್ಕಪತ್ರ ಅಧಿಕಾರಿ. ಇವರ ಮೇಲಧಿಕಾರಿ ಆಳುವ ಆಂಗ್ಲ ಪ್ರಭುಗಳ ಸಂತಾನದವ. ಈತನ ಮುಸುಡಿನಲ್ಲಿ ನೇಟಿವ್‌ಗಳನ್ನು (ಭಾರತೀಯರಿಗೆ ಬ್ರಿಟಿಷ್‌ರು ನೀಡಿದ್ದ ವ್ಯಂಗ್ಯ ನಾಮ) ಕಂಡರೆ ತಿರಸ್ಕಾರ ಸುರಿಯುತ್ತಿತ್ತು. ರಾಮನ್ ಈ ಮೇಲಧಿಕಾರಿಯ ಒಂದು ಹುಕುಮನ್ನು ಟೀಕಿಸಿ ಷರಾ ಬರೆದಿದ್ದರು. ಇದರಿಂದ ರೌದ್ರಾವತಾರ ತಳೆದ ಶ್ವೇತವರ್ಣಿ ಮಹಾಪ್ರಭು ನೇಟಿವ್ ರಾಮನ್‌ರ ಕೊಠಡಿಗೆ ದಡಬಡಾಯಿಸಿ ಬಂದು, ಆ ಪತ್ರವನ್ನು ಅವರ ಮೇಜಿನ ಮೇಲೆಸೆದು, ಅಲ್ಲಿದ್ದ ಕೆಂಪು ಶಾಯಿಕುಪ್ಪಿ ತೋರಿಸುತ್ತ "ರಾಮನ್! 'ಈ ಕುಪ್ಪಿಯಲ್ಲಿ ಕಪ್ಪು ಶಾಯಿ ಇದೆ' ಎಂದು ನಾನು ಹೇಳಿದರೆ ನೀವು ಹೇಳಬೇಕಾದದ್ದು 'ಅದು ಕಪ್ಪು ಶಾಯಿ ಖರೆ' ಎಂದು ತಿಳಿಯಿತೇ? ಇದು ಕಚೇರಿ ಶಿಸ್ತು." "ಅಭಿಮಾನಧನ ನೌಕರ ರಾಮನ್ ಸೆಟೆದೆದ್ದು ನಿಂತು ಮಾರಸ್ತ್ರ ತೂರಿಯೇ ಬಿಟ್ಟರು." "ನೀವು ಹಾಗೆ ಹೇಳಿದ್ದಾದರೆ 'ಒಂದೋ ನೀವು ಕುರುಡರು ಇಲ್ಲವೇ ಹುಚ್ಚರು ಅಥವಾ ಉಭಯರು' ಎಂದು ಉತ್ತರಿಸಬೇಕಾದದ್ದು ನನ್ನ ಕರ್ತವ್ಯ."

ರಾಮಾಯಣ ಕಿಷ್ಕಿಂಧಾಕಾಂಡ. ಸುಗ್ರೀವದೂತನಾಗಿ ಹನುಮಂತ ಅಪರಿಚಿತ ಆಗಂತುಕರಾದ ರಾಮಲಕ್ಷ್ಮಣರಲ್ಲಿಗೆ ಹೋಗಿ ಸ್ವಪರಿಚಯ ಹೇಳಿ ಇವರನ್ನು ಪ್ರಸನ್ನಗೊಳಿಸುತ್ತಾನೆ. ಆಗ ಲಕ್ಷ್ಮಣನಿಗೆ ರಾಮ ಈ ಹನುಮಂತನ ವಾಗ್ವೈಖರಿ ಬಗ್ಗೆ ಹೇಳುತ್ತಾನೆ "ಅವಿಸ್ತರ—ಮಸಂದಿಗ್ಧ ಮವಿಲಂಬಿತಮದ್ರುತಮ್" (ಮಾತು ಅವಿಸ್ತರವೂ ಅಸಂದಿಗ್ಧವೂ ಅವಿಲಂಬಿತವೂ ಅದ್ರುತವೂ ಆಗಿರಬೇಕು.)—ನಿಜ, ನುಡಿದರೆ ಮುತ್ತಿನ ಹಾರದಂತಿರಬೇಕು.

ಬಹೂಪಯೋಗಿ ಅಡಿಕೆ

ಎಂ. ಎಸ್. ಲಕ್ಷ್ಮಣಾಚಾರ್

"ಸ್ವಾದಿಷ್ಟ!" "ಎಷ್ಟು ರುಚಿ!" "ಮುಖದ ಸೌಂದರ್ಯವರ್ಧಕ" ಮುಂತಾದ ಕೃತಕ ಜಾಹೀರಾತುಗಳಿಗೆ ಮೋಸಹೋಗಿ ಚ್ಯೂಯಿಂಗ್ ಗಮ್ ಜಗಿಯುತ್ತ ವ್ಯಕ್ತಿತ್ವವನ್ನೇ ಉಗಿಯುತ್ತಿರುವ ನಮ್ಮ ಜನಮಂದಿಗೆ ನಿಸರ್ಗದ ಈ ವರದಾನ ಏಕೆ ಅರ್ಥವಾಗುತ್ತಿಲ್ಲ?—ಅಡಕೆ! ಬಡವನಿಂದ ಸಿರಿವಂತನ ವರೆಗೆ ಎಲ್ಲ ಸಂದರ್ಭಗಳಲ್ಲಿಯೂ ಒದಗುವ ಈ ನೈಸರ್ಗಿಕ ಫಲದ ಮಹತ್ತ್ವ ಏನು? ಓದಿ ಈ ಲೇಖನ.

ಅಡಕೆಯ ಸಸ್ಯಶಾಸ್ತ್ರದ ಪಾರಿಭಾಷಿಕ ನಾಮಧೇಯ ಅರೆಕಾ ಕಾಟೇಚು. ಅಡಕೆ ಮರವನ್ನು ಸಂಸ್ಕೃತದಲ್ಲಿ ಚಿಕ್ಕಾಣಂ (ತೆಳ್ಳನೆಯ ನುಣುಪಾದ ಕಾಂಡವಿರುವುದರಿಂದ), ಧೀರ್ಘಪಾದಕಂ (ಎತ್ತರವಾಗಿ ಬೆಳೆಯುವ ಮರವಾದ್ದರಿಂದ) ಎಂದೂ ಕರೆಯುತ್ತಾರೆ. ಅಡಕೆ ಎನ್ನುವುದು ಅದೇ ಹೆಸರಿನ ಮರದಿಂದ ದೊರಕುವ ಕಾಯನ್ನು ಅಥವಾ ಹಣ್ಣನ್ನು ಸಂಸ್ಕರಿಸಿದ ಸಾಧಾರಣವಾಗಿ ಜಗಿಯಲು ಉಪಯೋಗಿಸುವ ಪದಾರ್ಥ.

ಭಾರತ, ಬಾಂಗ್ಲಾದೇಶ, ಶ್ರೀಲಂಕ, ಇಂಡೋನೇಷಿಯಾ, ಥೈವಾನ್, ಜಾವಾ, ಫಿಲಿಪ್ಪೈನ್ಸ್‌ನಂತಹ ಉಷ್ಣ ಪ್ರದೇಶಗಳಲ್ಲೂ, ಈಸ್ಟ್ ಇಂಡೀಸ್ ದ್ವೀಪಗಳಲ್ಲೂ ಅಡಕೆಯನ್ನು ಬೆಳೆಯುತ್ತಿದ್ದಾರೆ. ಇದರ ಉಗಮ ಸ್ಥಾನ ಫಿಲಿಪ್ಪೈನ್ಸ್ ಆಗಿರಬೇಕು. ಬಹು ಹಿಂದೆ ಭಾರತ ಮತ್ತು ಪೂರ್ವ ರಾಷ್ಟ್ರಗಳಲ್ಲಿನ ದ್ವೀಪಗಳ ನಡುವೆ ನೌಕಾ ವ್ಯಾಪಾರ ನಡೆಯುತ್ತಿತ್ತು: ಬಹುಶಃ ಅಂದು ಅಡಕೆಯು ಫಿಲಿಪ್ಪೈನ್ಸ್‌ನಿಂದ ಭಾರತಕ್ಕೆ ಬಂದದ್ದಾಗಿರಬೇಕು. ಏಷ್ಯಾ ಖಂಡದಾದ್ಯಂತ ಅಡಕೆಯನ್ನು ಜಗಿಯುವ ಪದ್ಧತಿಯು ಇದೆಯಾದರೂ ಅದನ್ನು ಇಂದು ಭಾರತ ಮತ್ತು ಬಾಂಗ್ಲಾ ದೇಶಗಳಲ್ಲಿ ಮಾತ್ರವೇ ವ್ಯವಸ್ಥಿತವಾಗಿ ಕೃಷಿ ಮಾಡುತ್ತಿರುವುದು.

ಅಡಕೆ ಬೆಳೆ

ಅಡಕೆ ಭಾರತದ ಪ್ರಧಾನ ಸಗಟು ಬೆಳೆಗಳಲ್ಲೊಂದಾಗಿದೆ. ಇತ್ತೀಚೆಗೆ ಲಭ್ಯವಾಗಿರುವ ಅಧಿಕೃತ ಅಂಕಿ ಅಂಶಗಳ ಪ್ರಕಾರ ಭಾರತದಲ್ಲಿ ಅಡಕೆ ಬೆಳೆಯನ್ನು ಸುಮಾರು ೨,೪೦,೦೦೦ ಹೆಕ್ಟೇರ್ ಪ್ರದೇಶಗಳಲ್ಲಿ ಕೃಷಿ ಮಾಡಿ, ೨,೭೫,೦೦೦ ಟನ್‌ಗಳಷ್ಟು ಸಂಸ್ಕರಿಸಿದ ಅಡಕೆಯನ್ನು ಉತ್ಪಾದಿಸು

ತ್ತಿದ್ದಾರೆ. ಕರ್ನಾಟಕ, ಕೇರಳ, ಅಸ್ಸಾಂ ಪ್ರಮುಖವಾಗಿ ಅಡಕೆಯನ್ನು ಉತ್ಪಾದಿಸುವ ರಾಜ್ಯಗಳಾಗಿವೆ. ಇವುಗಳ ಒಟ್ಟು ಕೊಡುಗೆಯು ಭಾರತದ ಒಟ್ಟು ಉತ್ಪಾದನೆಯ ಶೇಕಡ ೮೬ ರಷ್ಟಿದೆ. ಬಾಕಿ ಮೇಘಾಲಯ, ಪಶ್ಚಿಮ ಬಂಗಾಳ, ತಮಿಳುನಾಡು, ಮಹಾರಾಷ್ಟ್ರ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ತ್ರಿಪುರ ಮುಂತಾದುವು.

ಅಡಕೆ ಕರ್ನಾಟಕದ ಒಂದು ಮುಖ್ಯ ತೋಟಗಾರಿಕೆ ಬೆಳೆ. ಭಾರತದ ಒಟ್ಟು ಅಡಕೆಯ ಉತ್ಪಾದನೆಯಲ್ಲಿ ಕರ್ನಾಟಕದ ಕೊಡುಗೆಯು ಶೇಕಡ ೪೯ರಷ್ಟಿದೆ. (ಭಾರತ ಸರ್ಕಾರದ ಲಭ್ಯವಾದ ಅಂಕಿ ಅಂಶಗಳ ಪ್ರಕಾರ ೧೯೯೩-೯೪ ಕರ್ನಾಟಕದಲ್ಲಿ ಅಡಕೆ ಬೇಸಾಯ ಪ್ರದೇಶದ ವಿಸ್ತೀರ್ಣ ೭೭,೦೦೦ ಹೆಕ್ಟೇರ್ ಆಗಿದ್ದು ಉತ್ಪಾದನೆಯು ೧,೧೩,೩೦೦ ಟನ್‌ಗಳಾಗಿತ್ತು) ಅಡಕೆಯನ್ನು ಪ್ರಮುಖವಾಗಿ ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ತುಮಕೂರು ಮತ್ತು ಚಿತ್ರದುರ್ಗಗಳಲ್ಲಿ ಬೆಳೆಯುತ್ತಿದ್ದಾರೆ. ಈ ಜಿಲ್ಲೆಗಳ ಒಟ್ಟು ಅಡಕೆ ಬೆಳೆ ವಿಸ್ತೀರ್ಣ ಕರ್ನಾಟಕದ ಒಟ್ಟು ಅಡಕೆ ಬೆಳೆ ವಿಸ್ತೀರ್ಣದ ಶೇಕಡ ೯೨ ರಷ್ಟಿದೆ. ಭಾರತದಲ್ಲಿ ಅತಿ ಹೆಚ್ಚು ಇಳುವರಿಯನ್ನು ಕೊಡುವ ಅಡಕೆ ತೋಟಗಳು ಕರ್ನಾಟಕ ಸಂಸ್ಥಾನದಲ್ಲಿದೆ. ಭಾರತದ ಸರಾಸರಿ ಇಳುವರಿಯು ಹೆಕ್ಟೇರ್‌ಗೆ ಸುಮಾರು ೧೧೬೦ ಕೆ. ಜಿ. ಸಂಸ್ಕರಿಸಿದ ಅಡಕೆಯಾದರೆ ಅದು ಕರ್ನಾಟಕದಲ್ಲಿ ೧೪೭೦ ಕೆ.ಜಿ.ಯಷ್ಟಿದೆ.

ಅಡಕೆಯಲ್ಲಿರುವ ಪೋಷಕಗಳು

ಅಡಕೆಯು ಸಂಪೂರ್ಣವಾಗಿ ಹಣ್ಣಾದಾಗ ಕಾಂತಿಯುತ ಹಳದಿ ಕಿತ್ತಲೆ ಬಣ್ಣದ್ದಾಗಿರುತ್ತದೆ. ಪಕ್ವವಾದ ಹಸಿ ಅಡಕೆ ಮತ್ತು ಪಕ್ವವಾದ ಹಣ್ಣು ಅಡಕೆಯಲ್ಲಿರುವ ಸರಾಸರಿ ಶೇಕಡಾವಾರು ಪೌಷ್ಟಿಕಾಂಶಗಳು ಈ ರೀತಿ ಇವೆ.

ಪೋಷಕಗಳು	ಪಕ್ವವಾದ ಹಸಿ ಅಡಕೆ	ಪಕ್ವವಾದ ಹಣ್ಣು ಅಡಕೆ
ತೇವಾಂಶ	೬೯.೪—೭೪.೧	೩೮.೯—೫೬.೭
ಕಚ್ಚಾನಾರು	೮.೨— ೯.೮	೧೧.೪—೧೫.೪
ಕೊಬ್ಬು	೮.೧—೧೨.೦	೯.೫—೧೫.೧
ಬೂದಿ	೧.೨— ೨.೫	೧.೧— ೧.೫
ಟ್ಯಾನಿನ್	೧೭.೨—೨೯.೮	೧೧.೧—೧೭.೮

ಇವುಗಳಲ್ಲದೆ ಅಡಕೆಯಲ್ಲಿ ಕ್ಯಾಲ್ಸಿಯಂ, ರಂಜಕ ಕಬ್ಬಿಣ, ಇತ್ಯಾದಿಗಳೂ ಇರುವುದುಂಟು. ಅಡಕೆಯಲ್ಲಿ ಟ್ಯಾನಿನ್ ಮತ್ತು ಅಲ್ಕಲಾಯ್ಡ್‌ಗಳು ಇವೆ. ಅಲ್ಕಲಾಯ್ಡ್‌ಗಳಲ್ಲಿ ಬಹು ಮುಖ್ಯವಾದದ್ದು ಅರೆಕೋಲಿನ್. ಇದು ಶೇಕಡ ೧ ಕ್ಕಿಂತ ಕಡಿಮೆ ಇರುತ್ತೆ. ಇದು ಹಸಿ ಅಡಕೆಯಲ್ಲಿ ಜಾಸ್ತಿ ಇರುತ್ತೆ.

ಉಪಯೋಗಗಳು

ಪೂಗೀಫಲ ಸಮಾಯುಕ್ತಂ ನಾಗವಲ್ಲೀ
ದಳೈರ್ಯುತಂ ।
ಕರ್ಪೂರಚೂರ್ಣ ಸಂಯುಕ್ತಂ ತಾಂಬೂಲಂ
ಪ್ರತ್ಯಗೃಹ್ಯತಾಂ ॥

ಹಿಂದೂಗಳು ತಮ್ಮ ಪೂಜೆ ಪುರಸ್ಕಾರವನ್ನು ಮಾಡುವಾಗ ಈ ಮಂತ್ರವನ್ನು ಹೇಳುವುದುಂಟು. ಹುಟ್ಟು ಸಾವು ಮದುವೆಮುಂಜಿ, ಶುಭಶೋಭನ, ಯಜ್ಞಯಾಗ, ಕೂಟ ಸತ್ಕಾರಸಭೆ ಮುಂತಾದವುಗಳಲ್ಲಿ ಅಡಕೆ ಬೇಕೇಬೇಕು. ದೇವತಾಕಾರ್ಯಗಳಲ್ಲಿ ಮದುವೆಮುಂಜಿ ಮುಂತಾದ ಮಂಗಳಕಾರ್ಯಗಳಲ್ಲಿ ಮೊತ್ತಮೊದಲಿಗೆ ದೇವರಿಗೆ ಸಮರ್ಪಿಸುವ ತಾಂಬೂಲದಲ್ಲಿನ 'ಪೂಗೀಫಲ'ದಲ್ಲಿ ಅಡಕೆಯು ಮುಖ್ಯ ವಸ್ತುವಾಗಿರುತ್ತೆ. 'ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು' ಎಂಬ ಗಾದೆ ಬಹು ಹಿಂದಿನಿಂದಲೂ ಇದೆ. ಗುರುದಕ್ಷಿಣೆ, ದಾನ ಧರ್ಮ ಮತಾಚಾರಗಳ ಸಂದರ್ಭದಲ್ಲಿ ಅಡಕೆಯನ್ನು ಕಾಯಾಗಿಯೂ, ಸಂಸ್ಕರಿಸಿದ ರೂಪದಲ್ಲೂ ಉಪಯೋಗಿಸುತ್ತಾರೆ.

ಜಗಿಯುವುದರಿಂದುಂಟಾಗುವ ಪ್ರಯೋಜನಗಳು :

ಅಡಕೆಯಲ್ಲಿಯ ವಿವಿಧ ಗುಣಗಳು ಅದು ಹಣ್ಣಾಗುತ್ತಿದ್ದಂತೆ ಕಡಿಮೆ ಆಗುತ್ತದೆ. ವಾಗ್‌ಭಟ್ (ಕ್ರಿ.ಶ. ೪) ಅಡಕೆಯ ಬಗ್ಗೆ ಹೇಳಿರುವುದೇ ಬಹುಶಃ ಬಹು ಹಳೆಯ ದಾಖಲೆ ಎನ್ನಬಹುದು. ಅಡಕೆಯನ್ನು ಲೂಕೋಡೆರ್ಮ, ತೊನ್ನು, ಕೆಮ್ಮಲು, ಬೀಳುರೋಗ, ಹೊಟ್ಟೆಯಲ್ಲಿ ಹುಳುಗಳು ನಿಶ್ಶಕ್ತಿ ಮುಂತಾದವುಗಳ ಚಿಕಿತ್ಸೆಯಲ್ಲಿ ಉಪಯೋಗಿಸುತ್ತಾರೆ. ಭಾವಮಿಶ್ರ (ಕ್ರಿ.ಶ. ೧೩) ಅಡಕೆಯು ಹಸಿವನ್ನುಂಟು ಮಾಡುವ ಮತ್ತು ಉದ್ದೀಪನ ಗುಣಳಿಂದ ಕೂಡಿರುವ ಪದಾರ್ಥವೆಂದು ಹೇಳಿದ್ದಾನೆ. ಹಸಿ ಅಡಕೆಯಲ್ಲಿ ಅರೆಕೊಲಿನ್ ಹೆಚ್ಚಿರುವುದುದರಿಂದ ಅದನ್ನು ಜಗಿದಾಗ ಮತ್ತು ಹಿಡಿದಂತಾಗಿ ತಲೆ ತಿರುಗುವಿಕೆಯುಂಟಾಗುತ್ತದೆ. ಚೆನ್ನಾಗಿ ಒಣಗಿಸಿದ ಅಡಕೆಯನ್ನು ಜಗಿದಾಗ ಈ ತಲೆ ತಿರುಗುವಿಕೆಯು ಉಂಟಾಗುವುದಿಲ್ಲ. ಅಡಕೆಪುಡಿಯು ದಂತರಂದನೆಗೆ ಅತ್ಯುತ್ತಮ. ಅದು ಮಾತ್ರವಲ್ಲ, ಪಶುವೈದ್ಯ ಶಾಸ್ತ್ರದಲ್ಲಿ ಅಡಕೆಪುಡಿ ಪ್ರಾಣಿಗಳಿಗೆ ಕ್ರಿಮಿನಾಶಕ ಭೇಷಜವೆಂದು ಹೇಳಿದೆ. ಬರೀ ಅಡಕೆ ತಿನ್ನುವುದು ಒಳ್ಳೆಯದಲ್ಲ. ಜಾಸ್ತಿ ತಿನ್ನುವುದರಿಂದ ಉರಿದಂತಾಗುತ್ತದೆ. ಹೃದಯ ಬಡಿತವು ಹೆಚ್ಚುತ್ತದೆ. ಅಡಕೆಯನ್ನು ಬಹು ಹಿಂದಿನ ಕಾಲದಿಂದಲೂ ವೀಳ್ಯದೆಲೆ ಮತ್ತು ಸುಣ್ಣದ ಜೊತೆಗೆ ಉಪಯೋಗಿಸುತ್ತಿದ್ದಾರೆ. ಈ ತಾಂಬೂಲ ಸೇವನೆಯಿಂದ ಅನೇಕ ಪ್ರಯೋಜನವಿದೆ. ಬಾಯಿಯಲ್ಲಿಯ ದುರ್ವಾಸನೆ ದೂರವಾಗುತ್ತದೆ. ಉದರವಾಯು ನಿವಾರಣೆಯಾಗುತ್ತದೆ. ಗಂಟಲಿನಲ್ಲಿಯ ಕಫ ಕತ್ತರಿಸಲ್ಪಡುತ್ತದೆ. ಹೊಟ್ಟೆಯಲ್ಲಿಯ ಹುಳು ನಾಶವಾಗುತ್ತದೆ. ದಂತಕ್ಷಯವು ತಡೆಯಲ್ಪಡುತ್ತದೆ. ತಾಂಬೂಲ ಸೇವನೆಯು ಜೊಲ್ಲುರಸವನ್ನು ಹೆಚ್ಚು ಉತ್ಪಾದಿಸಿ ಜೀರ್ಣ ಶಕ್ತಿಯನ್ನು ವರ್ಧಿಸುತ್ತದೆ. ಕೆಲವೊಮ್ಮೆ ಈ ತಾಂಬೂಲದಲ್ಲಿ ಹೊಗೆಸೊಪ್ಪು, ಪಚ್ಚ ಕರ್ಪೂರ, ಸಾಂಬಾರ ಪದಾರ್ಥಗಳನ್ನೂ ಸಹ ಸೇರಿಸುವುದುಂಟು. ತಾಂಬೂಲವನ್ನು

ನಿರಂತರವಾಗಿ ಹಾಕಿಕೊಳ್ಳುವುದರಿಂದ ಬಾಯಿಯಲ್ಲೂ ವಸಡಿನಲ್ಲೂ ಇರುವ ಚರ್ಮಗಳನ್ನು ಕೆರಳಿಸುವ ಸಾಧ್ಯತೆ ಇವೆ. ಅದರಿಂದಾಗಿ ಬಾಯಿ ಹುಣ್ಣು ಬರುವುದು, ಉರಿಯೂತಉಂಟಾಗುವುದು, ಹಲ್ಲುಗಳು ಅಲ್ಲಾಡತೊಡಗುವುದು, ಕೆಲವೊಮ್ಮೆ ಕ್ಯಾನ್ಸರ್ ಆಗುವುದು–ಇವುಗಳಿಗೆ ಕಾರಣವಾಗುತ್ತದೆ. ಅಂಗಡಿಗಳಲ್ಲೂ, ಹೋಟೆಲ್ ಬಳಿಯಲ್ಲೂ, ಊಟವಾದ ನಂತರ ಹಾಕಿಕೊಳ್ಳಲೆಂದು ವಿಧವಿಧ ಪಾನ್ ಸುಪಾರಿ ಇಂದು ದೊರಕುತ್ತಿವೆ. ಪಾನ್ ಸುಪಾರಿಯ ಉಪಯೋಗವು ಕ್ಯಾನ್ಸರ್ ಖಾಯಿಲೆಗೆ ದಾರಿಯೆಂದು ಒಂದು ಆಕ್ಷೇಪಣೆ ಇದೆ. ಸುಪಾರಿಯಲ್ಲಿ ಹೊಗೆಸೊಪ್ಪು ಅಮಿತವಾಗಿ ಸೇವಿಸುವುದೇ ಇದಕ್ಕೆ ಕಾರಣವೆಂದೂ ಹೇಳಲಾಗಿದೆ.

ಇತರ ಪ್ರಯೋಜನಗಳು

ಭಾರತದಲ್ಲಿ ಅಡಕೆಯ ಉತ್ಪಾದನೆಯು ಸ್ವಯಂ ಪರಿಪೂರ್ಣತೆಯನ್ನು ಮುಟ್ಟಿರುವ ಈ ಕಾಲದಲ್ಲಿ ಅಡಕೆಯನ್ನು ಕೇವಲ ಜಗಿಯುವುದಕ್ಕೆ ಮಾತ್ರ ಸೀಮಿತ ಪಡಿಸುವ ಬದಲು ಅಡಕೆಯ ಇತರ ಉಪಯೋಗ ವಸ್ತುಗಳ ತಯಾರಿಕೆಯತ್ತ ಗಮನ ಹರಿಸಬೇಕಾಗಿದೆ. ಈಗಾಗಲೇ ಈ ದಿಕ್ಕಿನಲ್ಲಿ ಕೆಲವಾರು ಸಂಶೋಧನೆಗಳು ನಡೆದಿವೆ. ಇವುಗಳನ್ನು ಆರ್ಥಿಕ ದೃಷ್ಟಿಯಿಂದ ಲಾಭದಾಯಕವಾಗಿ ಎಷ್ಟರಮಟ್ಟಿಗೆ ಕಾರ್ಯಗತ ಮಾಡಬಹುದೆಂಬುದನ್ನು ಇನ್ನೂ ವಿಶಾಲವಾಗಿ ಅಧ್ಯಯನಮಾಡಿ ತಿಳಿಯಬೇಕಾಗಿದೆ. ಇಲ್ಲಿಯವರೆಗೆ ಅಡಕೆಯ ಇತರ ಉಪಯೋಗಗಳ ಬಗ್ಗೆ ನಡೆದಿರುವ ಸಂಶೋಧನೆಯ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

ಅಡಕೆಕಾಯಿ

ಅಪಕ್ವವಾದ ಅಡಕೆ ಕಾಯಿಗಳನ್ನು ಸಂಸ್ಕರಿಸುವಾಗ ದೊರಕುವ ಉಪಪದಾರ್ಥವೇ ಟ್ಯಾನಿನ್, ಅಪಕ್ವವಾದ ಕಾಯಿಗಳನ್ನು ಸಿಪ್ಪೆ ತೆಗೆದು ನೀರಿನಲ್ಲೋ ಅಥವಾ ಇದಕ್ಕಿಂತ ಮುಂಚೆಯೇ ಸಂಸ್ಕರಿಸಿದಾಗ ದೊರಕಿದ ಕೆಂಪು ಬಣ್ಣದ ದ್ರಾವಕದಲ್ಲೋ ಉಂಡೆಯಾಗಿಯೋ ಅಥವಾ ಎರಡು ಅಥವಾ ಅದಕ್ಕಿಂತ ಹೆಚ್ಚಾಗಿ ಕತ್ತರಿಸಿಯೋ ತೆಗೆದ ಹೋಳುಗಳನ್ನು ಕುದಿಸಿ ದೊರಕುವ ದ್ರಾವಕದಲ್ಲಿ ಟ್ಯಾನಿನ್ ಅಡಕವಾಗಿರುತ್ತೆ. ಈ ದ್ರಾವಕವನ್ನು ಚೊಗರು ಅಥವಾ ಕಳಿ ಎಂದು ಕರಿಯುತ್ತಾರೆ. ಇದರ ಪ್ರಮಾಣವು ಶೇಕಡ ೧೫.೫೫. ಈ ದ್ರಾವಕದಲ್ಲಿ ಕಂಡು ಬರುವ ಸಸಿಯನ್ನು ಹೊರತೆಗೆದು ಒಣಗಿದಾಗ ದೊರಕುವುದೇ ಅಡಿಕೆ ಧೂಳು. ಈ ಧೂಳನ್ನು ಚೊಗರನ್ನು ಜಗಿಯುವುದಕ್ಕೋ ಅಥವಾ ಚರ್ಮವನ್ನು ಹದಮಾಡಲೋಸುಗವೋ ಉಪಯೋಗಿಸುತ್ತಾರೆ. ಟ್ಯಾನಿನ್‌ನ ಗುಣಗಳನ್ನು ಸಂಶೋಧನೆಗಳಿಂದ ನಾವು ಕಂಡು ಹಿಡಿಯುವುದಕ್ಕಿಂತ ಮುಂಚೆಯೇ ಆಗ್ನೇಯ ಏಷ್ಯಾ ಮತ್ತು ಪೆಸಿಫಿಕ್ ಸಮುದ್ರ ದೇಶಗಳಲ್ಲಿ ಅದನ್ನು ಬಟ್ಟೆಗೆ, ಹಗ್ಗಕ್ಕೆ ಬಣ್ಣ ಹಾಕಲು ಮತ್ತು ಗೃಹದಾವಶ್ಯಕ್ಕೆ ಬೇಕಾದ ಚರ್ಮವನ್ನು ಹದಮಾಡಲೂ ಉಪಯೋಗಿಸುತ್ತಿದ್ದರು. ಅಡಕೆ ಕಾಯಿಯಿಂದ ದೊರಕುವ ಟ್ಯಾನಿನ್ ಆಸಿಡ್ ಅಥವಾ ಗ್ಯಾಲಿಕ್ ಆಸಿಡ್‌ಅನ್ನು ಫೆರಸ್‌ಸಲ್ಫೇಟ್‌ನೊಂದಿಗೆ ಬಿಸಿಯಾದ ನೀರಿನಲ್ಲಿ ಮಿಶ್ರಮಾಡಿ ತಯಾರಿಸುವ ಮಶಿಯನ್ನು ನಾವು ಸಾಧಾರಣ

ವಾಗಿ ಬರೆಯಲು ಉಪಯೋಗಿಸುವ ಕಪ್ಪು ಮಶಿಗೆ ಹೋಲಿಸಬಹುದು.

ಅಡಕೆಕಾಯಿಯಲ್ಲಿ ಶೇಕಡ ೮ ರಿಂದ ೧೨ ರವರೆಗೂ ಕೊಬ್ಬು ಅಡಗಿರುತ್ತದೆ. ಹೆಕ್ಸೇನ್‌ನನ್ನು ಉಪಯೋಗಿಸಿ ಅಡಕೆಯಿಂದ ಕೊಬ್ಬನ್ನು ಭಟ್ಟಿ ತೆಗೆಯಬಹುದು. ಆ ಅಡಕೆ ಕೊಬ್ಬನ್ನು ಜಲಜನಕ ಸಂಯುಕ್ತವಾದ (ಹೈಡ್ರೋಜನೇಟೆಡ್) ಕೊಬ್ಬರಿ ಎಣ್ಣೆಗೆ ಹೋಲಿಸಿದಾಗ ತುಲನಾತ್ಮಕ ಗುಣಗಳಿವೆಯೆಂದು ಕಂಡುಬಂದಿರುವುದುಂಟು. ಅಡಕೆ ಕೊಬ್ಬನ್ನು ಸಿಹಿತಿಂಡಿ, ಘಮಘಮಿಸುವ ಭಕ್ಷಣಗಳು, ಬಿಸ್ಕಟ್ ಇತ್ಯಾದಿಗಳ ತಯಾರಿಕೆಯಲ್ಲಿ ಉಪಯೋಗಿಸಬಹುದು. ಇದು ವನಸ್ಪತಿಯಿಂದ ತಯಾರಿಸಿದ ಪದಾರ್ಥಗಳಿಗೆ ಸಮಾನವಾಗಿರುತ್ತೆಂದು ಹೇಳಲಾಗಿದೆ. ಅನೇಕ ಸ್ಥಳೀಯ ವೈದ್ಯ ರೀತ್ಯಾ ಅಡಕೆಗೆ ಜೀರ್ಣಶಕ್ತಿ, ವಸಡುಗಳನ್ನು ಬಲಪಡಿಸುವುದು, ವಸಡುಗಳ ರಕ್ತಸ್ರಾವವನ್ನು ತಡೆಗಟ್ಟುವುದು ಇತ್ಯಾದಿ ಅನೇಕ ಫಲಪ್ರದ ಗುಣಗಳಿರುವುದರಿಂದ ಬೊಂಬಾಯಿ ವಿಶ್ವವಿದ್ಯಾಲಯದವರು ಈ ಅಡಕೆ ಕೊಬ್ಬನ್ನು ಟೂತ್‌ಪೇಸ್ಟ್ ಮತ್ತು ಚೂಯಿಂಗ್‌ಗಮ್‌ನ ತಯಾರಿಕೆಯಲ್ಲಿ ಒಂದು ಘಟಕವಾಗಿ ಉಪಯೋಗಿಸಬಹುದೆಂದು ಸಂಶೋಧನೆಗಳಿಂದ ದೃಢಪಡಿಸಿದ್ದಾರೆ.

ಅಡಕೆ ಸಿಪ್ಪೆ

ಇದು ಅಡಕೆಕಾಯಿಯ ಒಟ್ಟು ತೂಕದ ಶೇಕಡ ೭೦–೮೦ ರಷ್ಟಿರುತ್ತೆ. ಸುಮಾರು ಒಂದು ಲಕ್ಷ ಟನ್‌ನಷ್ಟು ಒಣಸಿಪ್ಪೆಯು ವರ್ಷಾವರ್ಷ ದೊರಕಲು ಸಾಧ್ಯ. ಇದನ್ನು ಇಂದು ಬಹುವಾಗಿ ನೀರು ಕಾಯಿಸುವುದಕ್ಕಾಗಿಯೂ (ಅದರಲ್ಲೂ ಮಳೆಗಾಲದಲ್ಲಿ), ಅಡಕೆ ತೋಟಗಳಲ್ಲಿ ಕಳೆ ಬೆಳೆಯುವದನ್ನು ಭೂಮಿಯಿಂದ ತೇವವು ನಷ್ಟವಾಗುವುದನ್ನೂ ತಡೆಗಟ್ಟಲು ಅಡಕೆ ಮರದ ಬೇರಿಗೆ ರಕ್ಷಣೆಯಾಗಿ ಹೊದಿಸಲು ಉಪಯೋಗಿಸುತ್ತಾರೆ. ಹಿಂದೆಲ್ಲಾ ಇಂಡೋನೇಷ್ಯಾ ಮತ್ತು ಫಿಲಿಪ್ಪೈನ್ಸ್‌ನಲ್ಲಿ ಇದನ್ನು ಟೂತ್ ಬ್ರಷ್ ತಯಾರಿಕೆಯಲ್ಲಿ ಉಪಯೋಗಿಸುತ್ತಿದ್ದರಂತೆ. ಅಡಕೆ ಸಿಪ್ಪೆಯಲ್ಲಿ ಸುಮಾರು ಶೇಕಡ ೫೭ ಸೆಲ್ಯುಲೋಸ್ ಮತ್ತು ಸಿದ್ಧವಾದ ನಾರುಗಳಿರುತ್ತವೆ. ಈ ನಾರುಗಳಲ್ಲಿ ಎರಡು ವಿಧವುಂಟು. ಸಿಪ್ಪೆಯ ಒಳ ಮೇಲ್ಪದರದಲ್ಲಿರುವ ನಾರು ಗಟ್ಟಿಯಾಗಿಯೂ ಅದರ ಕೆಳಗಿನ ಪದರದಲ್ಲಿರುವ ನಾರು ಮೃದುವಾಗಿಯೂ ಇರುತ್ತದೆ. ಸೆಣಬಿನ ನಾರಿಗೆ ಹೋಲಿಸಿದರೆ ಅಡಿಕೆ ಸಿಪ್ಪೆಯಲ್ಲಿರುವ ನಾರಿನ ಸರಾಸರಿ ಉದ್ದವು ಬಹು ಮೊಟಕಾಗಿರುತ್ತೆ. ಕಲ್ಕತ್ತಾದಲ್ಲಿರುವ ಸೆಣಬು ವಿಜ್ಞಾನ ಸಂಶೋಧನಾ ಕೇಂದ್ರದಲ್ಲಿ ನಡೆಸಿದ ಅಧ್ಯಯನಗಳಿಂದ ತಿಳಿದುಬಂದಿರುವುದೇನೆಂದರೆ ಅಡಕೆ ಸಿಪ್ಪೆಯನ್ನು ಕಾರ್ಡ್‌ಬೋರ್ಡ್, ಪ್ಯಾಡಿಂಗ್ ಮೆಟೀರಿಯಲ್ (ಒತ್ತಿನ ವಸ್ತು), ಹಾರ್ಡ್‌ಬೋರ್ಡ್ ಫೈಲ್ ಇವುಗಳ ತಯಾರಿಕೆಯಲ್ಲಿ ಬಳಸಬಹುದು. ಅಡಕೆಯ ಪಲ್ಪನ್ನು ಬೊಂಬಿನ ಪಲ್ಪನೊಂದಿಗೆ ೩:೧ ರ ಪ್ರಮಾಣದಲ್ಲಿ ಬೆರೆಸಿ ಅವರಿಂದ ತಯಾರಿಸುವ ಕ್ರಾಫ್ಟ್ ಪೇಪರ್ ಬರಿಬೊಂಬಿನ ಪಲ್ಪಿನಿಂದ ತಯಾರಿಸುವುವರೊಂದಿಗೆ ಹೋಲಿಸಬಹುದು. ಆದರೆ ಅಡಕೆ ಸಿಪ್ಪೆಯನ್ನು ಕಾರ್ಖಾನೆಗೆ ಸಾಗಿಸುವುದರ ಹಾಗೂ

ರಾಸಾಯನಿಕಗಳನ್ನು ಸಾಗಿಸುವುದರ ವೆಚ್ಚವು ಹೆಚ್ಚಾಗುವುದರಿಂದ ಇದು ಎಷ್ಟರ ಮಟ್ಟಿಗೆ ಲಾಭದಾಯಕವೆಂಬುದನ್ನು ಕಂಡುಹಿಡಿಯಬೇಕಾಗಿದೆ.

ಅಡಕೆ ಸಿಪ್ಪೆಯಲ್ಲಿ ಶೇಕಡ ೦.೧-೧.೧ ಸಾರಜನಕ, ಶೇಕಡ ೦.೪-೦.೬ ರಂಜಕ ಮತ್ತು ಶೇಕಡ ೧.೦-೧.೫ ಪ್ರೊಟ್ಯಾಷ್ ಇರುವುದರಿಂದ ಇದನ್ನು ಕಾಂಪೋಸ್ಟ್ ಆಗಿ ಉಪಯೋಗಿಸಬಹುದು. ೧ ಲಕ್ಷ ಟನ್ ಅಡಕೆ ಸಿಪ್ಪೆಯಿಂದ ೧೦೦೦ ಟನ್ ಸಾರಜನಕ ೫೦೦ ಟನ್ ರಂಜಕ ಮತ್ತೆ ೧,೦೦೦ ಟನ್ ಪ್ರೊಟ್ಯಾಷ್ ಸಿಗುತ್ತದೆ.

ಅಡಕೆ ಎಲೆ

ಒಂದು ವರ್ಷದಲ್ಲಿ ಒಂದು ಅಡಕೆ ಮರವು ಸಾಧಾರಣವಾಗಿ ೫ ರಿಂದ ೭ ಎಲೆಗಳನ್ನು ಉದುರಿಸುತ್ತವೆ. ೨,೩೭೦೦೦ ಟನ್‌ಗಳಷ್ಟು ತೂಕವಿರುವ ಸುಮಾರು ಸಾವಿರ ಮಿಲಿಯನ್ ಅಡಕೆ ಎಲೆಯು ಭಾರತದಲ್ಲಿ ಪ್ರತಿವರ್ಷವೂ ಲಭ್ಯವೆಂದು ಹೇಳಲಾಗಿದೆ. ಆಗತಾನೇ ಉದುರಿಬಿದ್ದ ಹೊಸ ಎಲೆಗಳಲ್ಲಿ ಶೇಕಡ ೫೫-೬೦ ರಷ್ಟು ತೇವವಿರುತ್ತೆ ಎಲೆಯನ್ನು ೫-೬ ದಿನಗಳು ಒಳ್ಳೇ ಬಿಸಿಲಲ್ಲಿ ಒಣಗಿಸಿದ ನಂತರ ತೇವವು ಶೇಕಡ ೧೧-೧೬ ಕ್ಕೆ ಇಳಿಯುತ್ತದೆ. ಅಡಕೆ ಎಲೆಯಲ್ಲಿ ಶೇಕಡ ೦.೭ ಸಾರಜನಕ, ಶೇಕಡ ೦.೦೯ ರಂಜಕ ಮತ್ತು ಶೇಕಡ ೧.೦೦ ಪ್ರೊಟ್ಯಾಷ್ ಅಡಗಿರುತ್ತದೆ. ಕೇರಳದಲ್ಲಿ ಕೆಲವು ಪ್ರದೇಶಗಳಲ್ಲಿ ಅಡಕೆ ಎಲೆಯನ್ನು ದನಕರುಗಳ ಆಹಾರವಾಗಿ ಉಪಯೋಗಿಸುವುದುಂಟು.

ಅಡಕೆ ಎಲೆಯನ್ನು ಎರಡು ಭಾಗವಾಗಿ ವಿಂಗಡಿಸಬಹುದು—ಸೋಗೆ ಮತ್ತು ಹಾಳೆ. ಸೋಗೆಯನ್ನು ಗುಡಿಸಲುಗಳ ಹೊದಿಕೆಗೆ ತೆಂಗಿನ ಗರಿಯಂತೆ ಉಪಯೋಗಿಸುತ್ತಾರೆ. ಇದನ್ನು ಅಡಕೆ ಸಸಿಗಳ ನರ್ಸರಿಗಳಲ್ಲೂ ಮತ್ತು ಇತರ ಸಂದರ್ಭಗಳಲ್ಲೂ ನೆರಳನ್ನು ಕೊಡಲು ಹೊದಿಸುವುದುಂಟು. ಹಾಳೆಗಳನ್ನು ಹಲವೆಡೆಗಳಲ್ಲಿ ಊಟಕ್ಕೆ ಬಾಳೆ ಎಲೆಗೆ ಬದಲಾಗಿ ಉಪಯೋಗಿಸುತ್ತಾರೆ. ಬಹು ಹಿಂದಿನ ಕಾಲದಿಂದಲೂ ತೋಟಗಳಲ್ಲಿ ಕೆಲಸಮಾಡುವವರು, ಅದರಲ್ಲೂ ಕರ್ನಾಟಕದ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿರುವ ತೋಟಗಳಲ್ಲಿ ಕೆಲಸ ಮಾಡುವರು ನೆಲಭಾವಿಯಿಂದ ನೀರೆತ್ತಿ ಹಾಯಿಸಲೂ, ತಲೆಗೆ ಟೊಪ್ಪಿ ಮಾಡಿ ಹಾಕಿಕೊಳ್ಳಲೂ, ಹಾಳೆಯನ್ನು ಉಪಯೋಗಿಸುತ್ತಿದ್ದಾರೆ. ತರಕಾರಿ ಇತ್ಯಾದಿಗಳನ್ನು ರವಾನಿಸಲು ಅದನ್ನು ಸುತ್ತುವುದಕ್ಕೆಂದು ಹಾಳೆಗಳನ್ನು ಧಾರಾಳವಾಗಿ ಉಪಯೋಗಿಸುವುದುಂಟು. ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದವರು ತಾವು ತಯಾರಿಸಿರುವ ಯಂತ್ರವನ್ನುಪಯೋಗಿಸಿ ಅಡಕೆ ಹಾಳೆಯಿಂದ ಉಪಯೋಗಿಸಿದ ನಂತರ ಬಿಸಾಡಬಲ್ಲಂತಹ ಕಪ್‌ಗಳನ್ನು ಪ್ಲೇಟ್‌ಗಳನ್ನು ತಯಾರಿಸಬಹುದೆಂದು ಹೇಳುತ್ತಾರೆ. ಅಡಕೆ ಹಾಳೆಯನ್ನು ವಾರ್ನಿಸ್ ಅಥವಾ ಫ್ರೆಂಚ್ ಪಾಲಿಷ್‌ನಿಂದ ಚೆನ್ನಾಗಿ ಪಾಲಿಷ್ ಮಾಡಿ ಅದನ್ನು ಫೋಟೋ ಮೌಂಟು ಆಗಿಯೂ ಅಲಂಕಾರದ ಹಲಗೆಯಾಗಿಯೂ ಉಪಯೋಗಿಸಬಹುದು. ಇದರಿಂದ ಪ್ಲೈಬೋರ್ಡ್ ಹಾಗೂ ಫೈಲ್ ಬೋರ್ಡ್‌ಗಳನ್ನು ತಯಾರಿಸಬಹುದು. ಮನೆಯಲ್ಲಿ ಉಪಯೋಗಿಸಲು ಉಪಯುಕ್ತವಾದ ಚಪ್ಪಲಿಯ ತಯಾರಿಕೆಯಲ್ಲಿ ಇದನ್ನು

ಉಪಯೋಗಿಸಬಹುದು. ಕೈಚೀಲಗಳು. ಇತ್ಯಾದಿಗಳನ್ನು ತಯಾರಿಸಲೂ ಉಪಯೋಗಿಸಬಹುದು.

ಅಡಕೆ ಕಾಂಡ

ಅಡಕೆ ಕಾಂಡವನ್ನು ಬಹುಮಟ್ಟಿಗೆ ಗುಡಿಸಲು ಕಟ್ಟುವಾಗಲೂ, ತೋಟಗಳಲ್ಲಿ ಚಪ್ಪರಗಳನ್ನು ಹಾಕಲು ಮದುವೆ ಮುಂಜಿ ಇತ್ಯಾದಿ ಸಮಾರಂಭಗಳಲ್ಲಿ ಅಲಂಕಾರ ಶಿಬಿರ, ಚಪ್ಪರ ಇಂತಹವುಗಳನ್ನು ಕಟ್ಟಲು ಉಪಯೋಗಿಸುತ್ತಾರೆ. ಇದನ್ನು ಹಿಂದಿನ ಕಾಲದಿಂದಲೂ ದಕ್ಷಿಣ ಮತ್ತು ಆಗ್ನೇಯ ಏಷ್ಯಾಗಳಲ್ಲಿ ಕಟ್ಟಡದ ರಚನೆಯಲ್ಲಿ ಉಪಯೋಗಿಸುತ್ತಿದ್ದಾರೆ. ಅಡಕೆ ಕಾಂಡದ ಗಚ್ಚಿ ಮತ್ತು ಚಿನ್ನಾ ಹಳದಿ ಬಣ್ಣದ ಕಾರಣ ಅದರಿಂದ ನಾನಾವಿಧ ನಾಜೂಕಾದ ಉಪಯುಕ್ತ ವಸ್ತುಗಳನ್ನು ತಯಾರಿಸಿ ಉಪಯೋಗಿಸುತ್ತಾರೆ. ರೋಲರ್, ಪೇಪರ್ ವೆಯಿಟ್, ಬುಕ್‌ಸೆಲ್ಫ್, ವೇಸ್ಟ್‌ಪೇಪರ್ ಬ್ಯಾಸ್ಕೆಟ್ ಇವುಗಳನ್ನು ತಯಾರಿಸಲು ಉಪಯೋಗಿಸುತ್ತಾರೆ.

ಅಡಕೆ ಹೊಂಬಾಳೆ

ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಾಚರಣೆಯ ಸಂದರ್ಭಗಳಲ್ಲಿ ಅಡಕೆ ಮರದ ಹೊಂಬಾಳೆಯನ್ನು ಉಪಯೋಗಿಸುತ್ತಾರೆ. ಇದು ಅತಿ ಸುವಾಸನೆಯುಳ್ಳದ್ದಾದ್ದರಿಂದ ಕರ್ನಾಟಕದಲ್ಲಿನ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿನ ಮಹಿಳೆಯರು ಕೇಶಾಲಂಕಾರಕ್ಕಾಗಿ ತಮ್ಮ ತುರುಬುಗಳಲ್ಲಿ ಮುಡಿದುಕೊಳ್ಳುವುದುಂಟು.

ಹೀಗೆ ಅಡಕೆ ಮರದ ಪ್ರತಿಯೊಂದು ಭಾಗವೂ ಒಂದಲ್ಲಾ ಒಂದು ವಿಧದಲ್ಲಿ ಉಪಯುಕ್ತವಾಗಿದೆ. ತೆಂಗಿನಮರದಂತೆಯೇ ಇದನ್ನು ಕಲ್ಪವೃಕ್ಷವೆಂದು ಕರೆಯುವುದಾದಲ್ಲಿ ತಪ್ಪೇನೂ ಇಲ್ಲ.

ಕನ್ನಡದ ನೆಲದ ಹುಲ್ಲೆನಗೆ ಪಾವನ ತುಲಸಿ !
ಕನ್ನಡದ ನೆಲದ ನೀರ್ಮೊನಲೆನಗೆ ದೇವನದಿ !
ಕನ್ನಡದ ನೆಲದ ಕಲ್ಲೆನಗೆ ಶಾಲಗ್ರಾಮ ಶಿಲೆ !
ಕನ್ನಡ ದೈವಮ್ಮೆ
ಕನ್ನಡ ಶಬ್ದಮೆನಗೋಂಕಾರ ಮೀಯೆನ್ನ
ಕನ್ನಡದ ನುಡಿಯೆ ಗಾಯತ್ರಿಯದ್ಭುತ ಮಂತ್ರ-
ಮಿನ್ನಾವುದೈ ಪರತು ಕನ್ನಡದ ಸೇವೆಯಿಂದಧಿಕಮೀ

—ಶಾಲಿ ರಾಮಚಂದ್ರರಾಯ

ಒಂದು ಬಟ್ಟಲು ಚಹಾ

ಸಿ. ನಾಗಣ್ಣ

ಹಾಗೆ ನೋಡಿದರೆ ರೋಸ್‌ಮೇರಿ ಫೆಲ್‌ಳನ್ನು ಸುಂದರಿಯೆಂದು ಕರೆಯುವುದಕ್ಕೆ ಆಗುತ್ತಿರಲಿಲ್ಲ. ಅಂದವಾಗಿದ್ದಳೇನು? ಪ್ರಾಯಶಃ, ದೇಹವನ್ನು ಬಿಡಿಬಿಡಿ ಭಾಗಗಳಾಗಿ ವಿಂಗಡಿಸಿದರೆ....ಆದರೆ ಯಾವ ವ್ಯಕ್ತಿಯನ್ನೇ ಆಗಲಿ ಬಿಡಿಬಿಡಿ ಮಾಡುವಷ್ಟು ಕ್ರೂರವಾಗಬೇಕೇಕೆ? ಎಳೆಪ್ರಾಯದವಳು, ಬುದ್ಧಿವಂತೆ, ತುಂಬಾ ಆಧುನಿಕಳಾದವಳು, ಚಂದವಾಗಿ ಉಡುಗೆತೊಡುಗೆ ತೊಟ್ಟುಕೊಳ್ಳುವವಳು, ಎಂಥ ಹೊಸ ಪುಸ್ತಕಗಳನ್ನೇ ಆಗಲಿ ಓದಿಕೊಂಡಿರುತ್ತಿದ್ದವಳು. ಜೊತೆಗೆ, ಅವಳ ಭೋಜನಕೂಟಗಳೆಂದರೆ ಸಾಮಾನ್ಯವಾಗಿ ಬಹಳ ಪ್ರಮುಖರಾದ ವ್ಯಕ್ತಿಗಳು ಹಾಗೂ ಕಲಾವಿದರ ಸಂಗಮವಾಗಿರುತ್ತಿತ್ತು. ಈ ಕಲಾವಿದರು ಮಾತ್ರ ವಿಚಿತ್ರ ಮನುಷ್ಯರಾಗಿರುತ್ತಿದ್ದರು—ಅವಳೇ ಹುಡುಕಿ ತಂದ ಆಸಾಮಿಗಳವರು—ಕೆಲವರು ಪದಗಳಲ್ಲಿ ವರ್ಣಿಸಲಾಗದಷ್ಟು ಭಯಂಕರರಾಗಿದ್ದರು, ಉಳಿದವರು ತಮಾಷೆಯಾಗಿ ಕಾಣುತ್ತಿದ್ದರು.

ರೋಸ್‌ಮೇರಿ ಮದುವೆಯಾಗಿ ಎರಡು ವರ್ಷವಾಗಿತ್ತು. ಅವಳಿಗೆ ತುಂಬಾ ಒಳ್ಳೆಯ ಹುಡುಗ ಸಿಕ್ಕಿದ್ದ. ಪೀಟರ್‌ಮೈಕೇಲ್ ಎಂದುಕೊಂಡಿರಾ? ಖಂಡಿತಾ ಅಲ್ಲ. ಅವಳನ್ನು ಆರಾಧಿಸುವಂಥ ಗಂಡ ಸಿಕ್ಕಿದ್ದ. ಅವರು ಶ್ರೀಮಂತರು, ನಿಜವಾಗಿ ಶ್ರೀಮಂತರು; ಸ್ಥಿತಿವಂತರು ಅಂತ ಹೇಳಿದರೆ ಏನೇನೂ ಹೇಳಿದ ಹಾಗೆ ಆಗುವುದಿಲ್ಲ. ರೋಸ್‌ಮೇರಿಗೆ ಶಾಪಿಂಗ್ ಮಾಡಬೇಕು ಅನ್ನಿಸಿದಾಗಲೆಲ್ಲಾ ನಾವು ನೀವು ಬಾಂಡ್ ಸ್ಟ್ರೀಟಿಗೆ ಹೋಗುವಷ್ಟು ಸಲೀಸಾಗಿ ಪ್ಯಾರಿಸ್ಸಿಗೆ ಹೋಗುತ್ತಿದ್ದಳು. ಹೂವುಗಳನ್ನು ಕೊಂಡುಕೊಳ್ಳಬೇಕು ಅನ್ನಿಸಿದರೆ ರೀಜೆಂಟ್‌ಸ್ಟ್ರೀಟಿನ ಚೊಕ್ಕವಾದ ಅಂಗಡಿಯ ಮುಂದೆ ಅವಳ ಕಾರು ಗಕ್ಕನೆ ನಿಲ್ಲುವುದು; ಅದ್ಭುತವನ್ನು ಕಂಡವಳಂತೆ ಕಣ್ಣಗಲಿಸಿ ರೋಸ್‌ಮೇರಿ ಕೈತೋರಿಸಿ ಹೇಳುವಳು: 'ನನಗೆ ಅವು, ಅವು ಮತ್ತು ಅವುಬೇಕು. ಹ್ಞಾಂ, ಆ ಹೂದಾನಿಯೊಳಗಿಟ್ಟಿರುವ ಗುಲಾಬಿಗಳು ಬೇಕು. ಹಾಗೆಯೇ ಇನ್ನೊಂದು. ಆ ಜಾಡಿಯೊಳಗಿನ ಗುಲಾಬಿಗುಚ್ಛ. ಬೇಡ, ಬೇಡ, ಲೈಲಾಕ್ ಮಾತ್ರ ಬೇಡವೇಬೇಡ. ನನಗೆ ಲೈಲಾಕ್ ಕಂಡ್ರೆ ಅಗಲ್ಲ. ಅದಕ್ಕೋ ಒಂದು

ಇಂಗ್ಲಿಷ್ ಮೂಲ: ಕ್ಯಾಥರೀನ್ ಮ್ಯಾನ್ಸ್‌ಫೀಲ್ಡ್

ಆಕಾರವೇ ಇಲ್ಲ.' ಅದೂ ನಿಜವೇನೋ ಅನ್ನುವ ಹಾಗೆ ನಟನೆಮಾಡುತ್ತಾ ಅಂಗಡಿ ಸೇವಕ ಲೈಲಾಕ್ ಹೂವುಗಳನ್ನು ಅವಳ ದೃಷ್ಟಿಯಿಂದ ಮರೆಯಾಗಿ ಇಡುವನು. 'ಎಲ್ಲಿ ಆ ದುಂಡಗಿನ ಪುಟ್ಟ ಟ್ಯೂಲಿಪ್ ಕೊಡಿ. ಆ ಕಡೆ ಇವೆಯೆಲ್ಲಾ ಆ ಕೆಂಪು ಮತ್ತು ಬಿಳಿ ಟ್ಯೂಲಿಪ್‌ಗಳು.' ಹಾಗೆ ಹೇಳಿ ಕಾರಿನ ಬಳಿ ಅವಳು ನಡೆಯುತ್ತಿದ್ದಂತೆಯೇ ತೆಳ್ಳಗಿನ ಅಂಗಡಿ ಹುಡುಗಿ ಭಾರಿಗಾತ್ರದ ಹೊರೆಯನ್ನು ಬಿಳಿಕಾಗದದಲ್ಲಿ ಸುತ್ತಿ ಮಗು ವನ್ನು ತಬ್ಬಿದ ಹಾಗೆ ತಬ್ಬಿಕೊಂಡು ಕಾರಿನ ವರೆಗೂ ಅವಳನ್ನು ಹಿಂಬಾಲಿಸುವಳು.

ಒಂದು ಚಳಿಗಾಲದ ಅಪರಾಹ್ನ ಕರ್ಜನ್ ಬೀದಿಯಲ್ಲಿ ಒಂದು ಪುಟ್ಟ ಹಳೆಯ ಸಾಮಾನುಗಳ ಅಂಗಡಿಯಲ್ಲಿ ಏನನ್ನೋ ಕೊಂಡುಕೊಳ್ಳುತ್ತಿದ್ದಳು. ಅವಳಿಗೆ ಇಷ್ಟ ವಾದ ಅಂಗಡಿಯದು. ಅವಳು ಆ ಅಂಗಡಿ ಯನ್ನು ಇಷ್ಟು ಇಷ್ಟಪಟ್ಟದ್ದಕ್ಕೆ ಕೊಳ್ಳು ವರದೇ ಏನೋ ಅದು ಎಂದು ಭಾಸವಾಗು ತ್ತಿದ್ದುದು ಕಾರಣವಿರಬಹುದು. ಆಮೇಲೆ ಆ ಅಂಗಡಿಯವನ ಆಸ್ಥೆಯನ್ನು ಬಣ್ಣಿಸು ವುದಕ್ಕಾಗುವುದಿಲ್ಲ; ಅವಳು ಅಂಗಡಿಗೆ ಬಂದರೆ ಸಾಕು, ಬೇಕಾದ್ದು ಬೇಡವಾದ್ದು ಎಲ್ಲವನ್ನೂ ಅವಳ ಮುಂದೆ ಪ್ರದರ್ಶಿಸಿ ಬಿಡುತ್ತಿದ್ದ; ಆಗ ಅವನಿಗೆ ಎಲ್ಲಿಲ್ಲದ ಸಂಭ್ರಮ. ಕೈಕಟ್ಟಿ ವಿನಮ್ರನಾಗಿ ನಿಂತು ಕೊಳ್ಳುವ ಅವನಿಗೆ ಅವಳು ಅಂಗಡಿಗೆ ಬಂದದ್ದರಿಂದ ಯಾವ ರೀತಿ ಕೃತಜ್ಞತೆ ಅರ್ಪಿಸಬೇಕೋ ತಿಳಿಯುತ್ತಿರಲಿಲ್ಲ. ಅವಳಿಗೆ ಮೆಹರ್‌ಬಾನಿ ಮಾಡಲು ಅವನು ಹೀಗೆ ವರ್ತಿಸುತ್ತಿದ್ದುದು ನಿಜವಾದರೂ, ಬೇರೆ ಇನ್ನೇನೋ ಇದ್ದಿತು....

'ನೋಡಿ, ಮೇಡಂ' ಮೆಲುದನಿಯ ಗೌರವಪೂರ್ವಕ ಧಾಟಿಯಲ್ಲಿ ಹೇಳುವನು, 'ನನ್ನ ಪದಾರ್ಥಗಳನ್ನ ಕಂಡ್ರೆ ನನಗೆ ಪ್ರೇಮ. ಅವುಗಳನ್ನ ಅಕ್ಕರೆಯಿಂದ ಕಾಣದ ಜನರಿಗೆ ನಾನವನ್ನು ಮಾರೋದಕ್ಕೆ ಇಷ್ಟ ಪಡಲ್ಲ. ಹಾಗೆ ಪದಾರ್ಥಗಳನ್ನ ಅಕ್ಕರೆಯಿಂದ ಕಾಣುವವರು ಎಷ್ಟು ಮಂದಿ ಇದ್ದಾರೆ ಹೇಳಿ?....' ಹಾಗೆ ಹೇಳಿ ನಿಡಿದಾಗಿ ಉಸಿರು ಬಿಟ್ಟು ಚೌಕಾಕಾರದ ನೀಲಿ ವೆಲ್ವೆಟ್ಟು ಬಟ್ಟೆಯನ್ನು ಕೌಂಟರಿನ ಗಾಜಿನ ಮೇಲೆ ಇಟ್ಟು ತನ್ನ ಪೇಲವವಾದ ಬೆರಳು ತುದಿ ಯಿಂದ ಅದನ್ನು ಅಮುಕಿದ.

ಈವತ್ತು ಅವನು ಹೊರಗೆ ತೆಗೆದದ್ದು ಒಂದು ಸಣ್ಣ ಪೆಟ್ಟಿಗೆಯನ್ನು. ಅವಳಿ ಗೋಸ್ಕರವೇ ಅಂತ ಅದನ್ನು ಇಟ್ಟು ಕೊಂಡಿದ್ದ. ಬೇರೆ ಯಾರಿಗೂ ಅವನ್ನು ಅದುವರೆಗೆ ತೋರಿಸಿರಲಿಲ್ಲ. ಕೆನೆಯಲ್ಲಿ ಅದ್ದಿ ತೆಗೆದ ಹಾಗೆ ನುಣ್ಣಗೆ ಹೊಳೆಯುತ್ತಿದ್ದ ಅಂದವಾದ ಪೆಟ್ಟಿಗೆಯದು. ಅದರ ಮುಚ್ಚಳದ ಮೇಲಿನ ಚಿತ್ರದಲ್ಲಿ ಒಂದು ಪುಟ್ಟ ಹುಡುಗನ ಆಕಾರ—ಹೂ ತುಂಬಿದ ಗಿಡದ ಬುಡದಲ್ಲಿ ನಿಂತುಕೊಂಡಿದ್ದಂತೆ— ಅದಕ್ಕಿಂತ ಪುಟ್ಟದಾದ ಇನ್ನೊಂದು ಹುಡುಗಿಯ ಆಕಾರ, ಹಿಂದೆ ನಿಂತು ತನ್ನ ತೋಳುಗಳಿಂದ ಅವನ ಕೊರಳನ್ನು ಬಳಸಿ ದ್ದಂತೆ ಚಿತ್ರಿತವಾಗಿತ್ತು. ಪುಟ್ಟ ಹೂವಿನ ದಳದಷ್ಟು ಅಗಲವಾಗಿರದ ಅವಳ ಟೋಪಿ ಮರದ ಕೊಂಬೆಯೊಂದರಿಂದ ತೂಗಾಡು ತ್ತಿತ್ತು. ಕಣ್ಣಿಗೆ ಕಣ್ಣಿಟ್ಟು ಕಾಯುತ್ತಿರುವ ಗಂಧರ್ವಕುಮಾರರ ಹಾಗೆ ಅವರ ತಲೆಯ ಮೇಲೆ ನಸುಗೆಂಪಿನ ಮೋಡಗಳು ತೇಲು ತ್ತಿದ್ದವು. ರೋಸ್‌ಮೇರಿ ತನ್ನ ಉದ್ದನೆಯ

ಕೈಗೌಸುಗಳಿಂದ ಹಸ್ತಗಳನ್ನು ಹೊರ ತೆಗೆದಳು. ಅಂಥ ಪದಾರ್ಥಗಳನ್ನು ಪರೀಕ್ಷಿಸುವಾಗೆಲ್ಲಾ ಹಾಗೆ ಅವಳು ಕೈಗೌಸನ್ನು ತೆಗೆಯುವುದು ರೂಢಿ. ನಿಜ, ಆ ವಸ್ತು ಅವಳಿಗೆ ತುಂಬಾ ಇಷ್ಟವಾಗಿತ್ತು. ಎಂಥ ಅದ್ಭುತವಾದ ಪದಾರ್ಥ! ತಾನದನ್ನು ಕೊಂಡುಕೊಳ್ಳಬೇಕು. ಕೆನೆಬಣ್ಣದ ಆ ಪುಟ್ಟಪೆಟ್ಟಿಗೆಯ ಮುಚ್ಚಳವನ್ನು ಮುಚ್ಚಿ ಒಮ್ಮೆ, ತೆಗೆದು ಒಮ್ಮೆ ಮಾಡುವಾಗ ಆ ನೀಲಿ ವೆಲ್ವೆಟ್ಟು ವಸ್ತ್ರದ ಹಿನ್ನೆಲೆಯಲ್ಲಿ ತನ್ನ ಕೈಗಳು ಎಷ್ಟು ಅಂದವಾಗಿವೆ ಎಂದುಕೊಂಡಳು. ಆ ಅಂಗಡಿಯವನೂ ಸಹ ತನ್ನ ಮನಸ್ಸಿನ ಗುಹಾಂತರದ ಮೂಲೆಯೊಂದರಲ್ಲಿ ಹಾಗೆಯೇ ಅಂದುಕೊಂಡಿರಬಹುದು. ಏಕೆಂದರೆ, ಅವನು ಒಂದು ಪೆನ್ಸಿಲ್ ತೆಗೆದುಕೊಂಡು ಗಲ್ಲಾಪೆಟ್ಟಿಗೆಯಿಂದ ಕೊಂಚ ಮುಂದೆ ಬಾಗಿದಾಗ ಪೇಲವವಾದ ರಕ್ತರಹಿತ ಅವನ ಬೆರಳುಗಳು ಗುಲಾಬಿ ಬಣ್ಣದ ಹೊಳೆಯುವ ಅವಳ ಬೆರಳುಗಳ ಸಮೀಪ ಹೆದರಿ ಹೆದರಿ ಜಾರುತ್ತಿದ್ದವು; ಆಗ ಅತ ಮೆಲ್ಲಗೆ ಉಸುರಿದ್ದ 'ನಾನು ಮೇಡಂನವರಿಗೆ ಧೈರ್ಯಮಾಡಿ ಹೇಳಬಲ್ಲೆನಾದರೆ, ಆ ಹುಡುಗಿ ತೊಟ್ಟಿರುವ ರವಿಕೆ ಮೇಲಿನ ಹೂವುಗಳು....'

'ಸುಂದರವಾಗಿವೆ!' ರೋಸ್‌ಮೇರಿಗೆ ಆ ಹೂವುಗಳು ನಿಜವಾಗಿಯೂ ಹಿಡಿಸಿದ್ದವು. ಆದರೆ ಬೆಲೆಯೆಷ್ಟು? ಅಂಗಡಿಯವ ಒಂದು ಕ್ಷಣ ತನ್ನ ಕಿವಿಗೆ ಏನೂ ಬೀಳಲಿಲ್ಲವೆಂಬಂತೆ ನಟಿಸಿದ. ಆಮೇಲೆ ಸಣ್ಣಗೆ ಗೊಣಗಿದ್ದು ಅವಳಿಗೆ ಕೇಳಿಸಿತು. 'ಇಪ್ಪತ್ತೆಂಟು ಗಿನಿ ಮೇಡಂ.' 'ಇಪ್ಪತ್ತೆಂಟು ಗಿನಿ' ರೋಸ್‌ಮೇರಿ ಯಾವ ಸೂಚನೆಯನ್ನೂ ಕೊಡಲಿಲ್ಲ. ಆ ಪುಟ್ಟ ಪೆಟ್ಟಿಗೆಯನ್ನು ಕೆಳಗಿಟ್ಟಳು, ಮತ್ತೆ ಕೈಗೌಸಿನ ಗುಂಡಿ ಹಾಕಿಕೊಂಡಳು. ಇಪ್ಪತ್ತೆಂಟು ಗಿನಿ. ಶ್ರೀಮಂತರಿಗೂ ಕೂಡ ಇದು....ಯಾವ ತೀರ್ಮಾನಕ್ಕೂ ಅವಳು ಬಾರದಸ್ಥಿತಿ. ಒಂದು ಉಬ್ಬಿದ ಚಹಾದ ಕೊಕ್ಕಿನಪಾತ್ರೆ, ದುಂಡಗಿನ ಕೋಳಿಯ ಹಾಗೆ ಅವನ ತಲೆಯ ಮೇಲೆ ತೂಗಾಡುತ್ತಿತ್ತು. 'ಆಯ್ತು, ಇಟ್ಟಿರು ಅದನ್ನ— ಆಮೇಲೆ ನೋಡ್ತೇನೆ....'

ಅಂಗಡಿಯವ ಇಟ್ಟಿರಿ ಎಂದು ಆಕೆ ಆದೇಶ ಕೊಟ್ಟರಷ್ಟೇ ಸಾಕು ಎಂದು ಕಾಯುತ್ತಿರುವವನಂತೆ ಆಗಲೇ ಬಾಗಿ ಆಕೆಗೆ ನಮಸ್ಕಾರ ಸೂಚಿಸಿದ್ದ. ಅವಳಿಗೋಸ್ಕರ ಅದನ್ನು ಅನಂತಕಾಲದವರೆಗೆ ಇಟ್ಟಿರಲು ಅವನು ಸಿದ್ಧನಾಗಿದ್ದ.

ಬಾಗಿಲು ಮೆಲ್ಲಗೆ ಮುಚ್ಚಿಕೊಂಡಿತು. ಚಳಿಗಾಲದ ಅಪರಾಹ್ನವನ್ನು ಸೃಷ್ಟಿಸಿ ನೋಡುವ ಸಲುವಾಗಿ ಹೊರಗೆ ಮೆಟ್ಟಿಲುಗಳ ಮೇಲೆ ನಿಂತಿದ್ದಳು. ಮಳೆ ಬೀಳುತ್ತಿತ್ತು, ಮಳೆಯ ಜೊತೆಗೆ ಬೂದಿಸುತ್ತಿಕೊಂಡ ಹಾಗೆ ಕತ್ತಲೂ ಇಳಿಯಿತು. ವಾತಾವರಣದಲ್ಲಿ ಕೊರೆಯುವ ಚಳಿ. ಆಗ ತಾನೆ ಹೊತ್ತಿದ್ದ ದೀಪಗಳು ದುಃಖಪೂರಿತವಾಗಿದ್ದವು. ಎದುರುಮನೆಯ ದೀಪಗಳೂ ಕೂಡ ಅಳುತ್ತಿರುವಂತಿದ್ದವು. ಯಾವುದೋ ವಿಷಯವಾಗಿ ವಿಷಾದಗೊಂಡಿರುವಂತೆ ಮಂಕಾಗಿ ಉರಿಯುತ್ತಿದ್ದವು. ತಮ್ಮ ದರಿದ್ರ ಕೊಡೆಗಳ ಮರೆಯಲ್ಲಿ ಮಂದಿ ಸರಸರ ನಡೆದು ಹೋಗುತ್ತಿದ್ದರು. ರೋಸ್‌ಮೇರಿಯೊಳಗೆ ಒಂದು ವಿಚಿತ್ರವಾದನೋವು ಮನೆಮಾಡಿತ್ತು. ಉಣ್ಣೆ ಕೊಳವೆಯಲ್ಲಿ ತೂರಿದ್ದ ಕೈಗಳನ್ನು ಎದೆಯ ಮೇಲಿಟ್ಟು

ಕೊಂಡಳು. ಆತುಕೊಳ್ಳುವುದಕ್ಕೆ ಆ ಪುಟ್ಟ ಪೆಟ್ಟಿಗೆಯೂ ತನ್ನ ಸಂಗಡವಿದ್ದರೆ ಚೆನ್ನಿತ್ತು ಎಂದೆನಿಸಿತು ಅವಳಿಗೆ. ಕಾರಂತೂ ಇತ್ತು. ಸ್ವಲ್ಪ ದೂರ ನಡೆದು ಹೋಗಬೇಕಾದ ಪ್ರಮೇಯವಿತ್ತಷ್ಟೆ. ಆದರೂ ಕಾಯ್ದಳು. ಬದುಕಿನಲ್ಲಿ ಕೆಲವು ಕ್ಷಣಗಳಿರುತ್ತವೆ, ಭಯಂಕರವಾದ ಕ್ಷಣಗಳು, ಮನೆಯಿಂದ ಹೊರಗೆ ಬಂದು ನೋಡಿದರೆ ದಿಗ್ಭ್ರಾಂತಿ ಮೂಡಿಸುವಂಥ ಕ್ಷಣಗಳು. ಅಂಥ ಕ್ಷಣಗಳಿಗೆ ಮನಸ್ಸನ್ನು ಈಡಾಗಿಸಬಾರದು. ಮನೆಗೆ ಹೋಗಿ ಇನ್ನೊಂದು ಕಪ್ಪು ಎಕ್ಸ್‌ಟ್ರಾ ಸ್ಪೆಷಲ್ ಚಹಾ ಕುಡಿಯಬೇಕು. ಹಾಗೆ ಯೋಚಿಸುತ್ತಿದ್ದ ಆ ಕ್ಷಣದಲ್ಲೇ ತೆಳುವಾದ, ಕಂದುಬಣ್ಣದ, ಛಾಯಾರೂಪಿಯಾದ ಪುಟ್ಟ ಹುಡುಗಿಯೊಂದು—ಎಲ್ಲಿಂದ ಬಂದಿತ್ತು ಆ ಹುಡುಗಿ?—ರೋಸ್‌ಮೇರಿಯ ಚೆನ್ನಿಗಂಟೆ ನಿಂತುಕೊಂಡು ದುಃಖಿಸುವ ಧಾಟಿಯಲ್ಲಿ ನಿಟ್ಟುಸಿರಿನ ಜೊತೆಯಲ್ಲಿ ಹೀಗಂದಿದ್ದಳು. 'ಮೇಡಂ, ತಮ್ಮ ಹತ್ರ ಸ್ವಲ್ಪ ಮಾತಾಡಲೇ?'

'ನನ್ನ ಹತ್ರ ಮಾತಾಡೋದೆ?' ರೋಸ್‌ಮೇರಿ ತಿರುಗಿ ನೋಡಿದಳು. ಬಟ್ಟಲು ಕಣ್ಣುಗಳ ದೀನವಾದ ವ್ಯಕ್ತಿಯೊಂದು—ಹೆಚ್ಚೇನೂ ವಯಸ್ಸಾಗಿರಲಿಲ್ಲ—ತನ್ನ ಕೆಂಪು ಕೈಗಳಿಂದ ಕೋಟು ಕಾಲರು ಹಿಡಿದುಕೊಂಡು ಆಗ ತಾನೆ ನೀರಿನಿಂದ ಎದ್ದು ಬಂದಿದ್ದ ಹಾಗೆ ಗಡಗಡ ನಡಗತೊಡಗಿದ್ದಳು.

'ಮೇ–ಮೇಡಂ', ಆ ದನಿ ಉಗ್ಗಡಿಸಿತು. 'ಒಂದು ಕಪ್ಪು ಚಹಾಕ್ಕಾಗೋವಷ್ಟು ಕಾಸು ಕೊಡ್ತೀರಾ?'

'ಒಂದು ಕಪ್ಪು ಚಹಾ?' ಆ ದನಿಯಲ್ಲಿ ಒಂದು ಬಗೆಯ ಸರಳತೆ, ಪ್ರಾಮಾಣಿಕತೆ ಇತ್ತು; ಭಿಕ್ಷುಕಿಯ ದನಿಯ ಹಾಗೆ ಅದು ಕೇಳಿಸಲಿಲ್ಲ. "ಹಾಗಾದ್ರೆ ನಿನ್ನ ಹತ್ರ ಹಣವಿಲ್ವೆ?' ರೋಸ್‌ಮೇರಿ ಕೇಳಿದಳು.

'ಒಂದು ಚಿಕ್ಕಾಸೂ ಇಲ್ಲ ಮೇಡಂ', ಎಂಬ ಉತ್ತರ ಬಂದಿತು.

'ಎಂಥ ಅದ್ಭುತ!' ಕತ್ತಲನ್ನು ಭೇದಿಸಿ ರೋಸ್‌ಮೇರಿ ದೃಷ್ಟಿಸಿದಳು, ಆ ಹುಡುಗಿ ಕೂಡ ಅವಳನ್ನು ದೃಷ್ಟಿಸಿನೋಡಿತು. ಅದ್ಭುತಕ್ಕಿಂತಲೂ, ಅಸಾಮಾನ್ಯಕ್ಕಿಂತಲೂ ಒಂದು ಕೈ ಮಿಗಿಲೇ! ಇದ್ದಕ್ಕಿದ್ದ ಹಾಗೆಯೇ ರೋಸ್‌ಮೇರಿಗೆ ಅದು ಒಂದು ಸಾಹಸವಾಗಿ ತೋರಿತು. ಮುಚ್ಚಂಜೆಯ ವೇಳೆ ಹೀಗೆ ಭೇಟಿಯಾದ ಪ್ರಸಂಗ ನೇರವಾಗಿ ದಾಸ್ತೊವಸ್ಕಿಯ ಕಾದಂಬರಿಯೊಂದರಿಂದ ಹೊರ ತೆಗೆದ ಹಾಗೆ ಕಂಡಿತು. ಒಂದು ವೇಳೆ ಆ ಹುಡುಗಿಯನ್ನು ಅವಳು ಮನೆಗೆ ಕರೆದುಕೊಂಡು ಹೋದರೆ? ತಾನು ಯಾವಾಗಲೂ ಓದುತ್ತಿದ್ದ ಇಲ್ಲವೇ ನಾಟಕಗಳಲ್ಲಿ ಕಾಣುತ್ತಿದ್ದ ಪ್ರಸಂಗವನ್ನು ಅನುಷ್ಠಾನಕ್ಕೆ ತಂದು ತೋರಿಸಿದರೆ ಏನಾಗುತ್ತದೆ? ಅದ್ಭುತವಾಗಿರುತ್ತದೆ. ಅವಳ ಸ್ನೇಹಿತರಿಗೆ ಆಮೇಲೆ ಇದನ್ನು ಕೇಳಿ ಆಶ್ಚರ್ಯವಾಯಿತು—ಅವಳು ಅವರಿಗೆ ಇದನ್ನು ತಿಳಿಸಿದ ಧಾಟಿಯಿಂದ, 'ಸುಮ್ಮನೆ ಅವಳನ್ನು ಮನೆಗೆ ಕರೆದುಕೊಂಡು ಹೋಗಿಬಿಟ್ಟೆ'. ಹೆಜ್ಜೆ ಮುಂದೆ ಇಟ್ಟು ತನ್ನ ಬಳಿ ನಿಂತಿದ್ದ ಆ ಸಪೂರ ವ್ಯಕ್ತಿಗೆ ಹೇಳಿದಳು; 'ಮನೆಗೆ ಹೋಗೋಣ ಬಾ, ಅಲ್ಲಿ ಚಹಾ ಕುಡಿಯೋಣಂತೆ'.

'ನಿಜವಾಗ್ಲೂ ಹೇಳ್ತಿದ್ದೀರಾ ಮೇಡಂ?' ಹಾಗಂತ ಅಂದಾಗ ಆ ಹುಡುಗಿಯ ದನಿಯಲ್ಲಿ ನೋವಿತ್ತು.

'ನಿಜವಾಗಿಯೂ ಹೇಳ್ತಿದ್ದೀನಿ', ರೋಸ್ ಮೇರಿ ಎತ್ತರಿಸಿ ಹೇಳಿದಳು. 'ನೀನು ಬರಲೇ ಬೇಕು. ಬಾ ಹೋಗೋಣ'.

ತನ್ನ ತುಟಿಗಳ ಮೇಲೆ ಬೆರಳಿಟ್ಟು ಕೊಂಡು ಆ ಹುಡುಗಿ ನೋಟದಲ್ಲೇ ರೋಸ್ ಮೇರಿಯನ್ನು ಮುಕ್ಕಿದಳು. 'ನೀವು— ನೀವು, ನನ್ನನ್ನು ಪೊಲೀಸ್ ಠಾಣೆಗೆ ಕರೆದೊಯ್ಯುತ್ತಿಲ್ಲ ತಾನೆ?' ಅಂತ ಮತ್ತೆ ಉಗ್ಗಡಿಸಿದಳು.

'ಪೊಲೀಸ್ ಠಾಣೆಗೆ?' ರೋಸ್‌ಮೇರಿ ನಕ್ಕುಬಿಟ್ಟಳು. 'ನಾನ್ಯಾಕೆ ಅಷ್ಟು ಕ್ರೂರ ವಾಗ್ಲಿ? ಖಂಡಿತಾ ಇಲ್ಲ, ನಿನ್ನನ್ನ ಬೆಚ್ಚಗೆ ಮಾಡಬೇಕು— ನಿನಗೆ ಏನು ಹೇಳಬೇಕು ಅನ್ನಿಸತ್ತೋ ಅದನ್ನೆಲ್ಲಾ ಕೇಳಿಸ್ಕೋಬೇಕು ಅನ್ನೋದು ನನ್ನ ಆಸೆ.'

ಹಸಿವಾದವರನ್ನು ಜೊತೆಯಲ್ಲಿ ಹೊರಡಿಸುವುದು ಸುಲಭ. ಸೇವಕ ಕಾರಿನ ಬಾಗಿಲನ್ನು ತೆಗೆದು ನಿಂತಿದ್ದ, ಮರುಕ್ಷಣದಲ್ಲಿ ಅವರು ನಸುಗತ್ತಲಿನಲ್ಲಿ ತೇಲುತ್ತಾ ಸಾಗಿದ್ದರು.

'ನೋಡಿದೆಯಾ!' ಅಂದಳು ರೋಸ್ ಮೇರಿ. ವೆಲ್ವೆಟ್ ಚೀಲಕ್ಕೆ ಕೈ ತೂರಿಸುತ್ತಿದ್ದಂತೆಯೇ ಏನೋ ಗೆದ್ದ ಹಾಗೆ ಅವಳಿಗೆ ಭಾಸವಾಯಿತು. ತಾನು ಹಿಡಿದಿದ್ದ ಆ ಸೆರೆಯಾಳಿನ ಕಡೆ ದುರುಗುಟ್ಟಿ 'ಹೇಗೆ ಹಿಡಿದೆ ನಾನು ನಿನ್ನ!' ಅಂತ ಅನ್ನಬೇಕೆನಿಸಿತು. ನಿಜವಾಗಿಯೂ ಆ ಹುಡುಗಿಯ ಬಗ್ಗೆ ಅವಳಿಗೆ ದಯೆ ಇದ್ದಿತು. ದಯೆಗಿಂತಲೂ ಹೆಚ್ಚಿನದು ಬದುಕಿನಲ್ಲಿ ಅದ್ಭುತವಾದ ಸಂಗತಿಗಳು ಜರುಗುತ್ತವೆ ಎಂದು ಆ ಹುಡುಗಿಗೆ ತೋರಿಸಬೇಕೆಂದುಕೊಂಡಳು. ಕಷ್ಟಕಾಲದಲ್ಲೊದಗುವ ಕಿನ್ನರಶಾಯಿಯರ ಕಥೆ ಕೇವಲ ಕಾಲ್ಪನಿಕವಲ್ಲ, ಶ್ರೀಮಂತರಿಗೆ ಹೃದಯವಿದೆ ಹಾಗೂ ಹೆಂಗಸರೆಲ್ಲಾ ಸಹೋದರಿಯರು- ಇತ್ಯಾದಿಗಳನ್ನೆಲ್ಲಾ ಸಾಬೀತುಪಡಿಸಬೇಕೆನ್ನಿಸಿತು. ಇದ್ದಕ್ಕಿದ್ದಂತೆ ತಿರುಗಿ ಹೇಳಿದಳು. 'ಹೆದರಬೇಡ. ನನ್ ಜೊತೆ ನೀನು ಯಾಕೆ ಬರಬಾರ್ದು? ನಾವಿಬ್ಬರೂ ಹೆಂಗಸರು. ನಾನು ಹೆಚ್ಚು ಅದೃಷ್ಟವಂತೆಯಾದರೆ ನಿನ್ನ ನಿರೀಕ್ಷೆ ಸಹಜ....'

ಆದರೆ ಆ ವಾಕ್ಯ ಹೇಗೆ ಕೊನೆಯಾಗುವುದೆಂದು ಆಕೆಗೇ ತಿಳಿಯದಂಥಾ ಸಂದರ್ಭದಲ್ಲಿ ಸುದೈವದಿಂದ ಕಾರು ನಿಂತಿತು. ಕರೆಗಂಟೆ ಒತ್ತಿದಳು. ಬಾಗಿಲು ತೆರೆಯಿತು; ರಕ್ಷಣಾತ್ಮಕವಾಗಿ ಮಗುವನ್ನು ತಬ್ಬಿದ ಹಾಗೆ ತಬ್ಬಿಕೊಂಡು, ಸೊಗಸಾಗಿ ಹೆಜ್ಜೆ ಇಡುತ್ತಾ ವಿಶಾಲವಾದ ಹಜಾರಕ್ಕೆ ನಡೆದಳು. ಮನೆಯೊಳಗಿನ ಬೆಚ್ಚನೆ, ಮೃದುತ್ವ, ಬೆಳಕು, ಸುಗಂಧ—ಇವೆಲ್ಲಾ ಅವಳಿಗೆ ಎಷ್ಟು ಒಗ್ಗಿಹೋಗಿದ್ದುವೆಂದರೆ ಅವುಗಳ ಬಗ್ಗೆ ಗಮನವೇ ಇರಲಿಲ್ಲ; ಜೊತೆಯಲ್ಲಿದ್ದ ಆ ಹುಡುಗಿ ಇವುಗಳನ್ನೆಲ್ಲಾ ಹೇಗೆ ಅನುಭವಿಸುವಳು ಎಂಬುದನ್ನು ರೋಸ್‌ಮೇರಿ ಗಮನಿಸಿದಳು. ನಿಜಕ್ಕೂ ರೋಮಾಂಚಕಾರಿಯಾದ ಅನುಭವ. ಎಲ್ಲಾ ಕಪಾಟುಗಳನ್ನು ತೆರೆಯಲು, ಎಲ್ಲಾ ಪೆಟ್ಟಿಗೆಗಳನ್ನು ಮುಟ್ಟಲು ಸ್ವತಂತ್ರಳಾದಂಥ ಶ್ರೀಮಂತರ ಮನೆಯ ಹುಡುಗಿಯನ್ನು ಕಂಡ ಹಾಗಾಯಿತು.

'ಬಾ, ಬಾ ಮಹಡಿಯ ಮೇಲೆ ಹೋಗೋಣ', ಅಂದಳು ರೋಸ್ ಮೇರಿ, ಉದಾರವಾಗಬೇಕೆಂಬ ಉತ್ಕಟತೆಯಿಂದ. 'ಬಾ ನನ್ನ ಕೊಠಡಿಗೆ ಹೋಗೋಣ.'

ತನ್ನ ಮನೆಯ ಸೇವಕರು ಈ ಬಡಹುಡುಗಿಯನ್ನು ದುರುದುರು ನೋಡುವುದನ್ನು ತಪ್ಪಿಸಬೇಕಾದ ತವಕದಲ್ಲಿದ್ದಳು ರೋಸ್ ಮೇರಿ. ಇಬ್ಬರೂ ಮಹಡಿ ಮೆಟ್ಟಿಲು ಏರುತ್ತಿದ್ದ ಹಾಗೆಯೇ ತನ್ನ ಸಹಾಯಕ್ಕೆ ಜೀನ್‌ಳನ್ನೂ ಕರೆಯದೆ ತಾನೇ ಸಂಜಾಮು ಮಾಡಿಕೊಳ್ಳಬೇಕೆಂದು ತೀರ್ಮಾನಿಸಿದಳು. ಸಹಜವಾಗಿರೋದು ತಾನೆ ಸುಖ ನೀಡತ್ತೆ!

'ಅಗೋ!' ರೋಸ್ ಮೇರಿ ತನ್ನ ಸುಂದರವೂ ವಿಶಾಲವೂ ಆದ ಮಲಗುವ ಕೋಣೆಯನ್ನು ಪ್ರವೇಶಿಸುತ್ತಾ ಹೇಳಿದಳು. ಕಿಟಿಕಿಪರದೆ ಎಳೆದು ಕಟ್ಟಿದ್ದರು, ಅವಳ ಬೆಲೆ ಬಾಳುವ ಪೀಠೋಪಕರಣಗಳ ಮೇಲೆ ಹೊಂಬಣ್ಣದ ಮೆತ್ತನೆ ಒರಗುದಿಂಬುಗಳು, ಕೆಂಪು ಮತ್ತು ನೀಲಿ ಬಣ್ಣದ ಹೊದಿಕೆ–ಇವುಗಳ ಮೇಲೆ ಕೊಠಡಿಯನ್ನು ಬೆಚ್ಚಗೆ ಮಾಡಲು ಹೊತ್ತಿಸಿದ ಅಗ್ಗಿಷ್ಟಿಕೆಯಿಂದ ಹೊರಟ ಜ್ವಾಲೆ ಪ್ರತಿಫಲನವಾಗುತ್ತಿತ್ತು.

ಆ ಹುಡುಗಿ ಬಾಗಿಲಿಗೆ ಆತುಕೊಂಡೇ ನಿಂತಳು; ಅವಳಿಗೆ ಮಾತು ಹೊರಡುವಂತಿರಲಿಲ್ಲ. ಆದರೆ ರೋಸ್ ಮೇರಿ ಅದನ್ನು ಮನಸ್ಸಿಗೆ ಹಾಕಿಕೊಳ್ಳಲಿಲ್ಲ.

'ಬಾ ಒಳಗೆ ಬಂದು ಕೂತ್ಕೊ', ಬೆಂಕಿಯ ಹತ್ತಿರ ತನ್ನ ದೊಡ್ಡ ಕುರ್ಚಿಯನ್ನು ಎಳೆಯುತ್ತಾ ಹೇಳಿದಳು. 'ಇದು ಆರಾಮವಾಗಿರುವ ಕುರ್ಚಿ. ಕೂತ್ಕೊಂಡು ಬೆಚ್ಚಗೆ ಮಾಡಿಕೋ. ಚಳಿಯಲ್ಲಿ ಗಡಗಡಾಂತ ನಡಗ್ತಾಯಿದ್ದೀಯ.'

'ನಾನು ಬರಲಾರೆ ಮೇಡಂ', ಹಾಗಂತ ಹೇಳಿ ಆ ಹುಡುಗಿ ಹಿಂದು ಹಿಂದಕ್ಕೆ ಸರಿಯುತ್ತಾ ಇತ್ತು.

'ಓ, ದಯವಿಟ್ಟು' – ರೋಸ್ ಮೇರಿ ಮುಂದೆ ದಾಪಿಟ್ಟಳು–'ನೀನು ಹೆದರ್ಕೊಬಾರ್ದು, ನಿಜವಾಗ್ಲೂ – ಭಯಪಡಬೇಡ. ಕೂತ್ಕೊ, ನಾನು ಬಟ್ಟೆ ಬದಲಾಯಿಸಿಕೊಂಡ ಮೇಲೆ ಪಕ್ಕದ ಕೊಠಡಿಗೆ ಹೋಗಿ ಚಹಾ ಕುಡಿದು ಸುಧಾರಿಸಿಕೊಳ್ಳೋಣ. ಯಾಕೆ ಹೆದರ್ತೀಯಾ?' ಹಾಗೆಂದು ಹೇಳಿ ಮೃದುವಾಗಿ ಆ ತೆಳ್ಳನೆಯ ಶರೀರದ ವ್ಯಕ್ತಿಯನ್ನು ಆಳದ ಕಾಗಡಿಯಂಥ ಕುರ್ಚಿಗೆ ನೂಕಿದಳು.

ಆದರೆ ಆ ಕಡೆಯಿಂದ ಏನೂ ಉತ್ತರ ಬರಲಿಲ್ಲ. ಆ ಹುಡುಗಿ ನಿಂತಲ್ಲೇ ನಿಂತುಕೊಂಡಿದ್ದಳು. ತನ್ನೆರಡೂ ಕೈಗಳನ್ನು ಪಕ್ಕಕ್ಕೆ ಜೋಡಿಸಿ, ಬಾಯಿಯನ್ನು ಕೊಂಚ ತೆರೆದು, ನಿಜ ಹೇಳಬೇಕೆಂದರೆ, ಆ ಹುಡುಗಿ ದಡ್ಡಿಯಂತೆ ಕಂಡಳು. ಆದರೆ ರೋಸ್ ಮೇರಿ ಅದನ್ನೆಲ್ಲಾ ಗಮನಿಸುವಂತಿರಲಿಲ್ಲ. ಮುಂದೆ ಬಾಗಿ ಅವಳು ಹೀಗಂದಳು: 'ನಿನ್ನ ಟೋಪಿ ತೆಗೆಯೋಲ್ವ? ನಿನ್ನ ಅಂದವಾದ ಕೂದಲೆಲ್ಲ ನೆಂದುಹೋಗಿದೆ. ಟೋಪಿ ಇಲ್ಲದೇ ಇದ್ರೇನೇ ಆರಾಮ ಅನ್ಸುತ್ತೆ ಅಲ್ವ?'

ಮೆಲ್ಲಗೆ ಉಸುರಿದ ಆ ದನಿಯಿಂದ 'ಅಗಲಿ ಮೇಡಂ' ಅಂತ ಹೊರಟ ಹಾಗೆ ಅನ್ನಿಸಿತು; ಆ ಬಳಿಕ ಒದ್ದೆಮುದ್ದೆಯಾದ ಆ ಟೋಪಿಯನ್ನು ತೆಗೆದಿದ್ದಳು. 'ನಿನ್ನ ಕೋಟನ್ನೂ ತೆಗೆತೇನೆ' ಎಂದಳು ರೋಸ್‌ಮೇರಿ.

ಹುಡುಗಿ ಎದ್ದು ನಿಂತುಕೊಂಡಳು. ಆದರೆ ಒಂದು ಕೈಯಲ್ಲಿ ಕುರ್ಚಿಯನ್ನು ಹಿಡಿದುಕೊಂಡೇ ರೋಸ್‌ಮೇರಿ ಕೋಟು ತೆಗೆಯುವ [illegible] ಕೋಟು

ತೆಗೆಯುವುದು ಒಂದು ಸಾಹಸದ ಕೆಲಸವಾಯಿತು. ಆ ಹುಡುಗಿ ಮಾತ್ರ ಇದಕ್ಕೆ ಅನುಕೂಲ ಮಾಡಿಕೊಡಲಿಲ್ಲ. ಪುಟ್ಟ ಮಗುವಿನ ಹಾಗೆ ತತ್ತರಸಾಡಿದಳು. ಆಗ ರೋಸ್‌ಮೇರಿಯ ಮನಸ್ಸಿಗೆ ಒಂದು ಆಲೋಚನೆ ಬಂದಿತು–ಜನರಿಗೆ ಸಹಾಯ ಬೇಕಾದರೆ ಅವರೂ ಕೂಡ ಸ್ವಲ್ಪ ಪ್ರತಿಸ್ಪಂದಿಸಬೇಕು. ಕೊಂಚವೇ ಕೊಂಚ, ಇಲ್ಲ ಅಂದ್ರೆ ನಿಜಕ್ಕೂ ತೊಂದರೆಯಾಗುತ್ತೆ. ಈಗ ಕೋಟನ್ನು ಏನು ಮಾಡುವುದು? ಏನು ಮಾಡುವುದಕ್ಕೂ ತೋಚದೆ ನೆಲದ ಮೇಲೆ ಇಟ್ಟುಬಿಟ್ಟಳು, ಆ ಟೋಪಿಯನ್ನೂ ಸಹ. ಗೋಡೆಗಾನಿಸಿದ ಮೇಜಿನ ಮೇಲಿನ ಸಿಗರೇಟ್ ತೆಗೆದುಕೊಳ್ಳುವುದಕ್ಕೆ ಕೈ ಚಾಚುವ ಹೊತ್ತಿಗೆ ಆ ಹುಡುಗಿ ಹಗುರವಾಗಿ ಮತ್ತು ವಿಚಿತ್ರವಾಗಿ ಕೂಡ ಅಂದಿದ್ದಳು. 'ಕ್ಷಮಿಸಿ ಮೇಡಂ, ನನಗೆ ತಲೆ ಸುತ್ತುತ್ತಾಯಿದೆ. ನಾನೇನಾದ್ರೂ ತೆಗೆದುಕೊಳ್ಳದೇ ಹೋದ್ರೆ ಬಿದ್ದೇ ಬಿಡ್ತೀನಿ ಮೇಡಂ.'

'ಅಯ್ಯೋ ದೇವರೆ, ಮರೆತೇ ಬಿಟ್ನಲ್ಲ!' ರೋಸ್‌ಮೇರಿ ಕರೆಗಂಟೆಯ ಬಳಿ ಧಾವಿಸಿದಳು.

'ಚಹಾ! ಬೇಗ ಚಹಾ ತಾ! ಸ್ವಲ್ಪ ಸ್ವಲ್ಪ ಬ್ರಾಂದಿ ಕೂಡ—ಈ ಕೂಡಲೇ!' ಸೇವಕಿ ಹೋಗೋದಕ್ಕೆ ಸಿದ್ಧವಾಗುತ್ತಿದ್ದಂತೆಯೇ ಆ ಹುಡುಗಿ ಕೂಗಿಕೊಂಡಿತು; 'ಬೇಡ, ನನಗೆ ಬ್ರಾಂದಿ ಬೇಡ. ನಾನು ಬ್ರಾಂದಿ ಕುಡಿಯೋಲ್ಲ. ನನಗೆ ಬೇಕಾಗಿರೋದು ಒಂದು ಕಪ್ಪು ಚಹಾ ಮೇಡಂ.' ಹಾಗೆ ಹೇಳಿ ಅಳುವುದಕ್ಕೆ ಶುರುಮಾಡಿತು.

ಭಯಂಕರವೂ, ರೋಮಾಂಚಕಾರಿಯೂ ಆದ ಕ್ಷಣವದು. ಅವಳ ಕುರ್ಚಿಯ ಪಕ್ಕದಲ್ಲೇ ರೋಸ್‌ಮೇರಿ ಮಂಡಿಯೂರಿ ಕುಳಿತುಕೊಂಡಳು.

'ಅಳಬೇಡ, ಪುಟ್ಟ ಹೆಣ್ಣೆ' ಅಂದಳು. 'ಅಳಬೇಡ', ಹಾಗಂತ ಹೇಳಿ ತನ್ನ ಕಸೂತಿ ಹಾಕಿದ ಕರವಸ್ತ್ರವನ್ನು ಅವಳಿಗೆ ಕೊಟ್ಟಳು. ನಿಜವಾಗಿಯೂ ಅವಳ ಹೃದಯ ಕಲಕಿತ್ತು. ಸಪೂರವಾಗಿ, ಹಿಡಿಯಾಗಿದ್ದ ಆ ಭುಜಗಳ ಮೇಲೆ ತನ್ನ ಕೈಗಳನ್ನಿಟ್ಟಳು.

ಈಗ ಅವಳು ತನ್ನ ನಾಚಿಕೆಯನ್ನು ಮರೆತು, ತಾವಿಬ್ಬರೂ ಹೆಂಗಸರು ಎಂಬುದನ್ನು ಮಾತ್ರ ನೆನಪಿಸಿಕೊಂಡು ಮಾತನಾಡಿದಳು. 'ಈ ರೀತಿಯಾಗಿ ನಾನು ಹೆಚ್ಚು ಹೊತ್ತು ಇರಲಾರೆ. ನನಗೆ ತಡೆಯೋದಕ್ಕಾಗಲ್ಲ. ಖಂಡಿತಾ ಆಗಲ್ಲ. ಇನ್ನು ನಾನು ತಾಳಲಾರೆ.'

'ನಿನಗೇನೂ ಆಗೋಲ್ಲ. ನಾನು ನಿನ್ನನ್ನ ನೋಡಿಕೊಳ್ತೀನಿ. ಅಳಬೇಡ ಇನ್ನು. ನೀನು ನನ್ನನ್ನ ಭೇಟಿಯಾದದ್ದು ಒಳ್ಳೆಯದಾಯ್ತು ಅಂತ ನಿನಗೆ ಅನ್ನೋಲ್ವ? ಚಹಾ ಕುಡಿಯೋಣ, ಆಗ ನೀನು ನನಗೆ ಎಲ್ಲ ಹೇಳುವಿಯಂತೆ. ಏನಾದ್ರೂ ಏರ್ಪಾಟು ಮಾಡ್ತೀನಿ. ಆಣೆ ಇಟ್ಟು ಹೇಳ್ತಿದ್ದೀನಿ. ಅಳು ನಿಲ್ಸು. ನೋಡಕ್ಕಾಗೋಲ್ಲ. ದಯವಿಟ್ಟು!'

ಅವಳು ಅಳು ನಿಲ್ಲಿಸುತ್ತಿದ್ದ ಹಾಗೆಯೇ ಎದ್ದು ರೋಸ್‌ಮೇರಿ ತಮ್ಮ ಮಧ್ಯದಲ್ಲಿ ಮೇಜು ಇಡುವಷ್ಟರಲ್ಲಿ ಚಹಾ ಬಂದಿತು. ಆ ಬಡಪ್ರಾಣಿಗೆ ಅವಳು ಏನೇನೆಲ್ಲಾ ಕೊಟ್ಟಳು—ಬ್ರೆಡ್ಡು, ಬೆಣ್ಣೆ, ಸ್ಯಾಂಡ್‌ವಿಚ್‌ಗಳು—ಇತ್ಯಾದಿಯನ್ನೆಲ್ಲಾ.

ಬಟ್ಟಲು ಖಾಲಿಯಾದಾಗಲೆಲ್ಲಾ ಮತ್ತೆ ಅದಕ್ಕೆ ಚಹಾ ಬಗ್ಗಿಸುವಳು, ಹಾಲು, ಸಕ್ಕರೆ–ತಕ್ಕಷ್ಟು ಬೆರಸಿ. ಸಕ್ಕರೆ ಜೀವಕ್ಕೆ ಒಳ್ಳೆಯದು ಅಂತ ಜನ ಅಂತಾರೆ; ಆದರೆ ಅವಳು ಮಾತ್ರ ಅದನ್ನು ಅಷ್ಟಾಗಿ ಇಷ್ಟ ಪಡುತ್ತಿರಲಿಲ್ಲ. ಸಿಗರೇಟು ಸೇದುತ್ತಾ ಬೇರೊಂದು ಕಡೆ ನೋಡುತ್ತಾ ಕುಳಿತಳು —ಆ ಹುಡುಗಿಗೆ ಮುಜುಗರವಾಗಬಾರ ದೆಂಬುದು ಅವಳ ತಂತ್ರ.

ಆ ಲಘು ಉಪಾಹಾರದಿಂದ ಅದ್ಭುತ ವಾದ ಪರಿಣಾಮವೇ ಆಗಿತ್ತು. ಚಹಾದ ಟೇಬಲ್ಲನ್ನು ಹೊರಗೆ ತೆಗೆದುಕೊಂಡು ಹೋಗುತ್ತಿದ್ದಂತೆಯೇ ಹಗುರವಾದ, ಸಪೂರವಾದ ಬತ್ತಿಗೂದಲ, ಕಂದು ತುಟಿ ಗಳ, ಆಳದ ಕಣ್ಣುಗಳ ಹೊಸ ವ್ಯಕ್ತಿ ಗೋಚರವಾಯಿತು. ಮಧುರವಾದ ಆಲಸ್ಯ ದಿಂದ, ಜ್ವಾಲೆಯ ಕಡೆ ದೃಷ್ಟಿ ಮಾಡಿ, ಆ ದೊಡ್ಡ ಕುರ್ಚಿಯಲ್ಲಿ ಹಿಂದಕ್ಕೆ ಒರಗಿ ಕೊಂಡಿತ್ತು. ರೋಸ್‌ಮೇರಿ ಮತ್ತೊಂದು ಸಿಗರೇಟು ಹಚ್ಚಿದಳು. ಮಾತಿಗೆ ಶುರು ಮಾಡಲು ಅದು ತಕ್ಕ ಸಮಯವಾಗಿತ್ತು.

'ನೀನು ಈ ಮೊದಲು ಊಟಮಾಡಿದ್ದು ಯಾವಾಗ?' ಮೃದುವಾಗಿ ಕೇಳಿದಳು. ಆದರೆ ಅದೇ ಕ್ಷಣ ಬಾಗಿಲು ಹಿಡಿಪು ತಿರುಗಿತು.

'ರೋಸ್‌ಮೇರಿ ನಾ ಒಳಗೆ ಬರ್ಲಾ?' ಅಂದ ಫಿಲಿಪ್.

'ಏನಡ್ಡಿಯಿಲ್ಲ'

ಒಳಗೆ ಬಂದ. 'ಓ, ಕ್ಷಮಿಸು', ಅಂದವನೆ, ನಿಂತು ದುರುಗುಟ್ಟಿ ನೋಡಿದ.

'ಏನು ಪರವಾಗಿಲ್ಲ', ಅಂದಳು ರೋಸ್ ಮೇರಿ 'ನಗುತ್ತಾ, 'ಇವಳು ನನ್ನ ಗೆಳತಿ, ಕುಮಾರಿ—'

'ಸ್ಮಿತ್', ಮೇಡಂ.' ಹಾಗಂತ ಆ ಆಲಸ್ಯ ತುಂಬಿದ ವ್ಯಕ್ತಿ ಹೇಳುವಾಗ, ವಿಚಿತ್ರವಾದ ರೀತಿಯಲ್ಲಿ ಅವಳು ಅಚಲಳೂ ನಿರ್ಭಯಳೂ ಆಗಿದ್ದಳು.

'ಸ್ಮಿತ್', ರೋಸ್‌ಮೇರಿ ಹೇಳಿದಳು. 'ನಾವು ಸ್ವಲ್ಪ ಹೊತ್ತು ಮಾತನಾಡ ಬೇಕಾಗಿದೆ.'

'ಆಗಲಿ, ಅದಕ್ಕೇನಂತೆ', ಅಂದ ಫಿಲಿಪ್. ಅಷ್ಟರಲ್ಲಿ ನೆಲದ ಮೇಲೆ ಬಿದ್ದಿದ್ದ ಕೋಟು ಮತ್ತು ಟೋಪಿಯ ಕಡೆ ಅವನ ಗಮನ ಹರಿಯಿತು. ಬೆಂಕಿಯ ಬಳಿ ಬಂದು ಅದಕ್ಕೆ ಬೆನ್ನುಮಾಡಿ ನಿಂತುಕೊಂಡ. 'ಕೆಟ್ಟ ಅಪರಾಹ್ನ ಇದು', ಅಂದು ಬಹಳ ಕುತೂಹಲವಾಗಿ ಆ ನಿಶ್ಚೇಷ್ಟಿತ ವ್ಯಕ್ತಿಯ ಕಡೆ, ಅದರ ಕೈಗಳು ಹಾಗೂ ಬೂಟುಗಳ ಕಡೆ, ನಂತರ ರೋಸ್‌ಮೇರಿಯ ಕಡೆ ನೋಡತೊಡಗಿದ.

'ಹೌದು, ಹಾಗೇ ಕಾಣತ್ತೆ, ಅಲ್ವ?' ಎಂದು ರೋಸ್‌ಮೇರಿ ಹರ್ಷದಲ್ಲೇ ನುಡಿದಳು. ಫಿಲಿಪ್ ತನ್ನ ಸೊಗಸಾದ ನಗು ನಕ್ಕ. 'ವಾಸ್ತವವಾಗಿ,' ಆತ ಹೇಳಿದ, 'ಒಂದು ನಿಮಿಷ ನೀನು ಓದುವ ಕೊಠಡಿಗೆ ಬರ್ತಿಯಾ ಅಂತ ಕೇಳಬೇಕು ಅಂದು ಕೊಂಡಿದ್ದೆ. ಒಂದೇ ನಿಮಿಷ? ಮಿಸ್‌ಸ್ಮಿತ್ ನಮ್ಮನ್ನು ಕ್ಷಮಿಸಬಹುದಾ?'

ಆ ದೊಡ್ಡ ಕಣ್ಣುಗಳು ಅವನತ್ತ ತಿರುಗಿ ದವು, ಅವಳ ಪರವಾಗಿ ರೋಸ್‌ಮೇರಿ ಉತ್ತರಿಸಿದಳು: 'ಖಂಡಿತಾ ಅವಳು ತಪ್ಪು ತಿಳಿಯೋಲ್ಲ.' ಅವರಿಬ್ಬರೂ ಒಟ್ಟಿಗೇ ಕೊಠಡಿಯ ಹೊರಗೆ ನಡೆದರು.

'ಏನಿದು ಅಂತೀನಿ?' ತಾವಿಬ್ಬರೂ ಸಾಕಷ್ಟು ಹೊರಗಿದ್ದೀವಿ ಎಂದು ಖಾತ್ರಿ

ಪಡಿಸಿಕೊಂಡ ಬಳಿಕ ಫಿಲಿಪ್ ಗುಡುಗಿದ 'ಆ ಹುಡುಗಿ ಯಾರು? ಏನಿದರ ಅರ್ಥ?'

ಬಾಗಿಲಿಗೆ ಒರಗಿ ರೋಸ್‌ಮೇರಿ ನಗುತ್ತಾ ಹೇಳಿದಳು, 'ಕರ್ಜನ್ ಬೀದಿಯಲ್ಲಿ ಅವಳನ್ನು ನಾನು ಭೇಟಿಯಾಗಿ ಅಲ್ಲಿಂದ ಕರ್ಕೊಂಬಂದೆ. ನಿಜವಾಗಿ. ಒಂದು ಕಪ್ಪು ಚಹಾಕ್ಕೆ ಕಾಸುಕೊಡಿ ಅಂದ್ಲು, ನಾನು ಜೊತೆಯಲ್ಲಿ ಅವಳನ್ನ ಮನೆಗೇ ಕರ್ಕೊಂಬಂದುಬಿಟ್ಟೆ.'

'ಸರಿ' ಅವಳನ್ನ ಇಟ್ಟುಕೊಂಡು ಏನು ಮಾಡಬೇಕೂಂತ ಇದ್ದೀಯ?' ಫಿಲಿಪ್ ಕೂಗಿದ.

'ಅವಳ ಮೇಲೆ ರೇಗಬೇಡ', ಅಂದಳು ರೋಸ್‌ಮೇರಿ. 'ಕಠಿಣವಾಗಬೇಡ ಅವಳ ವಿಚಾರದಲ್ಲಿ. ನನಗಂತೂ ಗೊತ್ತಿಲ್ಲ ಏನು ಮಾಡಬೇಕೂಂತ. ಆದ್ರೆ ಅವಳನ್ನ ಮಾತ್ರ ಚೆನ್ನಾಗಿ ತೊಂದರೆ ಕೊಡದೆ....ಅವಳಿಗೆ ಹಿತವಾಗೋ ಹಾಗೆ....'

'ನನ್ನ ಮುದ್ದಿನ ಹುಡುಗಿ', ಅಂದ ಫಿಲಿಪ್, 'ನಿನಗೆಲ್ಲೋ ಹುಚ್ಚು ಹಿಡಿದಿರಬೇಕು, ಅದು ಖಂಡಿತಾ ಸಾಧ್ಯವಿಲ್ಲ.'

'ನನಗೆ ಗೊತ್ತಿತ್ತು ನೀನು ಹಾಗೆ ಹೇಳ್ತೀಯಾ ಅಂತ', ರೋಸ್‌ಮೇರಿ ದಬಾಯಿಸಿದಳು. 'ನಾನು ಮಾಡಿದ್ರಲ್ಲಿ ಏನು ತಪ್ಪು? ಅದು ಸರಿಕಾಣಲ್ವ? ಜೊತೆಗೆ, ನಾವು ಇಂಥ ವಿಷಯಗಳ ಬಗ್ಗೆ ಓದ್ತಾನೇ ಇರ್ತೀವಲ್ಲ. ಅದಕ್ಕೆ ನಾನು ಹೀಗೆ—'

'ಆದರೆ', ನಿಧಾನವಾಗಿ ಹೇಳಿದ ಫಿಲಿಪ್, ಸಿಗಾರಿನ ಒಂದು ತುದಿಯನ್ನು ಕತ್ತರಿಸುತ್ತಾ, 'ಅವಳು ಆಶ್ಚರ್ಯಕರವಾದ ರೀತಿಯಲ್ಲಿ ಅಂದವಾಗಿದ್ದಾಳೆ'

'ಅಂದವೇ?' ರೋಸ್‌ಮೇರಿಗೆ ಆಶ್ಚರ್ಯದಿಂದ ಕೆನ್ನೆ ಕೆಂಪೇರಿತು. 'ನಿನಗೆ ಹಾಗನ್ನಿಸ್ತಾ? ನನಗೆ ಹೊಳೆದೇ ಇರ್ಲಿಲ್ಲಾ.'

'ದೇವರೆ, ದೇವರೆ', ಹಾಗಂತ ಫಿಲಿಪ್ ಬೆಂಕಿಕಡ್ಡಿ ಕೀರಿದ. 'ಅವಳ ಸೌಂದರ್ಯ ಕಣ್ಣುಕೋರೈಸುವಂಥದ್ದು. ಇನ್ನೊಂದು ಸಾರಿ ನೋಡು, ನನ್ನ ಮುದ್ದು ಮಗು. ಈಗ ನಿನ್ನ ಕೊಠಡಿಗೆ ಕಾಲಿಡ್ತಾಯಿದ್ದ ಹಾಗೆ ನನ್ನ ಹೃದಯ ಹಾರಿಹೋಯ್ತು. ಆದ್ರೂ ಹೇಳ್ತಿದ್ದೀನಿ, ನೀನು ಮಾತ್ರ ಒಂದು ದೊಡ್ಡ ತಪ್ಪು ಮಾಡ್ತಿದ್ದೀಯ. ನಾನೇನಾದ್ರೂ ಒರಟಾಗಿ ಹೇಳ್ತಾಯಿದ್ರೆ ನನ್ನನ್ನು ಕ್ಷಮಿಸು ಡಾರ್ಲಿಂಗ್. ಆದರೆ ಮಿಸ್‌ಸ್ಮಿತ್ ಸಮಯಕ್ಕೆ ಸರಿಯಾಗಿ ನಮ್ಮ ಜೊತೆ ಊಟಕ್ಕೆ ಕೂತ್ಕೊತಾಳೋ ಇಲ್ವೋ —ನಾನು ತುರ್ತಾಗಿ ಮಿಲಿನರ್ಸ್ ಗೆಜೆಟ್' ಓದಬೇಕಾಗಿದೆ.

'ವಿಚಿತ್ರಪ್ರಾಣಿ ನೀನು!' ಅಂತ ಹೇಳಿ ರೋಸ್‌ಮೇರಿ ಪುಸ್ತಕದ ಕೊಠಡಿಯಿಂದ ಹೊರಗೆ ನಡೆದಳು, ಆದ್ರೆ ಪುನಃ ತನ್ನ ಮಲಗುವ ಕೋಣೆಗೆ ಹೋಗಲಿಲ್ಲ. ತನ್ನ ಓದುವ ಕೋಣೆಗೆ ಹೋಗಿ ಅಲ್ಲಿ ಬರೆಯುವ ಮೇಜಿನ ಬಳಿ ಕುಳಿತುಕೊಂಡಳು. ಅಂದವಾದವಳು! ದೂಸರಾ ಮಾತೇ ಇಲ್ಲ! ಸುಂದರಿ! ಚೆಕ್‌ಪುಸ್ತಕವನ್ನು ಹೊರಗೆ ತೆಗೆದಳು. ಈ ಚೆಕ್ಕುಗಳಿಂದ ಅವಳಿಗೇನು ಪ್ರಯೋಜನ? ಹರಿಗಾನೆಯೊಂದನ್ನು ಎಳೆದು ಐದು ಪೌಂಡು ನೋಟುಗಳನ್ನು ತೆಗೆದಳು. ಒಂದು ಬಾರಿ ಅವುಗಳನ್ನು ಗಮನಿಸಿ, ಎರಡು ನೋಟುಗಳನ್ನು ಮತ್ತೆ ಒಳಕ್ಕಿಟ್ಟಳು, ಉಳಿದ ಮೂರು ನೋಟು

ಗಳನ್ನು ಅಂಗೈಯಲ್ಲಿಟ್ಟು ಕಿವುಚಿ ತನ್ನ ಮಲಗುವ ಕೋಣೆಗೆ ನಡೆದಳು.

ಅರ್ಧ ಗಂಟೆಯಾದ ಬಳಿಕವೂ ಫಿಲಿಪ್ ಪುಸ್ತಕಭಂಡಾರದಲ್ಲೇ ಇದ್ದ, ರೋಸ್‌ಮೇರಿ ಒಳಗೆ ಬಂದಳು. 'ನಿನಗೆ ಈ ವಿಷಯ ಮಾತ್ರ ಹೇಳೋದಕ್ಕೆ ಬಂದೆ ನಾನು' ಅಂತ ರೋಸ್‌ಮೇರಿ ಬಾಗಿಲಿಗೆ ಒರಗಿ ನಿಂತು ತನ್ನ ಬೆರಗುಗಣ್ಣನ್ನು ಅವನ ಮೇಲೆ ನೆಟ್ಟು ಹೇಳಿದಳು: 'ಮಿಸ್‌ಸ್ಮಿತ್ ಈವತ್ತು ನಮ್ಮ ಜೊತೆ ಊಟ ಮಾಡೋದಿಲ್ಲ.'

ಫಿಲಿಪ್ ತಾನು ಓದುತ್ತಿದ್ದ ಪತ್ರಿಕೆಯನ್ನು ಕೆಳಗಿಟ್ಟ. 'ಓಹ್, ಏನಾಯ್ತು? ಮೊದಲೇ ಏನಾದ್ರೂ ಕಾರ್ಯಕ್ರಮ ನಿಗದಿಯಾಗಿತ್ತಾ?'

ರೋಸ್‌ಮೇರಿ ಅವನ ಹತ್ತಿರ ಬಂದು ಅವನ ಮೊಣಕಾಲುಗಳ ಮೇಲೆ ಕುಳಿತುಕೊಂಡಳು. 'ಹೋಗಬೇಕೂಂತ ಹಠ ಹಿಡಿದಳು', ಅಂದಳು 'ಆ ಬಡಪಾಯಿಗೆ ಒಂದಷ್ಟು ಹಣಕೊಟ್ಟು ಕಳುಹಿಸಿದೆ. ಅವಳ ಇಷ್ಟಕ್ಕೆ ವಿರುದ್ಧವಾಗಿ ನಾನವಳನ್ನು ಇಟ್ಟುಕೊಳ್ಳೋದಕ್ಕೆ ಆಗಲಿಲ್ಲ', ಎಂದು ಮೆಲ್ಲಗೆ ಸೇರಿಸಿದಳು.

ರೋಸ್‌ಮೇರಿ ಆಗ ತಾನೆ ತನ್ನ ತಲೆಬಾಚಿಕೊಂಡಿದ್ದಳು, ಕಣ್ಣುಗಳಿಗೆ ಕಾಡಿಗೆಯ ಗೆರೆ ಎಳೆದಿದ್ದಳು, ಕೊರಳಿಗೆ ಮುತ್ತಿನಸರ ಹಾಕಿಕೊಂಡಿದ್ದಳು. ತನ್ನ ಕೈಗಳನ್ನೆತ್ತಿ ಫಿಲಿಪ್‌ನ ಗಲ್ಲ ಮುಟ್ಟಿದಳು.

'ನನ್ನನ್ನ ಇಷ್ಟ ಪಡ್ತೀಯಾ?' ಮಧುರವೂ, ಮೃದುವೂ ಆದ ಅವಳ ಧ್ವನಿ ಅವನನ್ನು ಕಲಕಿತು.

'ಹುಚ್ಚು ಅನ್ನುವಷ್ಟು ಇಷ್ಟಪಡ್ತೀನಿ' ಹಾಗೆ ಹೇಳಿ ಅವಳನ್ನು ಬಿಗಿಯಾಗಿ ಅಪ್ಪಿದ.

'ಮುತ್ತುಕೊಡು'

ಅಲ್ಲೊಂದು ಕ್ಷಣ ಮೌನ.

ನಂತರ ಕನಸಿನಲ್ಲಿರುವಂತೆ ರೋಸ್‌ಮೇರಿ ಹೇಳಿದಳು, 'ಎಂಥ ಸುಂದರವಾದ ಒಂದು ಪುಟ್ಟ ಪೆಟ್ಟಿಗೆ ನೋಡ್ದೆಗೊತ್ತಾ? ಇಪ್ಪತ್ತೆಂಟು ಗಿನಿಯಂತೆ. ಅದನ್ನ ಕೊಂಡುಕೊಳ್ಳಲಾ?'

ಫಿಲಿಪ್ ದಿಗ್ಗನೆ ಎದ್ದು ನಿಂತುಕೊಂಡ. 'ಕೊಂಡುಕೋ, ನನ್ನ ದುಂದುಗಾರ ಹೆಣ್ಣೆ' ಎಂದ. ಆದರೆ ವಾಸ್ತವವಾಗಿ ರೋಸ್‌ಮೇರಿ ಹೇಳಬೇಕೆಂದಿದ್ದದ್ದು ಅದಲ್ಲ.

'ಫಿಲಿಪ್', ಮೆಲ್ಲನುಸುರಿ ಅವನ ತಲೆಯನ್ನು ತನ್ನ ಎದೆಗೊತ್ತಿದಳು 'ನಾನು ಅಂದವಾಗಿದ್ದೀನಾ?'

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ;
ಹಸಿಗೋಡೆಯ ಹರಳಿನಂತೆ
ಹುಸಿ ಹೋಗದ ಕನ್ನಡ.

—ಚೆನ್ನವೀರ ಕಣವಿ

ಬಾವಲಿಗಳ ಲೋಕ

ಸಾತನೂರು ದೇವರಾಜ್*

ಬಾವಲಿಗಳನ್ನು ನೋಡದೆ ಇರುವವರು ವಿರಳವೆಂದೇ ಹೇಳಬಹುದು. ಸೂರ್ಯ ಮುಳುಗಿ ಕತ್ತಲೆ ಆವರಿಸಿದ ನಂತರ ಬಾವಲಿಗಳನ್ನು ಕಾಣಬಹುದು. ಹಗಲಿನಲ್ಲಿ ಮನುಷ್ಯರು ಕ್ರಿಯಾಶೀಲರಾಗಿದ್ದು, ಕತ್ತಲೆಯಾದೊಡನೆ ವಿಶ್ರಾಂತಿಗೆ ತೆರಳಿದರೆ ಬಾವಲಿಗಳು ಹಗಲಿನಲ್ಲಿ ನಿದ್ದೆ ಹೋಗಿ, ರಾತ್ರಿಯಲ್ಲಿ ಕ್ರಿಯಾಶೀಲವಾಗಿರುತ್ತವೆ. ರಾತ್ರಿಯ ವೇಳೆಯಲ್ಲಿ ಕ್ರಿಯಾಶೀಲವಾಗಿರುವ ಪ್ರಾಣಿಗಳನ್ನು ನಿಶಾಚರಿ ಪ್ರಾಣಿಗಳೆಂದು ಕರೆಯುತ್ತಾರೆ. ಬಾವಲಿಗಳಂತೆ ರಾತ್ರಿ ವೇಳೆಯಲ್ಲಿ ಕ್ರಿಯಾಶೀಲವಾಗಿರುವ ಮತ್ತೊಂದು ಪ್ರಾಣಿ ಎಂದರೆ ಗೂಬೆ. ಬಾವಲಿ ಮತ್ತು ಗೂಬೆಗಳ ಮೇಲಿರುವಷ್ಟು ಸಂದೇಹ ಅನುಮಾನ, ಕಪೋಲ ಕಲ್ಪಿತ ಸಂಗತಿಗಳು ಪ್ರಾಣಿ ಪ್ರಪಂಚದ ಬೇರಾವ ಪ್ರಾಣಿಗಳ ಮೇಲೆ ಇಲ್ಲ ಎಂದರೆ ತಪ್ಪಾಗಲಾರದು. ಕೆಲವು ಬಾವಲಿಗಳು ಆಹಾರಕೋಸ್ಕರ ರಕ್ತವನ್ನು ಅವಲಂಬಿಸಿವೆಯೆ? ಹಗಲಿನಲ್ಲಿ ಬಾವಲಿಗಳು ಸುತ್ತಮುತ್ತಲಿನ ವಸ್ತುಗಳನ್ನು ನೋಡಲು ಶಕ್ತವಾದವೇ? ಇಂಥ ಹತ್ತು ಹಲವು ಪ್ರಶ್ನೆಗಳಿಗೆ ಉತ್ತರ ಕೊಡುವುದೇ ಈ ಲೇಖನದ ಉದ್ದೇಶ.

ಬಾವಲಿ ಸ್ತನಿ ಗುಂಪಿಗೆ ಸೇರಿದ ಪ್ರಾಣಿ. ಏಕೆಂದರೆ ಪಕ್ಷಿಗಳಂತೆ ಬಾವಲಿಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹಾರುತ್ತವೆ. ಸ್ತನಿ ಗುಂಪಿನ ಪ್ರಾಣಿಗಳಲ್ಲಿ ಹಾರಬಲ್ಲ ಸ್ತನಿ ಎಂದರೆ ಇದೊಂದೆ, ಇನ್ನಿತರ ಸ್ತನಿಗಳಲ್ಲಿರುವಂತೆ ಬಾವಲಿಗಳ ದೇಹದಲ್ಲಿ ಕೂದಲಿನಾಕಾರದ ತುಪ್ಪಳಗಳಿಂದ ಆವರಿಸಲ್ಪಟ್ಟಿದೆ. ಇದಲ್ಲದೆ ಬಾವಲಿಗಳು ತನ್ನ ಎಳೆಯ ಮರಿಗಳಿಗೆ ಹಾಲುಣಿಸಬಲ್ಲವು ಪಕ್ಷಿಗಳಂತೆ ಸ್ಥಳದಿಂದ ಸ್ಥಳಕ್ಕೆ ಹಾರಬಲ್ಲವದಾದರೂ ಹಾರುವುದಕ್ಕೆ ಅತ್ಯವಶ್ಯಕವಾದ ರೆಕ್ಕೆಗಳು ಇವುಗಳಲ್ಲಿ ಇಲ್ಲ. ಮುಂಭಾಗದ ಕಾಲುಗಳು ಮತ್ತು ಬೆರಳುಗಳಿಗೆ ಅಂಟಿಕೊಂಡಂತೆ ಚರ್ಮದ ಹೊದಿಕೆ ಇದೆ. ಈ ಹೊದಿಕೆ ಮುಂಭಾಗದ ಕಾಲುಗಳಿಂದ ಹಿಂಭಾಗದ ಕಾಲುಗಳಿಗೆ ಅಂಟಿಕೊಂಡಿರುತ್ತವೆ. ಈ ರಚನೆಯನ್ನು ಪ್ಯಾಟಜಿಯಂ ಎಂದು ಕರೆಯುತ್ತಾರೆ.

ಇದುವರೆವಿಗೆ ಜೀವಶಾಸ್ತ್ರದಲ್ಲಿ ಸುಮಾರು ಎರಡು ಸಾವಿರ ಪ್ರಭೇದಗಳಿರುವ ಬಾವಲಿಗಳನ್ನು ಗುರುತಿಸಲಾಗಿದೆ. ಉತ್ತರ ಮತ್ತು ದಕ್ಷಿಣ ಧೃವಗಳನ್ನು ಉಳಿದು ಬಹುತೇಕ ಎಲ್ಲಾ ವಿಧವಾದ ಪರಿಸರಗಳಲ್ಲಿ ಬಾವಲಿಗಳು ಕಂಡುಬರುತ್ತವೆ. ಬಾವಲಿಗಳು

ತಿನ್ನುವ ಆಹಾರದ ಆಧಾರದ ಮೇಲೆ ಇವುಗಳನ್ನು ಎರಡು ಮುಖ್ಯ ಗುಂಪುಗಳನ್ನಾಗಿ ವಿಂಗಡಿಸಬಹುದು. ಮೊದಲನೆಯವರ್ಗದ ಬಾವಲಿಗಳು ಆಹಾರಕ್ಕಾಗಿ ಹುಳಹುಪ್ಪಟೆಗಳನ್ನೆ ಅವಲಂಬಿಸಿದರೆ, ಎರಡನೇ ವರ್ಗದ ಬಾವಲಿಗಳು ವಿವಿಧ ಬಗೆಯ ಹಣ್ಣುಗಳನ್ನು ಅವಲಂಬಿಸಿವೆ. ಇನ್ನು ಕೆಲವು ಬಾವಲಿಗಳು ವಿವಿಧ ಪ್ರಾಣಿಗಳ ಮಾಂಸವನ್ನು ಅವಲಂಬಿಸಿವೆ. ಮತ್ತೆ ಕೆಲವು ಬಾವಲಿಗಳು ಆಹಾರಕ್ಕೋಸ್ಕರ ಮೀನುಗಳನ್ನು ಹಿಡಿಯುತ್ತವೆ ಎಂದರೆ ಹುಬ್ಬೇರಿಸಬೇಡಿ. ಇನ್ನು ಕೆಲವು ಬಾವಲಿಗಳು ರಾತ್ರಿಯ ವೇಳೆಯಲ್ಲಿ ಹರಳುವ ಹೂವಿನ ಪುಷ್ಪಪಾತ್ರೆಯಲ್ಲಿನ ಮಕರಂದವನ್ನು ಹೀರಿ ತಮ್ಮ ಹಸಿವೆಯನ್ನು ಹಿಂಗಿಸಿಕೊಳ್ಳುತ್ತವೆ. ವಾಂಪೈರ್ ಬಾವಲಿಗಳು ಆಹಾರ ಪಡೆದುಕೊಳ್ಳುವು ವಿಧಾನ ಇನ್ನೂ ವಿಶಿಷ್ಟವಾದದ್ದು. ಇವುಗಳು ವಿವಿದ ಪಕ್ಷಿಗಳ ರಕ್ತವನ್ನು ಅವಲಂಬಿಸಿವೆ.

ಬಾವಲಿಗಳ ಗಾತ್ರದಲ್ಲಿಯೂ ವೈವಿದ್ಯವನ್ನು ಕಾಣಬಹುದು. ಅತ್ಯಂತ ದೈತ್ಯ ಗಾತ್ರದ ಬಾವಲಿಯು ಯುರೋಪ್‌ನಲ್ಲಿ ಕಂಡುಬರುತ್ತದೆ. ಈ ಬಾವಲಿ ಹಾರಾಡುವಾಗ ಪ್ಯಾಟಜಿಯಮ್ (ರಕ್ಕೆಯಂತ ರಚನೆ) ೫ ಅಡಿಗಳಷ್ಟು ವಿಶಾಲವಾಗಿ ಚಾಚಿಕೊಂಡಿರುತ್ತದೆ. ಅತ್ಯಂತ ಚಿಕ್ಕ ಬಾವಲಿ ಹಮ್ಮಿಂಗ್ ಪಕ್ಷಿಯ ಗಾತ್ರದಷ್ಟಿರುತ್ತದೆ.

ಶಬ್ಧ ತರಂಗಗಳನ್ನು ಬಾವಲಿಗಳು ಗ್ರಹಿಸಬಲ್ಲವು. ಈ ಕಾರಣದಿಂದಾಗಿ ಬಾವಲಿಗಳು ಪಕ್ಷಿಗಳಂತೆ ಸಮರ್ಥವಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾರುತ್ತವೆ. ಹಾರುವಾಗ ಇವು ಬಾಯಿಯನ್ನು ತೆಗೆದುಕೊಂಡೆ ಇರುತ್ತವೆ. ದೇಹದ ಹೊರಗಡೆ ವಾತಾವರಣದಲ್ಲಿ ಉಂಟಾಗುವ ಶ್ರವಣಾತೀತ ತರಂಗಗಳು ವಸ್ತುವಿಗೆ ಪುನಹಃ ಬಾವಲಿಯ ಕಡೆಗೆ ಧಾವಿಸುತ್ತವೆ. ಈ ಶ್ರವಣಾತೀತ ತರಂಗಗಳನ್ನು ಗ್ರಹಿಸುವಿಕೆಯಿಂದ ಬಾವಲಿಗಳು ತನ್ನ ಸುತ್ತಮುತ್ತಲಿನ ವಸ್ತುಗಳ ಇರುವಿಕೆಯ ಬಗ್ಗೆ ಸ್ಪಷ್ಟ ಚಿತ್ರವನ್ನು ಪಡೆದುಕೊಳ್ಳುತ್ತವೆ. ಪ್ರಾಣಿ ಪ್ರಪಂಚದ ಉನ್ನತ ಸ್ಥಾನದಲ್ಲಿರುವ ಮಾನವನಿಗೆ ಈ ತರಂಗಗಳನ್ನು ಗ್ರಹಿಸುವಷ್ಟು ಸಾಮರ್ಥ್ಯವಿಲ್ಲ, ಮಾನವನಿಗಿಲ್ಲದ ಈ ವಿಶಿಷ್ಟ ಶಕ್ತಿಯ ಸಹಾಯದಿಂದ ಪಕ್ಷಿಗಳಂತೆ ಸಮರ್ಥವಾಗಿ ಕತ್ತಲೆಯ ವಾತಾವರಣದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸುತ್ತವೆ.

ಕೆಲವು ಬಾವಲಿಗಳ ತುಟಿಯ ಹೊರ ಆವರಣದಲ್ಲಿ ಚರ್ಮದ ಮಡಿಕೆಯ ತರಹದ ರಚನೆ ಇದೆ. ಸಾಮಾನ್ಯವಾಗಿ ಈ ರಚನೆ ಮೂಗಿನ ಹೊರಬಾಗದಲ್ಲಿರುತ್ತದೆ. ಈ ರಚನೆಯ ಕಾರ್ಯವಿಧಾನದ ಬಗ್ಗೆ ಇನ್ನೂ ಸ್ಪಷ್ಟ ಚಿತ್ರ ದೊರಕಿಲ್ಲ. ಆದರೇ ಇದು ಕೀಟಗಳು ಉಂಟುಮಾಡಿದ ಶ್ರವಣಾತೀತ ತರಂಗಗಳನ್ನು ಗ್ರಹಿಸುವ ಜ್ಞಾನೇಂದ್ರಿಯವಾಗಿರಬಹುದೆಂದು ಜೀವ ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ. ಬಹುತೇಕ ಬಾವುಲಿಗಳ ಕಿವಿಯ ರಂಧ್ರದ ಮುಂಭಾಗದಲ್ಲಿ ಬುಗುರಿಯಾಕಾರದ ರಚನೆ ಇದೆ. ಇದನ್ನು ಟರ್ಗಸ್ ಎಂದು ಕರೆಯುತ್ತಾರೆ. ಶ್ರವಣಾತೀತ ತರಂಗಗಳನ್ನು ಗ್ರಹಿಸುವ ಜ್ಞಾನೇಂದ್ರಿಯ ಇದಾಗಿರಬಹುದೆಂದು ನಂಬಲಾಗಿದೆ.

ನೀರವ ಕತ್ತಲೆಯ ವಾತಾವರಣವೆ ಬಾವಲಿ ಮತ್ತು ಗೂಬೆಗಳಿಗೆ ಪ್ರಶಾಂತವಾದ

ವಾತಾವರಣ. ಈ ಸಮಯದಲ್ಲಿ ಬೇರೆಲ್ಲ ಪ್ರಾಣಿಗಳು ನಿದ್ರಿಸುತ್ತ ವಿಶ್ರಾಂತಿಯ ಅವಸ್ಥೆಯಲ್ಲಿದ್ದರೆ, ಬಾವಲಿಗಳು ಆಗ ತಾನೆ ನಿದ್ರೆಯಿಂದೆದ್ದು ಕ್ರಿಯಾಶೀಲತೆಯಿಂದ ಕೂಡಿರುತ್ತವೆ. ಇವುಗಳು ಮರಗಳ ರೆಂಬೆ ಇಲ್ಲವೆ ಪೊಟರೆಗಳಲ್ಲಿ ತಲೆಕೆಳಗಾಗಿ ನಿದ್ದೆ ಹೋಗುತ್ತವೆ. ತಲೆಕೆಳಗಾಗಿ ರೆಂಬೆ ಕೊಂಬೆಗಳಲ್ಲೆಲ್ಲ ನೇತಾಡುತ್ತಿರುತ್ತವೆ. ಹಗಲಿನ ಸಮಯದಲ್ಲಿ ಬಾವಲಿಗಳು ಹೊರ ಪ್ರಪಂಚವನ್ನೆ ನೋಡಲಾಗದ ಕುರುಡು ಪ್ರಾಣಿಗಳೆಂಬ ತಪ್ಪು ಕಲ್ಪನೆ ಇದೆ. ಹೆಚ್ಚಿನ ಬಾವಲಿಗಳು ಹಗಲಿನ ಸಮಯದಲ್ಲಿ ಸುತ್ತಮುತ್ತಲಿನ ವಸ್ತುಗಳನ್ನು ನೋಡಬಲ್ಲವು.

ಗಂಡು ಬಾವಲಿಗಳು ವರ್ಷಕ್ಕೊಮ್ಮೆ ಹೆಣ್ಣು ಬಾವಲಿಯ ದೇಹ ಸಂಪರ್ಕವನ್ನು ಬೆಳೆಸುತ್ತವೆ. ಇದಲ್ಲದೆ ಬಾವಲಿಗಳು ಒಂದು ಬಾರಿಗೆ ಒಂದೇ ಒಂದು ಮರಿಗೆ ಜನ್ಮನೀಡುತ್ತವೆ. ಹೆಣ್ಣು ಬಾವಲಿಗಳು ದೇಹ ಸಂಪರ್ಕ ಬೆಳೆಸಿದ ಸುಮಾರು ೧೧೦ ದಿವಸಗಳಲ್ಲಿ ಮರಿಗೆ ಜನ್ಮ ನೀಡುತ್ತವೆ. ಕೆಲವು ಬಾವಲಿಗಳು ಎರಡು ಮರಿಗಳಿಗೆ ಜನ್ಮ ನೀಡುತ್ತವೆ. ಆಗ ತಾನೆ ಜನಿಸಿದ ಮರಿಗಳ ಚರ್ಮ ತೆಳುವಾಗಿದ್ದು, ಮರಿಗಳು ಕಣ್ಣುಮುಚ್ಚಿರುತ್ತವೆ. ಮರಿಗಳು ಸುಮಾರು ೫ ಇಲ್ಲವೆ ೯ ದಿವಸಗಳವರೆಗೆ ಕಣ್ಣು ಬಿಟ್ಟಿರುವುದಿಲ್ಲ. ೧೪-೧೫ ದಿವಸಗಳ ಅನಂತರ ತಾಯಿ ಬಾವಲಿ ತನ್ನ ಮರಿಯನ್ನು ಎದೆಗೆ ಅವಚಿಕೊಂಡು ಹಾರಾಡಲು ಪ್ರಾರಂಭಿಸುತ್ತದೆ. ವಿಶ್ರಾಂತಿ ಇಲ್ಲದೆ ನಿದ್ದೆ ಹೋಗಿರುವ ಸಂದರ್ಭಗಳಲ್ಲಿ ತಾಯಿ ಬಾವಲಿ ತನ್ನ ಮುಂಭಾಗದ ಕಾಲಿನಿಂದ ಮರದ ರೆಂಬೆಯನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತದೆ. ಈ ಸಮಯದಲ್ಲಿ ಎಳೆಯ ಮರಿಯು ತಾಯಿಯ ಎದೆಯನ್ನು ಅವಚಿಕೊಂಡಿರುತ್ತದೆ. ತಾಯಿ ಬಾವಲಿ ತನ್ನ ಕಾಲಿನಿಂದ ಎಳೆಯ ಮರಿಗೆ ಆಧಾರ ನೀಡುತ್ತದೆ. ಜನಿಸಿದ ಎರಡು ವಾರಗಳ ಹೊತ್ತಿಗೆ ಎಳೆಯ ಮರಿಗಳು ಚೆನ್ನಾಗಿ ಬೆಳೆಯುತ್ತವೆ. ಈ ಹೊತ್ತಿಗೆ ಎಳೆಯ ಮರಿಗಳನ್ನು ಎತ್ತಿಕೊಂಡು ತಾಯಿ ಬಾವಲಿಗೆ ಹಾರಾಡುವುದಕ್ಕೆ ಕಷ್ಟವೆನಿಸುತ್ತದೆ. ಕಾಲಾನಂತರ ಮರಿಗಳು ಮರದ ರೆಂಬೆ ಕೊಂಬೆಗಳಲ್ಲಿ ಅಂಟಿಕೊಂಡು ನೇತಾಡುವುದಕ್ಕೆ ಸಮರ್ಥವಾಗಿರುತ್ತವೆ. ಕೆಲವು ದಿವಸಗಳಲ್ಲಿ ಮರಿಗಳ ಬೆಳವಣಿಗೆ ಸಂಪೂರ್ಣವಾಗುತ್ತದೆ. ಪ್ರೌಢ ಬಾವಲಿಗಳು ಹಾರಾಡುವಾಗ ಅವುಗಳ ಚಲನವಲನಗಳನ್ನು ಅವಲೋಕಿಸಿ ಮರಿ ಬಾವಲಿಗಳು ಹಾರಾಡುವುದನ್ನು ಕಲಿಯುತ್ತವೆ.

ಬಹುತೇಕ ಬಾವಲಿಗಳು ನಮಗೆ ಉಪಕಾರಿಗಳು. ಬೇರೆ ಪ್ರಾಣಿಗಳಂತೆ ಬಾವಲಿಗಳು ನಮಗೆ ತೊಂದರೆ ಕೊಡುವ ಚಿಗಟ, ತಿಗಣೆಗಳು, ಜೀವಿಸುವುದಕ್ಕೆ ತಮ್ಮ ದೇಹದಲ್ಲಿ ಜಾಗಕೊಡುವುದಿಲ್ಲ. ಉಷ್ಣವಲಯದ ಬಾವಲಿಗಳು ಆಹಾರಕ್ಕಾಗಿ ಹಣ್ಣಿನ ತೋಟಗಳಿಗೆ ತೀವ್ರತರ ಹಾನಿಉಂಟುಮಾಡುತ್ತವೆ. ಆದರೆ, ಹೆಚ್ಚಿನ ಬಾವಲಿಗಳು ಕೀಟಹಾರಿಗಳಾಗಿದ್ದು ನಮಗೆ ಉಪಟಳ ಕೊಡುವ ಅನೇಕ ಬಗೆಯ ಹುಳಹುಪ್ಪಟಗಳನ್ನು ತಿನ್ನುತ್ತವೆ. ಬಹುತೇಕ ಬಾವಲಿಗಳು ದೀರ್ಘಾಯುಷಿಗಳು. ಹಣ್ಣುಗಳನ್ನು ತಿಂದು ಬದುಕುವ ಬಾವಲಿಗಳು ೧೦ ರಿಂದ ೧೨ ವರ್ಷಗಳವರೆಗೆ ಬದುಕಬಲ್ಲವು. ಈ ಬಾವಲಿಗಳು ೨೫ ವರ್ಷಗಳವರೆಗೂ ಬದುಕಿರುವ ನಿದರ್ಶನಗಳು ಸಹ ಉಂಟು. ಗಾತ್ರದಲ್ಲಿ


ಪುಟ್ಟದಾಗಿರುವ ಕಂದು ಬಣ್ಣದ ಸಾಮಾನ್ಯ ಬಾವಲಿಗಳು ೧೨ ವರ್ಷಗಳವರೆಗೆ ಬದುಕಿರುತ್ತವೆ ಎಂದು ತಿಳಿದುಬಂದಿದೆ.

ಅಮೇರಿಕ ದೇಶದಲ್ಲಿ ಕಂಡುಬರುವ ಬಾವಲಿಗಳಲ್ಲಿ ಬಹುತೇಕ ಹೆಚ್ಚಿನ ಬಾವಲಿಗಳು ಆಹಾರಕ್ಕಾಗಿ ಹುಳಹುಪ್ಪಟೆಗಳನ್ನು ಅವಲಂಬಿಸಿದರೆ ಮತ್ತೆ ಕೆಲವು ಹಣ್ಣುಗಳನ್ನು ಅವಲಂಬಿಸಿವೆ. ಇನ್ನು ಕೆಲವು ಬಾವಲಿಗಳು ಮಕರಂದ ಮತ್ತು ಪರಾಗ ರೇಣುವನ್ನು ತಿನ್ನುತ್ತವೆ. ಇವುಗಳು ಪುಷ್ಪಪತ್ರದಲ್ಲಿರುವ ಮಕರಂದವನ್ನು ಹೀರುವುದಕ್ಕೆ ಸಹಾಯಕವಾಗುವುದಕ್ಕೆ ಉದ್ದವಾದ ನಾಲಗೆಯನ್ನು ಪಡೆದಿವೆ. ಜಮಾಲಿಯನ್, ಅಮೇರಿಕ ದೇಶಗಳಲ್ಲಿ ಕಂಡುಬರುವ ಬಾವಲಿಗಳಲ್ಲಿ ಅತ್ಯಂತ ದೈತ್ಯ ಬಾವಲಿ ಇದು. ಕಪ್ಪುಬಣ್ಣದ್ದಾಗಿದ್ದು ಮೆಕ್ಸಿಕೊ ಮತ್ತು ಅಮೇಜಾನ್ ನದಿಯ ತೀರ ಪ್ರದೇಶದಲ್ಲಿ ಕಂಡುಬರುತ್ತದೆ. ವ್ಯಾಂಪಯರ ಬಾವಲಿಗಳು ಮೆಕ್ಸಿಕೋ ಮತ್ತು ಬ್ರೆಜಿಲ್ ದೇಶಗಳಲ್ಲಿ ಕಂಡುಬರುವ ಬಾವಲಿ. ಇವುಗಳು ಆಹಾರಕ್ಕಾಗಿ ಬಿಸಿ ರಕ್ತ ಪ್ರಾಣಿಗಳನ್ನು ಅವಲಂಬಿಸಿವೆ. ಅದರಲ್ಲೂ ಮಾನವನ ರಕ್ತ ಎಂದರೆ ಇವುಗಳಿಗೆ ಎಲ್ಲಿಲ್ಲದ ಆನಂದ. ಪ್ರಾಣಿಗಳಿಂದ ರಕ್ತವನ್ನು ಹೀರಲು ಸಹಾಯಕವಾಗುವಂತೆ ಇವುಗಳ ಹಲ್ಲುಗಳು ಮಾರ್ಪಾಡಾಗಿವೆ. ಇಷ್ಟೆ ಅಲ್ಲದೆ ರಕ್ತವನ್ನು ಜೀರ್ಣಿಸಲು ಸಾಧ್ಯವಾಗುವುದಕ್ಕೆ ಇವುಗಳ ಜಠರವು ಸಹ ಮಾರ್ಪಾಡಾಗಿದೆ. ಇವುಗಳು ರಕ್ತವನ್ನಲ್ಲದೆ ಬೇರಾವ ಬಗೆಯ ಆಹಾರವನ್ನು ತಿನ್ನುವುದು ಇದುವರೆವಿಗೂ ತಿಳಿದುಬಂದಿಲ್ಲ.

ವ್ಯಾಂಪಯರ್ ಬಾವಲಿಗಳಿಗೆ ಕೆಟ್ಟ ಹೆಸರಿದ್ದರು, ಇವುಗಳಿಗೆ ಭಯ ಉಂಟು ಮಾಡುವ ದೇಹದ ಭಂಗಿಯಂತು ಇಲ್ಲವೆ ಇಲ್ಲ. ಇದರ ದೇಹ ಭಾರಿ, ಮೂರು ಇಂಚಿನಷ್ಟಿದ್ದು ದೇಹದ ಹೊರಭಾಗದಲ್ಲಿ ಕಂದು ಬಣ್ಣದ ಸಣ್ಣ ಕೂದಲಿನಾಕಾರದ ಹೊದಿಕೆ ಇದೆ. ಇನ್ನಿತರ ಬಾವಲಿಗಳಿಗಿರುವಂತೆ ಮೂಗಿನ ಮುಂದೆ ಇರುವ ವಿಶಿಷ್ಟ ಜ್ಞಾನೇಂದ್ರಿಯ ಇಲ್ಲ. ಇವುಗಳ ಕಿವಿ ಚಿಕ್ಕದಾಗಿದ್ದು, ನೇರವಾಗಿರುತ್ತವೆ. ವ್ಯಾಂಪಯರ್ ಬಾವಲಿಗಳು ಗುಂಪಿನಲ್ಲಿ ವಾಸಿಸುತ್ತವೆ. ಒಂದೊಂದು ಗುಂಪಿನಲ್ಲಿ ಹತ್ತು ಅಥವಾ ಹತ್ತಕ್ಕಿಂತ ಹೆಚ್ಚು ಬಾವಲಿಗಳಿರುತ್ತವೆ. ಇವುಗಳು ಗುಹೆ, ಕಲ್ಲುಪೊಟರೆ, ಗೋಡೆಗಳ ಬಿರುಕಿನಲ್ಲಿ ಕಾಣಿಸಿಕೊಳ್ಳುತ್ತವೆ. ಪ್ಲ್ಯಾಟಜಿಯಂ ಮಡಿಚಿಕೊಂಡ ಸಂದರ್ಭದಲ್ಲಿ ನಾಲ್ಕು ಕಾಲಿನ ಪ್ರಾಣಿಗಳು ನಡೆಯುವಂತೆ ಚಲಿಸುತ್ತವೆ. ಇಲ್ಲವೆ ಕಪ್ಪೆಯಂತೆ ಕುಪ್ಪಳಿಸುವ ನಡವಳಿಕೆಯನ್ನು ಕಾಣಬಹುದು.

ವ್ಯಾಂಪಯರ್ ಬಾವಲಿ ಕಚ್ಚಿದರೆ, ಅಷ್ಟೇನು ನೋವಿನಿಂದ ಕೂಡಿರುವುದಿಲ್ಲ, ಅಂದರೆ ಇದು ನಿಜವಾಗಿಯು ಕಚ್ಚುವುದಿಲ್ಲ. ಇದರ ಹಿಂಭಾಗದ ಹಲ್ಲುಗಳು ಚೆನ್ನಾಗಿ ಬೆಳೆದಿರುವುದಿಲ್ಲ ಆದರೆ ಮುಂಭಾಗದ ಹಲ್ಲುಗಳು ಚೂಪಾಗಿದ್ದು, ಹರಿತವಾಗಿರುತ್ತವೆ. ನುರಿತ ಶಸ್ತ್ರಚಿಕಿತ್ಸಕ ರೋಗಿಯ ದೇಹವನ್ನು ಕೊಯ್ಯುವಂತೆ ವ್ಯಾಂಪಯರ್ ಬಾವಲಿ ರಕ್ತವನ್ನು ಪಡೆಯುವ ಪ್ರಾಣಿಯನ್ನು ನಿದ್ದೆಯಿಂದ ಎಚ್ಚರಗೊಳಿಸದಂತೆ ಚರ್ಮದ ಮೇಲ್ಭಾಗದಲ್ಲಿ ಗಾಯವನ್ನು ಮಾಡಿ ಸುರಿಯುತ್ತಿರುವ ರಕ್ತವನ್ನು ಚಪ್ಪರಿಸುತ್ತವೆ. ಇವು ರಕ್ತವನ್ನು ಹೀರುವುದಿಲ್ಲ ಇದರ ಬದಲು ಬೆಕ್ಕು ಹಾಲು ಕುಡಿಯುವ

ರೀತಿಯಲ್ಲಿ ರಕ್ತವನ್ನು ಚಪ್ಪರಿಸುತ್ತವೆ. ರಕ್ತವನ್ನು ಕಳೆದುಕೊಳ್ಳುತ್ತಿರುವ ಪ್ರಾಣಿ ಗಂತುಗೊತ್ತಾಗುವುದಿಲ್ಲ ಮತ್ತು ನೋವು ಸಹ ಕಾಣಿಸಿಕೊಳ್ಳುವುದಿಲ್ಲ. ಕ್ರಮೇಣ ಯಾವುದೇ ಬಗೆಯ ಔಷಧೀಯ ನೆರವಿಲ್ಲದೆ ಗಾಯ ಮಾಗುತ್ತದೆ. ಕೆಲವು ರೋಗಗಳು ಬರುವುದಕ್ಕೆ ವ್ಯಾಂಪಯರ್ ಬಾವಲಿಗಳು ಕಾರಣಕರ್ತವಾಗುತ್ತವೆ. ಇವುಗಳಿಂದ ರೇಬೀಸ್ ಕಾಯಿಲೆ ಬರುತ್ತದೆ ಎಂದು ತಿಳಿದುಬಂದಿದೆ. ವ್ಯಾಂಪಯರ್ ಬಾವಲಿಗಳಿಂದ ಬೆಕ್ಕು ಮತ್ತು ಮಾನವನಿಗೆ ರೇಬೀಸ್ ಕಾಯಿಲೆಗಳು ಬರುತ್ತವೆ. ಪುಣ್ಯಕ್ಕೆ ಇವುಗಳ ಸಂಖ್ಯೆ ಹೆಚ್ಚಾಗುತ್ತಿಲ್ಲ. ಇದುವರೆಗೆ ಎರಡು ಇಲ್ಲವೆ ಮೂರು ಪ್ರಭೇದದ ವ್ಯಾಂಪಯರ್ ಬಾವಲಿಗಳನ್ನು ಪತ್ತೆಹಚ್ಚುವಲ್ಲಿ ವಿಜ್ಞಾನಿಗಳು ಸಫಲರಾಗಿದ್ದಾರೆ.



ಕನ್ನಡ ನಾಡಿಗೆ ಕನ್ನಡವೇ ಗತಿ,
ಅನ್ಯಥಾ ಶರಣಂ ನಾಸ್ತಿ.
ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ, ಕನ್ನಡ.

—ಬಿ.ಎಂ.ಶ್ರೀ

ಆಕಾಶ ಕೊಳ್ಳಲು ಅಥವಾ ಮಾರಲು ಸಾಧ್ಯವೇ?

ಎಚ್. ಆರ್. ಚಂದ್ರವದನರಾವ್

ಅಮೆರಿಕದ ರಾಷ್ಟ್ರಾಧ್ಯಕ್ಷ ಫ್ರಾಂಕ್ಲಿನ್ ಪಿಯರ್ಸ್‌ನು ಅಮೆರಿಕ ಸರ್ಕಾರ ಆದಿವಾಸಿಗಳ ಪ್ರದೇಶವೊಂದನ್ನು ಹಣ ಕೊಟ್ಟು ಕೊಳ್ಳುವ ಬಗ್ಗೆ ೧೮೮೫ರಲ್ಲಿ ಬರೆದ ಪತ್ರಕ್ಕೆ ವಾಷಿಂಗ್‌ಟನ್ ರಾಜ್ಯದ ಸಿಯಾಟಲ್‌ನ ಸುವಾಮಿಶ್ ಜನಾಂಗದ ಮುಖಂಡ ಬರೆದ ಮಾರುತ್ತರ ಅನುಕಂಪ ತರಿಸುವಂತಹುದು. ಪ್ರಕೃತಿಯಲ್ಲಿರುವ ಸಮತೋಲನ, ಜೀವಿಗಳಲ್ಲಿ ಕಂಡುಬರುವ ಸ್ವಾಭಾವಿಕ ಕಟ್ಟುಪಾಡು, ಸಕಲ ಸಜೀವಿಗಳಲ್ಲಿರುವ ಭ್ರಾತೃತ್ವ—ಇವುಗಳ ಬಗ್ಗೆ ರೆಡ್ ಇಂಡಿಯನ್ ನಾಯಕನಿಗಿದ್ದ ಕಾಳಜಿಗೆ ಅವನ ಓಲೆ ಕನ್ನಡಿ ಹಿಡಿದಂತಿದೆ. ಅಲ್ಪ ಕಾಲದ ಲಾಭಕ್ಕೆ ಮಾನವ ಅನುಸರಿಸುತ್ತಿರುವ ಮಾರ್ಗ ಅವನ ಅಸ್ತಿತ್ವಕ್ಕೇ ಕುತ್ತಾಗಬಹುದು ಎಂದು ಹೇಳುವ ಅವನ ಎಚ್ಚರಿಕೆಯ ಮಾತುಗಳು ನಿತ್ಯಸತ್ಯ ಎಂದು ಕೂಗಿ ಹೇಳಬಹುದು.

ಸುವಾಮಿಶ್ ಜನಾಂಗದ ಮುಖಂಡನು ಅಧ್ಯಕ್ಷರಿಗೆ ಬರೆದ ಪತ್ರದ ಕನ್ನಡ ಅನುವಾದ ಇದು:

"ವಾಷಿಂಗ್‌ಟನ್ ನಗರದಲ್ಲಿರುವ ಉಚ್ಚ ಪ್ರಧಾನ (ಗ್ರೇಟ್ ಚೀಫ್)ರಾದ ನೀವು, ನಾವಿರುವ ನೆಲೆಯನ್ನು ಕೊಳ್ಳುವ ಇಚ್ಛೆ ತೋರಿಸುತ್ತಾ, ನಮ್ಮ ಗೆಳೆತನ ಮತ್ತು ಸೌಹಾರ್ದ ಸಂಬಂಧ ಬಯಸುವ ಮಾತುಗಳನ್ನಾಡಿದ್ದೀರಿ. ನಮ್ಮ ಸ್ನೇಹದಿಂದ ನಿಮಗೇನೂ ಆಗಬೇಕಾಗಿಲ್ಲ; ಹಾಗಾದರೂ ಹಾಗೆ ಬರೆದಿರುವುದು ನಿಮ್ಮ ಸೌಜನ್ಯ."

"ನಿಮ್ಮ ಪ್ರಸ್ತಾಪದ ಬಗ್ಗೆ ಏನು ಮಾಡಬೇಕೆಂದು ನಾವು ಯೋಚಿಸುತ್ತಿದ್ದೇವೆ. ನೀವು ಹೇಳಿದ ಹಾಗೆ ಮಾಡದಿದ್ದರೆ ಶ್ವೇತ ವರ್ಣೀಯರು ನಮ್ಮ ಮೇಲೆ ಬಂದೂಕುಧಾರಿಗಳಾಗಿ ಬಂದು ನಮ್ಮ ಜಮೀನುಗಳನ್ನು ಕಿತ್ತುಕೊಳ್ಳುತ್ತಾರೆ ಎಂದೂ ನಮಗೆ ಗೊತ್ತಿದೆ. ಒಂದು ಬುಡಕಟ್ಟಿನ ನಾಯಕನಾಗಿ ನಾನು ನಿಜ ಹೇಳುತ್ತಿದ್ದೇನೆ; ನನ್ನ ಮಾತುಗಳು ಮುಳುಗದೇ ಇರುವ ನಕ್ಷತ್ರಗಳಂತೆ ಸತ್ಯ. ನೀವು ಆಕಾಶವನ್ನು ಅಥವಾ ಭೂಮಿಯ ತೀಕ್ಷ್ಣತೆಯನ್ನು ಕೊಳ್ಳಲು ಅಥವಾ ಮಾರಲು ಸಾಧ್ಯವೇ? ನೀವು ಹೊಂದಿರುವ ಅಭಿಪ್ರಾಯ ನಮಗೆ ಪೂರ್ಣ ಅಪರಿಚಿತ. ವಾಯುವಿನ ತಾಜಾತನಕ್ಕಾಗಲೀ, ನೀರಿನ ಪ್ರಖರತೆಗಾಗಲೀ ನಾವು ಮಾಲೀಕರಲ್ಲ. ಹೀಗಿರುವಾಗ, ಅವನ್ನು ನಮ್ಮಿಂದ ಹೇಗೆ ಖರೀದಿಸಬಲ್ಲಿರಿ? ಭೂಮಿಯ ಪ್ರತಿಯೊಂದು ಭಾಗವೂ ನಮಗೆ ಪವಿತ್ರ. ಪೈನ್ ಮರದ ಮೊನಚಾದ ಎಲೆ, ಸಮುದ್ರದ ಮರಳಿನ ತೀರ, ಕತ್ತಲಾವರಿಸುವ ಅರಣ್ಯ, ಗುಯ್‌ಗುಟ್ಟುವ ಕೀಟಗಳು—ಇವೆಲ್ಲಾ ನಮ್ಮ ಜನಕ್ಕೆ ಪಾವನವಾದವು."

ಶ್ವೇತವರ್ಣೀಯರಿಗೆ ನಮ್ಮ ರೀತಿ ನೀತಿಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ನಮಗೆ ಗೊತ್ತಿದೆ. ಅವರು ತಮ್ಮ ಜಮೀನಿನ ಪಕ್ಕದವರ ಜಮೀನನ್ನೂ ತಮ್ಮದೇ ಎಂದು ಭಾವಿಸಿ, ರಾತ್ರಿ ಹೊತ್ತು ಅದಕ್ಕೆ ನುಗ್ಗಿ ತಮಗೆ ಬೇಕಾದುದನ್ನು ಅಲ್ಲಿಂದ ಕದ್ದು ಒಯ್ಯುತ್ತಾರೆ. ಭೂಮಿ ಅವರಿಗೆ ಭ್ರಾತೃವಲ್ಲ, ಶತ್ರು. ಅದನ್ನು ಗೆಲ್ಲುತ್ತಾ, ಗೆದ್ದುದನ್ನು ಆಕ್ರಮಿಸುತ್ತಾರೆ. ಅವರು ಪೂರ್ವಜರ ಗೋರಿಗಳನ್ನು ಬಿಟ್ಟು, ಹೊಸ ಹೊಸ ನೆಲೆಗಳಿಗೆ ಹೋಗುತ್ತಾ ಇರುತ್ತಾರೆ. ಅವರು ತಮ್ಮ ಮಕ್ಕಳಿಂದ ಭೂಮಿಯನ್ನು ಅಪಹರಿಸುತ್ತಾರೆ. ಪೂರ್ವಜರ ಗೋರಿಗಳನ್ನು, 'ಮಕ್ಕಳ ಹಕ್ಕು ಅನ್ನುವುದನ್ನು' ಅವರು ಮರೆಯುತ್ತಾರೆ. ಜಮೀನುಗಳ ಒಡೆಯನಾಗಬೇಕೆಂಬ ಅವರ 'ಹಸಿವು', ಭೂಮಿಯನ್ನು ತಿಂದುಹಾಕುವಂತೆ ಮಾಡಿ, ಕೊನೆಗೆ ಉಳಿಯುವುದು ಮರುಭೂಮಿ ಮಾತ್ರ. ನಿಮ್ಮ ನಗರಗಳ ದೃಶ್ಯ ರೆಡ್ ಇಂಡಿಯನ್ನರ ಕಂಗಳಲ್ಲಿ ನೋವು ತರಿಸಿದೆ. ರೆಡ್ ಇಂಡಿಯನ್ ಒಬ್ಬ ಅನಾಗರೀಕ, ಅದಕ್ಕಿರಬಹುದು."

"ಶ್ವೇತವರ್ಣೀಯರು ವಾಸಿಸುವ ನಗರಗಳಲ್ಲಿ ಶಾಂತಿ ಇಲ್ಲ. ನಗರಗಳಲ್ಲಿ ಗಾಳಿಗೆ ಗಿಡ ಮರಗಳ ಚಿಗುರು ಅಲುಗಾಡುವ ಶಬ್ದ, ಹಾರಾಡುವ ಕೀಟಗಳ ರೆಕ್ಕೆಯ ಬಡಿತ, ಪಕ್ಷಿಗಳ ಗಾನ ಎಲ್ಲೂ ಕೇಳಬರುವುದಿಲ್ಲ. ನಾನೊಬ್ಬ ಅನಾಗರೀಕ, ನನಗೆ ಪಟ್ಟಣದ ಗಡಿಬಿಡಿ, ಗಲಾಟೆ ಅರ್ಥವಾಗುವುದಿಲ್ಲ. ನನಗೆ ಅದು ಕರ್ಣಕಠೋರ. ಕೊಳದ ಪಕ್ಕದಲ್ಲಿ ರಾತ್ರಿ ಹೊತ್ತು ಕಪ್ಪೆಗಳ ವಟಗುಟ್ಟುವ ಶಬ್ದ, ವಿಪ್ ಪೂರ್ ವಿಲ್ ಹಕ್ಕಿಯ ಗಾನ ಕೇಳದ ಮಾನವ ಜೀವನ ಜೀವನವೇ? ಕೊಳದ ಮೇಲೆ ತೇಲಿ ಬರುವ ತಂಗಾಳಿಯನ್ನು, ಮಳೆಯಿಂದ ಚೊಕ್ಕಟವಾಗಿ, ಪೈನ್ ಮರಗಳ ಮೇಲೆ ಬೀಸಿ ಬಂದ ಸುಮಧುರವಾದ ಗಾಳಿಯನ್ನು ರೆಡ್ ಇಂಡಿಯನ್ ಇಷ್ಟಪಡುತ್ತಾನೆ. ಪ್ರಾಣಿ, ಪಕ್ಷಿ, ಗಿಡ, ಮರ, ಮನುಷ್ಯ—ಹೀಗೆ ಎಲ್ಲರಿಗೂ ಬೇಕಾದ ವಾಯು ಅವನಿಗೆ ಮುಖ್ಯ. ಶ್ವೇತವರ್ಣೀಯರಿಗೆ ಉಸಿರಾಡುವ ವಾಯುವಿನ ಬಗ್ಗೆ ಕಾಳಜಿಯಿಲ್ಲ. ಹಲವು ದಿನಗಳಿಂದ ಸಾಯುತ್ತಾ ಇರುವ ಮನುಷ್ಯನಿಗೆ ಆಗುವಂತೆ, ಅವರಿಗೆ ಅಘ್ರಾಣ ಶಕ್ತಿ ನಶಿಸಿಹೋಗಿದೆ.

"ನಾನು ನಿಮ್ಮ ಪ್ರಸ್ತಾಪಕ್ಕೆ ಒಪ್ಪುವುದಾದರೆ ನನ್ನದು ಒಂದೇ ಷರತ್ತು, ಶ್ವೇತವರ್ಣೀಯರು ಈ ನೆಲದ ಎಲ್ಲಾ ಪ್ರಾಣಿಗಳನ್ನು ತಮ್ಮ ಸಹೋದರನಂತೆ ಕಾಣಬೇಕು. ನಾನೊಬ್ಬ ಅನಾಗರೀಕನಾದುದರಿಂದ ಇಷ್ಟನ್ನು ಬಿಟ್ಟು ಇನ್ನೇನನ್ನು ಹೇಳಲಾರೆ ಚಲಿಸುವ ಉಗಿಬಂಡಿಯಲ್ಲಿ ಕುಳಿತು ಶ್ವೇತವರ್ಣೀಯರು ಕೊಂದ ಸಾವಿರಾರು ಕಾಡೆಮ್ಮೆಗಳು ಕೊಳೆಯುತ್ತಾ ಬಿದ್ದಿವೆ. 'ಹೊಗೆ ಉಗುಳುವ ಕಬ್ಬಿಣದ ಕುದುರೆ' ಕಾಡೆಮ್ಮೆಗಿಂತ ನಿಮಗೆ ಏಕೆ ಮುಖ್ಯವೆಂದು ನನಗೆ ಗೊತ್ತಾಗುವುದಿಲ್ಲ. ನಾವು ಅಗತ್ಯವಿದ್ದಾಗ ಮಾತ್ರ ಕಾಡೆಮ್ಮೆಗಳನ್ನು ಕೊಲ್ಲುತ್ತೇವೆ. ಮೃಗಗಳಿಲ್ಲದೇ ಇರುವ ಜಗತ್ತು ಎಂತಹ ಜಗತ್ತು? ಪ್ರಾಣಿಗಳೆಲ್ಲಾ ನಶಿಸಿಹೋದಾಗ ಮಾನವ ಒಬ್ಬಂಟಿಯಾಗುತ್ತಾನೆ; ಏಕಾಂಗಿಯಾಗಿ ಸಾಯುತ್ತಾನೆ. ಪ್ರಾಣಿಗಳಿಗಾದ ಸ್ಥಿತಿ ಅವನಿಗೂ ಬರುತ್ತದೆ. ಮಾನವನ ಜೀವನ, ಪ್ರಾಣಿ ಮತ್ತು ಸಸ್ಯ ಜಗತ್ತಿಗೆ ಹೆಣೆದುಕೊಂಡಿದೆ. ಭೂಮಿಗೆ ಆಗಿದ್ದು ಭೂಮಿಯ ಮಕ್ಕಳಿಗೂ ಸಲ್ಲುತ್ತದೆ."

ಯಮಾಪಜಯಂ

ಎನ್. ಸುಬ್ರಹ್ಮಣ್ಯಂ

ಇದೊಂದು ರೇಡಿಯೊ ನಾಟಕ. ಇದರ ಕೇಂದ್ರ ಪರಿಕಲ್ಪನೆ ಸಂಖ್ಯೆಗಳ ವಿಭಾಜ್ಯತೆ-ಅವಿಭಾಜ್ಯತೆ ಗುಣಗಳನ್ನು ಅವಲಂಬಿಸಿದೆ. ಸಂಖ್ಯೆ ೧ಕ್ಕೆ ವಿನಾಯಿತಿ. ಏಕೆಂದರೆ ಪ್ರತಿಯೊಂದು ಪೂರ್ಣಾಂಕವನ್ನೂ ಇದು ನಿಶ್ಶೇಷವಾಗಿ ಭಾಗಿಸುತ್ತದೆ. ೨, ೩, ೪, ೫, ೬, ೭, ೮, ೯, ... ಈ ಸಂಖ್ಯಾಶ್ರೇಣಿಯಲ್ಲಿ ೪, ೬, ೮, ೯, ೧೦, ೧೨, ೧೪, ೧೫, ೧೬, ೧೮, ೨೦, ೨೧ ಮುಂತಾದವು ವಿಭಾಜ್ಯಗಳು—ಅಂದರೆ ಇವನ್ನು ಭಾಗಿಸಬಲ್ಲ ಇತರ ಪೂರ್ಣಾಂಕಗಳಿವೆ. ೨, ೩, ೫, ೭, ೧೧, ೧೩, ೧೭, ೧೯, ೨೩ ಮುಂತಾದವು ಅವಿಭಾಜ್ಯಗಳು—ಅಂದರೆ ಇವನ್ನು ಭಾಗಿಸಬಲ್ಲ ಇತರ ಪೂರ್ಣಾಂಕಗಳಿಲ್ಲ. ಯಾವ ಪೂರ್ಣಾಂಕವನ್ನು ೧ ಮತ್ತು ಸ್ವತಃ ಆ ಪೂರ್ಣಾಂಕದ ಹೊರತಾಗಿ ನಿಶ್ಶೇಷವಾಗಿ ಭಾಗಿಸಬಲ್ಲ ಪೂರ್ಣಾಂಕಗಳಿಲ್ಲವೋ ಆ ಪೂರ್ಣಾಂಕಕ್ಕೆ ಅವಿಭಾಜ್ಯ ಸಂಖ್ಯೆ ಎಂದು ಹೆಸರು. ಉದಾಹರಣೆಗೆ ೧೦೧, ೧೦೩ ಅವಿಭಾಜ್ಯಗಳು. ಸಂಖ್ಯಾಶ್ರೇಣಿಯಲ್ಲಿ ಅವಿಭಾಜ್ಯಗಳು ಎಲ್ಲಿ ಬರುತ್ತವೆ ಅಥವಾ ದತ್ತ ಸಂಖ್ಯೆ ಅವಿಭಾಜ್ಯವೇ ಅಲ್ಲವೇ ಮುಂತಾದವು ಸುಲಭ ನಿರ್ಧರಣೀಯ ಪ್ರಶ್ನೆಗಳಲ್ಲ. ತೋರ್ಕೆಗೆ ತೀರ ಮುಗ್ಧವೆನ್ನಿಸುವ ಇಂಥ ಒಂದು ಪ್ರಶ್ನೆಯನ್ನು ಎತ್ತಿ ಹೇಗೆ ಒಬ್ಬ ಗಣಿತೋಪಾಧ್ಯಾಯ ಸಾಕ್ಷಾತ್ ಯಮನನ್ನೇ ಸೋಲಿಸಿ ಆಯುಷ್ಯ ಪಡೆದ ಎಂಬ ಸ್ವಾರಸ್ಯಕರ ನಿರೂಪಣೆಯನ್ನು ಈಗ ಓದಿ.

(ಯಮಧರ್ಮನ ಆಸ್ಥಾನ. ಯಮಧರ್ಮ ಸಿಂಹಾಸನದ ಮೇಲೆ ಕೂತಿರುವನು. ಎದುರಿಗೆ ಸ್ವಲ್ಪ ದೂರದಲ್ಲಿ ಗಣಿತದ ಮೇಸ್ಟ್ರು. ಒಂದು ಕೈಯಲ್ಲಿ ಸೀಮೆಸುಣ್ಣ, ಇನ್ನೊಂದು ಕೈಯಲ್ಲಿ ಬೋರ್ಡ್ ಒರೆಸುವ ಬಟ್ಟೆ. ಅವನ ಅಕ್ಕಪಕ್ಕದಲ್ಲಿ ಚಿತ್ರಗುಪ್ತರು).

ಯಮ: ಚಿತ್ರಗುಪ್ತರೇ, ಕಾರ್ಯಕ್ರಮವನ್ನು ಪ್ರಾರಂಭಿಸೋಣ.

ಚಿತ್ರಗುಪ್ತರು: ಪ್ರಭೋ, ಇವರೇ ಗಣಿತದ ಉಪಾಧ್ಯಾಯರು. ಇವರ ಆಯುಸ್ಸು ತೀರಿದೆ. ಆದ್ದರಿಂದ ಇಲ್ಲಿಗೆ ಕರೆತಂದಿದ್ದೇನೆ.

ಯಮ: ಗುರುಶ್ರೇಷ್ಠ, ನಿನಗೆ ಸ್ವಾಗತವು. ಈ ಪೀಠವನ್ನು ಅಲಂಕರಿಸು.

ಗಣಿತದ ಮೇಸ್ಟ್ರು: ಹೇ, ಯಮದೇವ, ನಿನಗೆ ನನ್ನ ಅನಂತ ವಂದನೆಗಳು.

ನಮ್ಮಂಥ ಅಲ್ಪಮಾನವರಿಗೆ ನಿನ್ನ ಲೋಕದಲ್ಲಿ ಇಷ್ಟೊಂದು ಗೌರವವೇ?

ಯಮ: ಇದರಲ್ಲಿ ಆಶ್ಚರ್ಯವೇನಿದೆ? ವಿದ್ಯಾವಂತರು ಎಲ್ಲ ಕಡೆಯಲ್ಲಿಯೂ ಗೌರವಿಸಲ್ಪಡುತ್ತಾರೆ.

ಗ.ಮೋ.: ಬಹಳ ಸಂತೋಷ ಯಮರಾಜ. ನನ್ನ ಆಯುಸ್ಸು ತೀರಿದೆಯೇ?

ಯಮ: ಹೌದು. ಆಯುಸ್ಸು ತೀರದ ಒಂದು ಜೀವಿಯನ್ನೂ ನಾವು ಈ ಲೋಕಕ್ಕೆ ಬರಮಾಡುವುದಿಲ್ಲ. ನೀನು ಭೂಲೋಕದಲ್ಲಿ ಮಾಡುವ ಪಾಪ–ಪುಣ್ಯಗಳನ್ನು ವಿಮರ್ಶಿಸಿ ನೀನು ಸ್ವರ್ಗಕ್ಕೆ ಹೋಗಬೇಕೋ ಅಥವಾ ನರಕಕ್ಕೆ ಹೋಗಬೇಕೋ ಎಂಬುದನ್ನು ನಿರ್ಧರಿಸುತ್ತೇನೆ.

ಗ.ಮೋ.: ಅದು ಸರಿ, ಯಮರಾಜ. ನನ್ನದೊಂದು ಕೋರಿಕೆ.

ಯಮ: ಏನದು?

ಗ.ಮೋ.: ನಾನು ಭೂಲೋಕದಲ್ಲಿ ನನ್ನ ಸಂಸಾರಕ್ಕೆ ಸಂಬಂಧಪಟ್ಟ ಕೆಲವು ಕಾರ್ಯಗಳನ್ನು ಮುಗಿಸಿಲ್ಲ. ನನ್ನ ಹೆಂಡತಿ ಏನೂ ಅರಿಯದವಳು, ಮುಗ್ಧ. ಸಂಸಾರದಲ್ಲಿ ಬಹಳ ನೊಂದಿದ್ದಾಳೆ. ನನ್ನ ಮಗಳಿಗೆ ಇನ್ನೂ ಮದುವೆ ಮಾಡಿಲ್ಲ. ನನ್ನ ಎರಡು ಗಂಡುಮಕ್ಕಳೂ ಶುದ್ಧ ಅವಿವೇಕಿಗಳು. ನಾನಿಲ್ಲದಿದ್ದರೆ, ಅವರೆಷ್ಟು ಕಷ್ಟಪಡುತ್ತಾರೋ. ಆದ್ದರಿಂದ ಸ್ವಲ್ಪ ಅವಕಾಶ ಮಾಡಿಕೊಟ್ಟರೆ, ಆದಷ್ಟು ಬೇಗ ಇದಕ್ಕೆಲ್ಲ ಒಂದು ವ್ಯವಸ್ಥೆ ಮಾಡಿ ಕೆಲವೇ ವರ್ಷಗಳಲ್ಲಿ ಹಿಂತಿರುಗುತ್ತೇನೆ. ಅಷ್ಟು ಸಹಾಯ ಮಾಡಿದರೆ ಸಾಕು.

ಯಮ: ಇದು ಅಸಾಧ್ಯ. ನನ್ನ ಲೋಕಕ್ಕೆ ಬಂದ ಮೇಲೆ ನೀನು ಹಿಂತಿರುಗುವುದೆಂತು?

ಗ.ಮೋ.: ನಿನಗೆ ಜ್ಞಾಪಕವಿರಬೇಕು ಯಮಧರ್ಮ, ಮೃಕಂಡು ಮಹರ್ಷಿಯ ಮಗ ಮಾರ್ಕಂಡೇಯನು ನಿನ್ನ ಲೋಕದಿಂದ ಆಯುಸ್ಸು ಪಡೆದು ಹಿಂತಿರುಗಲಿಲ್ಲವೇ?

ಯಮ: ಓ, ಆ ಪ್ರಸಂಗವೇ ಬೇರೆ. ಅವನು ಪರಮೇಶ್ವರನ ಭಕ್ತ. ಅವನ ಆಯುಸ್ಸು ತೀರಿದ ಸಮಯದಲ್ಲಿ ಶಿವಲಿಂಗವನ್ನಪ್ಪಿಕೊಂಡು ಅನನ್ಯ ಭಕ್ತಿಯಿಂದ ಶಿವನಾಮಸ್ಮರಣೆಯನ್ನು ಮಾಡಿ, ಕಣ್ಣೀರು ಸುರಿಸಿದ. ಅದೇ ಸಮಯದಲ್ಲಿ, ಅವನ ಕಂಠಕ್ಕೆ ನಾನು ಪಾಶವನ್ನು ಸುತ್ತಿದೆ. ಇದರಿಂದಾಗಿ, ಶಿವಲಿಂಗಕ್ಕೂ ನನ್ನ ಪಾಶವನ್ನು ಹಾಕಿದಹಾಗಾಯ್ತು. ಅಗ ಶಿವ ಕೋಪಗೊಂಡ. ಅವನ ಕೋಪಕ್ಕೆ ಪಾತ್ರನಾದೆ. ಆ ಮಹಾದೇವನ ಕೃಪೆಯಿಂದಲೇ ಆ ಕುಮಾರನ ಆಯುಸ್ಸು ಹೆಚ್ಚಿತು.

ಗ.ಮೋ.: ಹಾಗಾದರೆ, ಆ ಸಾಧ್ವಿ ಶಿರೋಮಣಿ ಸಾವಿತ್ರಿ ತನ್ನ ಪತಿಯನ್ನು ನಿನ್ನ ಲೋಕದಿಂದಲೇ ಹಿಂತಿರುಗಿ ಕರೆದುಕೊಂಡು ಹೋಗಲಿಲ್ಲವೇ?

ಯಮ: ಹೌದು, ನಿಜ. ಅವಳು ಮಹಾಸಾಧ್ವಿ. ಅವಳ ಪಾತಿವ್ರತ್ಯದ ಧರ್ಮಕ್ಕೆ ಮೆಚ್ಚಿ, ಅವಳಿಗೆ ಮಕ್ಕಳನ್ನು ದಯಪಾಲಿಸಿದೆ. ಕೊಟ್ಟ ವರ ತಪ್ಪೆಂದು ನನಗೆ ಆಮೇಲೆ ಅರಿವಾಯಿತು. ಗಂಡನಿಲ್ಲದೆ ಮಕ್ಕಳಾಗುವುದೆಂತು?

ಗ.ಮೋ.: ನೀನು ತಿಳಿದಿರುವಂತೆ, ನಾನು ಗಣಿತವನ್ನು ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದ ಸಮಯದಲ್ಲೇ ನಿನ್ನ

ದೂತರು ನನ್ನನ್ನೆಳೆದು ಇಲ್ಲಿಗೆ ತಂದಿದ್ದಾರೆ. ನಾನು ಹೇಳಬೇಕಾದ ವಿಷಯವನ್ನು ಪೂರ್ಣವಾಗಿ ತಿಳಿಸಲು ಸಾಧ್ಯವಾಗಲಿಲ್ಲ. ನನ್ನ ಕೈಗಳಲ್ಲಿ ಇನ್ನೂ ಸೀಮೆಸುಣ್ಣ ಮತ್ತು ಒರೆಸುವ ಬಟ್ಟೆ ಹಾಗೇ ಇದೆ. ಆದ್ದರಿಂದ ಒಂದರ್ಧಘಂಟೆ ಅವಕಾಶವನ್ನು ಕೊಟ್ಟರೆ, ಭೂಲೋಕಕ್ಕೆ ಹೋಗಿ, ವಿದ್ಯಾರ್ಥಿಗಳಿಗೆ ಪೂರ್ಣ ವಿವರಣೆ ಕೊಟ್ಟು, ಆದಷ್ಟು ಬೇಗ ಇಲ್ಲಿಗೆ ಬರುತ್ತೇನೆ. ಅಷ್ಟು ಉಪಕಾರ ಮಾಡು.

ಯಮ : ನಿನ್ನ ವೃತ್ತಿಯಲ್ಲಿರುವ ಶ್ರದ್ಧೆ ಮತ್ತು ಗೌರವ ವಿದ್ಯಾರ್ಥಿಗಳಲ್ಲಿ ಅಚಲವಾದ ಪ್ರೇಮ ಇವುಗಳನ್ನು ಮೆಚ್ಚತಕ್ಕಂಥದ್ದೆ. ಆದರೆ ನಾನೇನು ಮಾಡಲಿ, ನನ್ನ ಕರ್ತವ್ಯಪಾಲನೆಯೇ ಮುಖ್ಯ. (ಚಿತ್ರಗುಪ್ತರ ಕಡೆ ತಿರುಗಿ) ಚಿತ್ರಗುಪ್ತರೇ, ಇವನ ಅವಗುಣಗಳೇನು ಮತ್ತು ಈತನು ಭೂಲೋಕದಲ್ಲಿ ಮಾಡಿದ ಪಾಪಕಾರ್ಯವೇನೆಂಬುದನ್ನು ತಿಳಿಸಿ?

ಚಿ.ಗು.–೧ : ಪ್ರಭೋ, ಈತನು ಮಹಾ ಜಿಪುಣ, ಕಡುಲೋಭಿ. ಒಬ್ಬರಿಗೆ ಒಂದು ಬಿಡಿಗಾಸನ್ನೂ ದಾನವಾಗಿ ಕೊಟ್ಟವನಲ್ಲ. ಇದೆಲ್ಲಕ್ಕಿಂತಲೂ ಮಿಗಿಲಾಗಿ ಘೋರವಾದ ಪಾಪಕೃತ್ಯವನ್ನು ಎಸಗಿದ್ದಾನೆ. ತನ್ನ ದೊಡ್ಡಪ್ಪ ತೀರಿಕೊಂಡ ಮೇಲೆ, ಅವನ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವೆನೆಂಬ ನಾಟಕವನ್ನು ಹೂಡಿ, ಅವರಿಗೆ ಬರಬೇಕಾದ ಆಸ್ತಿ ಎಲ್ಲವನ್ನೂ ತಾನೇ ವಶಪಡಿಸಿಕೊಂಡ. ಏನೂ ಅರಿಯದ ಆ ಚಿಕ್ಕಮಕ್ಕಳು ಬೀದಿಭಿಕಾರಿಗಳಾದರು. ಈ ನೋವನ್ನು ಸಹಿಸಲಾರದೆ, ವಿಧವೆ ದೊಡ್ಡಮ್ಮ ಆತ್ಮಹತ್ಯೆ ಮಾಡಿಕೊಂಡಳು. ಅವಳು ಹೇಗೆ ಆತ್ಮಹತ್ಯೆ ಮಾಡಿಕೊಂಡಳೆಂದರೆ....

ಯಮ : ಈಗ ಆ ವಿವರ ಬೇಕಾಗಿಲ್ಲ. ಗುರುವರ್ಯ, ಇದು ನಿಜವೇ?

ಗ.ಮೇ. : ಯಮದೇವಾ, ಚಿತ್ರಗುಪ್ತರು ಹೇಳಿದ ಪ್ರತಿ ಅಕ್ಷರವೂ ನಿಜ. ನನ್ನ ದೊಡ್ಡಮ್ಮ ಸತ್ತಮೇಲೆ ನನ್ನ ತಪ್ಪು ಅರಿವಾಗಿ ಬಹಳ ಪಶ್ಚಾತ್ತಾಪ ಪಟ್ಟಿದ್ದೇನೆ. ಜೀವನವನ್ನು ದುರ್ಭರವಾಗಿ ಸಾಗಿಸಿದ್ದೇನೆ. ತಪ್ಪಿಸಿಕೊಂಡ ಮಕ್ಕಳನ್ನು ಹುಡುಕಲು ಪ್ರಯತ್ನಪಟ್ಟೆ. ಆದರೆ ಅವರು ನನಗೆ ಸಿಗಲಿಲ್ಲ.

ಯಮ : (ಚಿತ್ರಗುಪ್ತರ ಕಡೆ ತಿರುಗಿ) ಇವನ ಸುಗುಣಗಳೇನು ಮತ್ತು ಇವನು ಮಾಡಿದ ಪುಣ್ಯಕಾರ್ಯವೇನು?

ಚಿ ಗು–೨ : ಇವನು ಅತಿ ಬುದ್ಧಿವಂತ, ಮೇಧಾವಿ, ಮಾತಿನಲ್ಲಿ ಚತುರ, ಮಹಾರಸಿಕ, ಮಹಾನ್ ಗಣಿತಜ್ಞ, ಸಂಶೋಧನೆಯಲ್ಲೇ ಇವನ ಆಸಕ್ತಿ, ಗಣಿತವೇ ಇವನ ನಡೆ ಮತ್ತು ನುಡಿ. ವಿದ್ಯಾರ್ಥಿಗಳಲ್ಲಿ ಅಪಾರವಾದ ಪ್ರೀತಿ. ಪಾಠ ಹೇಳಿಕೊಡುವುದರಲ್ಲಿ ನಿಸ್ಸೀಮ. ಎಂದೂ ಶಾಲೆಗೆ ತಪ್ಪಿಸಿಕೊಂಡವನಲ್ಲ. ವಿದ್ಯಾರ್ಥಿಗಳಿಗೆ ಗಣಿತವನ್ನು ಕಲಿಸುವುದೇ ಇವನ ಮುಖ್ಯ ಧ್ಯೇಯ. ಹಗಲಿರುಳೂ ವಿದ್ಯಾರ್ಥಿಗಳಿಗೋಸ್ಕರವೇ ತನ್ನ ಜೀವನವನ್ನು ಮುಡುಪಾಗಿಟ್ಟ ವ್ಯಕ್ತಿ. ಗಣಿತವೇ ಇವನ ಜೀವ ಮತ್ತು ಜೀವನ. ಇದೇ ರೀತಿ ವಿದ್ಯಾರ್ಥಿಗಳು

ಇವನನ್ನು ಅತ್ಯಂತ ಗೌರವಾದರಗಳಿಂದ ಕಾಣುತ್ತಿದ್ದರು. ಇವನಲ್ಲಿ ಅಪಾರವಾದ ಭಕ್ತಿ. ಹೀಗೆ ಗುರುಶಿಷ್ಯರ ಸಂಬಂಧ ಬಹಳ ಸುಮಧುರವಾಗಿತ್ತು. ಜನಪ್ರಿಯ ಉಪಾಧ್ಯಾಯನೆಂದು ಎಲ್ಲರ ಪ್ರೀತಿಗೂ ಪಾತ್ರನಾಗಿದ್ದ. ಇತ್ತೀಚೆಗೆ ಕೆಲವು ಸಂಶೋಧನೆಗಳನ್ನೂ ಸಹ ಮಾಡಿದ್ದಾನೆ.

ಯಮ : ನೀನು ವಿದ್ಯಾರ್ಥಿಗಳಿಗೆ ಯಾವ ವಿಷಯ ಬೋಧಿಸುತ್ತಿದ್ದೆ ?

ಗ.ಮೋ. : ಯಮರಾಜ, ಅದನ್ನು ಕೇಳಬೇಕೆಂಬ ಆಸೆಯು ನಿನಗೂ ಇದೆಯೇ ?

ಯಮ : ಯಾಕಿರಬಾರದು ?

ಗ.ಮೋ. : ಸರಿ, ಅವಿಭಾಜ್ಯ ಸಂಖ್ಯೆಗಳ ವಿಷಯ ಬೋಧಿಸುತ್ತಿದ್ದೆ.

ಯಮ : ನನಗೂ ಕೇಳಬೇಕೆಂಬ ಆಸೆಯಿದೆ. ಸ್ವಲ್ಪ ವಿಸ್ತರಿಸಿ ಹೇಳು.

ಗ.ಮೋ. : ವಿದ್ಯಾರ್ಥಿಗಳಿಗೆ ಈ ಸಮಸ್ಯೆಗಳನ್ನು ಕೊಟ್ಟಿದ್ದೆ. "೮ಎನ್ನುವ ಅಂಕೆಯನ್ನು ೮ ಸಾರಿ ಬರೆದು ಪಕ್ಕದಲ್ಲಿ ೧ ಬರೆದ ಮೇಲೆ, ಆ ಒಂಭತ್ತು ಅಂಕೆಗಳುಳ್ಳ ಸಂಖ್ಯೆಯು ವಿಭಾಜ್ಯ ಸಂಖ್ಯೆಯೋ ಅಥವಾ ಅವಿಭಾಜ್ಯ ಸಂಖ್ಯೆಯೋ ಹೇಳಿ" ಎಂದು. ಕೆಲವರು ವಿಭಾಜ್ಯ ಸಂಖ್ಯೆಎಂದೂ ಇನ್ನು ಕೆಲವರು ಅವಿಭಾಜ್ಯ ಸಂಖ್ಯೆಯೆಂದೂ ಉತ್ತರ ಹೇಳಿದರು. ಯಾವುದು ಸರಿ ಎಂದು ಹೇಳುವಷ್ಟರಲ್ಲಿ ನಾನು ಇಲ್ಲಿಗೆ ಬರಬೇಕಾಯಿತು. ಅವರಿಗೆ ನಿಜ ಉತ್ತರ ತಿಳಿಸಿ ಬೇಗನೆ ಹಿಂತಿರುಗುತ್ತೇನೆ.

ಯಮ : ಇದು ಮಹಾ ಸಮಸ್ಯೆಯೇ ?

ಗ.ಮೋ. : ಹಾಗಾದರೆ, ಯಮರಾಜ, ನಿನಗೆ ಉತ್ತರ ಗೊತ್ತಿದೆಯೇ ?

ಯಮ : ಆ ಸಂಖ್ಯೆಯನ್ನು ಮತ್ತೊಮ್ಮೆ ಹೇಳು.

ಗ.ಮೋ. : ಆ ಸಂಖ್ಯೆ ೮೮೮೮೮೮೮೮೧.

ಯಮ : ಆ ಸಂಖ್ಯೆಯ ಏಕಸ್ಥಾನದಲ್ಲಿ ೧ ಇಲ್ಲದಿದ್ದರೆ, ತತ್‌ಕ್ಷಣವೇ ಉತ್ತರಿಸುತ್ತಿದ್ದೆ.

ಗ.ಮೋ. : ಹಾಗಿದ್ದಿದ್ದರೆ ಯಾರು ಬೇಕಾದರೂ ಅತಿ ಸುಲಭವಾಗಿ ಉತ್ತರ ನೀಡಿರುತ್ತಿದ್ದರು. ಆ ಸಂಖ್ಯೆಯ ಕೊನೆಯಲ್ಲಿ ೧ ಇರುವುದೇ ಒಂದು ತೊಡಕು, ಹಾಗೆ ತೊಡಕಿದ್ದರೆ ತಾನೇ ಸಮಸ್ಯೆ.

ಯಮ : ಇರಲಿ ಪರವಾಗಿಲ್ಲ. ಆ ಸಂಖ್ಯೆ ಅವಿಭಾಜ್ಯ ಸಂಖ್ಯೆ ಎಂದು ತೋರುತ್ತದೆ.

ಗ.ಮೋ. : ನಿನ್ನ ಉತ್ತರಕ್ಕೆ ಆಧಾರವೇನು ಯಮರಾಜ ?

ಯಮ : ಅವಿಭಾಜ್ಯ ಸಂಖ್ಯೆಗಳು ಯಾವಾಗಲೂ ೧ ಅಥವಾ ೩ ಅಥವಾ ೭ ಅಥವಾ ೯ರಲ್ಲಿ ಕೊನೆಗಾಣಬೇಕು.

ಗ.ಮೋ. : ನಿನಗೂ ಈ ವಿಷಯ ತಿಳಿದಿದೆ. ಬಹಳ ಸಂತೋಷ. ನೀನು ಹೇಳಿದ್ದು ನಿಜ. ಆದರೆ, ಏಕಸ್ಥಾನದಲ್ಲಿ, ಈ ಅಂಕೆಗಳಿರುವ ಎಲ್ಲ ಸಂಖ್ಯೆಗಳೂ ಅವಿಭಾಜ್ಯ ಸಂಖ್ಯೆಗಳಲ್ಲ. ಉದಾಹರಣೆಗೆ ೨೧, ೩೩, ೫೭, ೬೯ ಎಲ್ಲವೂ ವಿಭಾಜ್ಯಗಳೇ ! ಇದು ಬಹುಶಃ ನಿನಗೆ ತಿಳಿದಿರಲಾರದು. ಈಗ ಹೇಳಿರುವ ಸಂಖ್ಯೆ ನಿಜಕ್ಕೂ ವಿಭಾಜ್ಯ !

ಯಮ : ಓ ಹಾಗೇನು. ಹಾಗಾದರೆ, ಆ ಸಂಖ್ಯೆ ಯಾವ ಸಂಖ್ಯೆಗಳಿಂದ ನಿಶ್ಶೇಷವಾಗಿ ಭಾಗವಾಗುತ್ತದೆ ?

ಗ.ಮೇ.: ಆ ಸಂಖ್ಯೆಗಳು ೧೦೯೦೩ ಮತ್ತು ೮೧೫೨೭. ಇವು ಸ್ವತಃ ಅವಿಭಾಜ್ಯಗಳು. ಇವುಗಳ ಗುಣಲಬ್ಧವೇ ೮೮೮೮೮೮೮೮೧. ಎಂದೇ ಇದು ವಿಭಾಜ್ಯ ಸಂಖ್ಯೆ.

ಯಮ: ಎಷ್ಟು ಆಶ್ಚರ್ಯವಾಗಿದೆ.

ಗ.ಮೇ. : ಇಷ್ಟು ಸಣ್ಣ ವಿಷಯಕ್ಕೆ ಆಶ್ಚರ್ಯ ಪಡುತ್ತಿದ್ದೀಯಲ್ಲಾ, ಯಮರಾಜ. ನಮ್ಮ ಭೂಲೋಕದಲ್ಲಿ ಈ ತರಹ ಕುತೂಹಲವನ್ನು ಉಂಟುಮಾಡುವ ವಿಷಯಗಳು ಸಹಸ್ರಾರು ಇವೆ, ಗಣಿತದಲ್ಲಿ.

ಯಮ: ಇನ್ನೂ ಕೆಲವನ್ನು ತಿಳಿಸು.

ಗ.ಮೇ. : ಅತ್ಯಂತ ಸಂತೋಷದಿಂದ ತಿಳಿಸುತ್ತೇನೆ. ಮೊದಲನೆಯದಾಗಿ ೨ ಎಂಬುದು ಏಕೈಕ ಸಮ ಅವಿಭಾಜ್ಯ ಸಂಖ್ಯೆ. ೧೧ ಎಂಬುದು ಅವಿಭಾಜ್ಯ ಸಂಖ್ಯೆ. ೧೧೧ ಎಂಬುದು ವಿಭಾಜ್ಯ ಸಂಖ್ಯೆ. ಇವುಗಳ ಅವಿಭಾಜ್ಯ ಅಪವರ್ತನೆಗಳು ಅಥವಾ ಭಾಜಕಗಳು ೩ ಮತ್ತು ೩೭. ಹೀಗೆ ೧ನ್ನು ೨, ೫, ೭, ೧೧, ೧೩, ೧೭ ಸಾರಿ ಬರೆದರೆ, ಅವೆಲ್ಲವೂ ವಿಭಾಜ್ಯ ಸಂಖ್ಯೆಗಳು.

ಯಮ: ಸಾಕಪ್ಪಾ ಸಾಕು. ನನ್ನ ತಲೆಗೆ ಚಿಟ್ಟು ಹಿಡಿದಿದೆ. ಸ್ವಲ್ಪ ತಿಳಿಸು ಅಂತ ಹೇಳಿದ ಮಾತ್ರದಲ್ಲೇ ಪಾಠನೇ ಪ್ರಾರಂಭಿಸಿಬಿಟ್ಟೆಯಲ್ಲಾ.

ಗ.ಮೇ. : ನಾನೇನು ಮಾಡಲಿ ಯಮರಾಜ. ೨೦ ವರ್ಷಗಳಿಂದಲೂ ಇದೇ ರೀತಿ ಗಣಿತ ಪಾಠವನ್ನು ಬೋಧನೆ ಮಾಡುತ್ತಿದ್ದೇನೆ. ಹೊಸ ವಿಷಯಗಳನ್ನೂ ಶೋಧಿಸುತ್ತಿದ್ದೇನೆ. ಇನ್ನೊಂದೇ ಒಂದು ವಿಷಯ ತಿಳಿಸಬೇಕೆಂಬ ಆಸೆಯಿದೆ. ಅದನ್ನೂ ಹೇಳಿಬಿಡ್ತೀನಿ.

ಯಮ: ಹಾಗಾದರೆ ಹೇಳು.

ಗ.ಮೇ. : ೧ನ್ನು ೧೯ ಸಾರಿ ಬರೆದರೆ ಅದು ಅವಿಭಾಜ್ಯ ಸಂಖ್ಯೆ.

ಚಿ.ಗು. : ಪ್ರಭೋ, ಯಮಭಟರು ಆಯಸ್ಸು ತೀರಿದ ಒಬ್ಬಳು ಹೆಂಗಸನ್ನು ಕರೆತಂದಿದ್ದಾರೆ.

ಗ.ಮೇ. : ಈ ರೀತಿ ಸಂಶೋಧನೆಯನ್ನು ಕೈಗೊಂಡಿದ್ದೇನೆ. ನೂತನ ವಿಷಯಗಳನ್ನು ಪತ್ತೆಹಚ್ಚಿ ಸಂಖ್ಯಾ ಪ್ರಪಂಚಕ್ಕೆ ಶಾಶ್ವತ ಕೊಡುಗೆ ನೀಡಬೇಕೆಂಬ ಹಂಬಲ ನನ್ನನ್ನು ಕಾಡುತ್ತಿದೆ. ನಾನು ಏನು ಮಾಡಲಿ, ಯಮರಾಜ. ನನ್ನ ಆಯಸ್ಸು ತೀರಿ ನಿನ್ನ ಮುಂದೆ ನಿಂತಿದ್ದೇನೆ. ಇನ್ನು ಏನು ಸಂಶೋಧನೆ ನಡೆಸಲಿ.

ಯಮ: ಸರಿ, ನಿನ್ನ ಕೋರಿಕೆಯೇನು?

ಗ.ಮೇ. : ಜ್ಞಾನ ಅಪಾರವಾದದ್ದು, ಸಂಶೋಧನೆ ಮಾಡುತ್ತಲೇ ಇರಬೇಕು. ಎಷ್ಟು ಜನ್ಮವೆತ್ತಿದರೂ ಸಾಲದು. ಆದ್ದರಿಂದ ನನಗೆ ಮರಣವೇ ಬಾರದ ಹಾಗೆ ನೀನು ವರವನ್ನು ಕೊಡು.

ಯಮ: ಅದು ಹೇಗೆ ಸಾಧ್ಯ? ಜಾತಸ್ಯ ಮರಣಂ ಧ್ರುವಂ. ಹುಟ್ಟಿದ ಮೇಲೆ ಸಾಯಲೇಬೇಕು. ಇದು ಪ್ರಕೃತಿ ನಿಯಮ. ಚಿಂತಿಸಬೇಡ, ನಿನ್ನಲ್ಲಿರುವ ಸಂಖ್ಯೆಗಳ ಅಪಾರ ಜ್ಞಾನವನ್ನೂ, ನಿನ್ನ ವಿದ್ಯಾರ್ಥಿಗಳಲ್ಲಿ ಇಟ್ಟಿರುವ ಪ್ರೇಮ ಮತ್ತು ನಿನ್ನ ಉದ್ಯೋಗದಲ್ಲಿರುವ ಶ್ರದ್ಧೆಯನ್ನೂ ಮೆಚ್ಚಿಕೊಂಡಿ

ದ್ದೇನೆ. ನಿನ್ನ ಅಭಿಲಾಷೆಗೆ ಅಡ್ಡ ಬರಲು ನಾನು ಇಷ್ಟಪಡುವುದಿಲ್ಲ. ಸ್ವಪ್ರೇರಣೆಯಿಂದ, ಸಂತೋಷದಿಂದ, ನೀನು ಭೂಲೋಕಕ್ಕೆ ಹಿಂತಿರುಗಲು ಅನುಮತಿ ನೀಡಿದ್ದೇನೆ. ನಿನಗೆ ಇನ್ನೂ ೫೦ ವರ್ಷ ಆಯುಸ್ಸನ್ನು ಕೊಟ್ಟಿರುತ್ತೇನೆ. ನಿನ್ನ ಲೋಕದಲ್ಲಿ ಮಹಾನ್ ಸಂಶೋಧಕನಾಗಿ, ಗಣಿತ ಪ್ರಪಂಚದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿ, ಕೀರ್ತಿವಂತನಾಗಿ ಬಾಳು.

ಭರತವಾಕ್ಯ: ಭಗವಂತ ತನ್ನ ಪ್ರತಿರೂಪವಾಗಿ ಮಾನವನನ್ನು ಎರಕ ಹುಯ್ದ. ಮಾನವ ಸ್ವಪ್ರತಿಭೆಯಿಂದ ಸಂಖ್ಯಾಲೋಕ ಸೃಷ್ಟಿಸಿ ಸಾಕ್ಷಾತ್ ಭಗವಂತನನ್ನೇ ಆಳಿದ! ಗಣಿತದ ಹಿರಿಮೆ ಬಗ್ಗೆ ಪ್ಲಾಟೋ ತನ್ನ ಅಧ್ಯಯನ ಮಂದಿರದ ದ್ವಾರದಲ್ಲಿ ಫಲಕ ಕೆತ್ತಿಸಿಟ್ಟಿದ್ದನಂತೆ: ಗಣಿತ ಅರಿಯದವರು ಇಲ್ಲಿ ಕಾಲಿಡದಿರಲಿ!

(ಗಣಿತ ಶೂನ್ಯರಿಗೆ ಪ್ರವೇಶ ನಾಸ್ತಿ)



ಕನ್ನಡದ ನಾಡ ಜನವೆಲ್ಲವೂ ನನ್ನವರು
ಬಡಗ ತೆಂಕಣ ಮೂಡ ಕೊಡಗ ತುಳುವ ತೋಡ
ಇನ್ನೆಲ್ಲ ಕನ್ನಡಿಗರೆನ್ನವರು ಎನ್ನುಸಿರು,
ನಾವೆಲ್ಲ ಒಂದು ಮನೆಯವರಣ್ಣ ತಮ್ಮದಿರು
ನಮ್ಮೆಲ್ಲರಸು ಪಡೆದುದೊಂದೆ ನಾಡಿನ ಬಸಿರು
ಎಂದು ನಾವರಿದವೇ ನಮಗೆ ಇನ್ನಾರೆದುರು!
ಹಾ ನನ್ನ ಸೋದರರೆ ಬನ್ನಿ ಒಂದಾಗಿ
ಜಯವಧುವ ನಿಮ್ಮ ತೋಳಿನೊಳಿಟ್ಟು ತೂಗಿ

—ಶ್ರೀನಿವಾಸ (ಮಾಸ್ತಿ ವೆಂಕಟೇಶ ಅಯ್ಯಂಗಾರ್)

ಬಂಗಾರದ ಕನಸು

ಗ. ನಾ. ಭಟ್ಟ

ಸುಮಾರು ಮೂವತ್ತು ವರ್ಷಗಳ ಹಿಂದೆ ನಾನು ಮತ್ತು ನನ್ನ ಗಂಡ ವಿಜೇ ಮದುವೆಯಾದ ಹೊಸದರಲ್ಲಿ ಶ್ರೀಲಂಕಾದ ಸುಂದರ ಬೆಟ್ಟಗಳ ತಾಣವೆನಿಸಿದ ಹಳ್ಳಿಯೊಂದಕ್ಕೆ ಹೋದೆವು. ಬಂಗಾರದ ಉಂಗುರವನ್ನು ಶಪಥಪೂರ್ವಕ ವಿನಿಮಯ ಮಾಡಿಕೊಂಡ ನವೋಲ್ಲಾಸದ ಸಂಭ್ರಮ ನಮ್ಮ ಹೃದಯದಲ್ಲಿನ್ನೂ ನಲಿಯುತ್ತಿತ್ತು. ವಿಜೇ ಮತ್ತು ನಾನು ಅಲ್ಲಿ ಹೊಸದಾಗಿ ಮನೆ ಮಾಡಿದ್ದೆವು. ನಮ್ಮ ಪ್ರೀತಿ ಪರ್ವತದಷ್ಟು ಅಚಲವಾಗಿತ್ತು ಆದರೆ ಅದರ ನಿಜಶಕ್ತಿ ಅಷ್ಟು ಬೇಗ ಅರಿವಿಗೆ ಬರುವುದೆಂದು ನಿರೀಕ್ಷಿಸಿರಲಿಲ್ಲ. ಆಗ ಆ ಹಳ್ಳಿಯಲ್ಲಿ ನೀರಿನ ವ್ಯವಸ್ಥೆಯಾಗಲೀ, ವಿದ್ಯುದ್ದೀಪದ ಸರಬರಾಜಾಗಲೀ ಇರದಿದ್ದುದರಿಂದ ನೀರಿಗಾಗಿ ಬಾವಿಗಳನ್ನೇ ಆಶ್ರಯಿಸಬೇಕಾಗಿತ್ತು. ಕೆರೋಸಿನ್ ದೀಪ ಮತ್ತು ಮೋಂಬತ್ತಿಗಳು ಬೆಳಕನ್ನು ಒದಗಿಸುತ್ತಿದ್ದವು. ದಿನಾ ನಾನು ನೀರು ತರಲು ನಮ್ಮ ಮನೆಗೆ ತಾಗಿದಂತೆ ಇರುವ ಪಚ್ಚೆವರ್ಣದ ಬತ್ತದ ಗದ್ದೆಗಳನ್ನು ದಾಟಿಕೊಂಡು ಹೋಗಬೇಕಿತ್ತು. ದಿನದ ಕೆಲಸದ ಅನಂತರ ನನ್ನ ಗಂಡನಿಗೆ ಕೈಕಾಲು ತೊಳೆದುಕೊಳ್ಳುವುದಕ್ಕೆಂದು ಒಂದು ಬಕೆಟ್ ನೀರನ್ನು ತರುತ್ತಿದ್ದೆ.

ಒಂದು ಆಹ್ಲಾದಕರ ಸಂಜೆ. ವಿಜೇ ಸಿಡಿಲೆರಗಿದಂತೆ ಆಘಾತಗೊಂಡಾಗ ಅವನು ಧರಿಸಿದ್ದ ಮದುವೆ ಉಂಗುರ ಬೆರಳಿನಿಂದ ಜಾರಿ ಬತ್ತದ ಗದ್ದೆಯ ಕಡೆ ಉರುಳಿ ಬಾವಿಯಲ್ಲಿ ಬಿದ್ದಿತ್ತು. ನಾವು ಪೂರ್ಣ ಅಸಹಾಯಕತೆಯನ್ನನುಭವಿಸುತ್ತಾ ನಿಂತೆವು ಬೆಳಗ್ಗೆ ಹುಡುಕೋಣವೆಂದು ವಿಜೇ ಸಮಾಧಾನಪಡಿಸಿದ.

ಅನೇಕರು ಮದುವೆಯ ಉಂಗುರ ಕಳೆದುಕೊಂಡದ್ದು ದುರದೃಷ್ಟವೆಂದು ಹೇಳಿದರು. ನಾನು ಮೂಢನಂಬಿಕೆಯವಳಲ್ಲದಿದ್ದರೂ ಅಂದು ರಾತ್ರಿ ಹೃದಯ ಭಾರದಿಂದ ಮಲಗಿಕೊಂಡೆ. ಸಂಜೆಯ ಪ್ರಾರ್ಥನೆಯ ಬಳಿಕ ವಿಜೇ ಬೇಗ ನಿದ್ದೆ ಹೋದ. ಆಗಿನ್ನೂ ಮಧ್ಯರಾತ್ರಿಯಾಗಿರದಿದ್ದರೂ ಅಂತಿಮವಾಗಿ ನಾನು ಮೋಂಬತ್ತಿಯನ್ನು ಆರಿಸಿದೆ. "ಏಳು ಮಣೆಲ್....ತಡಮಾಡಬೇಡ" ಎಂದು ನೀರವವಾಣಿಯೊಂದು ನನ್ನನ್ನು ಒತ್ತಾಯಪಡಿಸಿದಂತೆನಿಸಿ ಎಚ್ಚರಗೊಂಡಾಗ ೩ ಗಂಟೆ ಹೊಡೆದಿತ್ತು. ಕನಸು

೧೯೯೬ರ ಜುಲೈ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಮಣೆಲ್ ವಿಜೆರತ್ನೆ ಅವರ "ಡ್ರೀಮ್ ಆಫ್ ಗೋಲ್ಡ್" ಎಂಬ ಲೇಖನದ ಅನುವಾದ.

ಮತ್ತು ನೈಜತೆಯ ನಡುವಿನಿಂದ ನಾನು ಹೊರಬರದವಳಾಗಿದ್ದೆ. ಹಾಗೆಯೇ ಕಣ್ಣು ಗಳನ್ನು ಮುಚ್ಚಿಕೊಂಡೆ. ಉಂಗುರ ನೀರಿನಲ್ಲಿ ಹೊಳೆಯುತ್ತಿರುವಂತೆ ಭಾಸವಾಯಿತು. ಮತ್ತೆ ಕಣ್ಣುಗಳನ್ನು ತೆರೆದೆ. ಒಂದು ಕ್ಷಣವನ್ನೂ ವ್ಯರ್ಥ ಮಾಡಬಾರದೆಂದು ನಿರ್ಧರಿಸಿ, ಕೂಡಲೆ ಹಾಸಿಗೆಯಿಂದ ಎದ್ದು, ಟಾರ್ಚ್ ತೆಗೆದುಕೊಂಡು, ವಿಜೆಯನ್ನೆಬ್ಬಿಸುವಾಗ ನನ್ನ ಮಾತುಗಳು ತಡವರಿಸಿದ್ದುವು. ಆತ ಗಾಢ ನಿದ್ದೆಯಲ್ಲಿದ್ದರೂ, ಹಾಸಿಗೆಯಿಂದ ಹೊರಳಿ ನಾನು ಮೆಟ್ಟಲಿಳಿಯುತ್ತಿದ್ದಂತೆ ನನ್ನನ್ನು ಅನುಸರಿಸಿದ. ನಾವು ಬತ್ತದ ಗದ್ದೆ ದಾಟಿದೆವು. ನಾನು ಬಾವಿಗೆ ಬೆಳಕನ್ನು ಚೆಲ್ಲಿದೆ. ನೀರಿಗೆ ಸ್ವಲ್ಪ ಮೇಲ್ಭಾಗದಲ್ಲಿ ಸಣ್ಣ ಪಾವಟಿಗೆ ಮೇಲೆ ಉಂಗುರ ಮಿನುಗುತ್ತಿತ್ತು. ಸಣ್ಣ ಕಪ್ಪೆಯೊಂದು ಅದರ ಹತ್ತಿರವೇ ಕೂತಿತ್ತು. ಕಪ್ಪೆ ಎಲ್ಲಿ ಅದನ್ನು ಕೆಡವಿಬಿಡುವುದೋ ಎಂದು ನನ್ನ ಹೃದಯ ಬಡಿದುಕೊಳ್ಳುತ್ತಿತ್ತು. ಕೂಡಲೆ ಕೋಲೊಂದನ್ನು ಎತ್ತಿಕೊಂಡು ಎಚ್ಚರಿಕೆಯಿಂದ ಆ ಪ್ರೇಮದ ಸಂಕೇತವನ್ನು ಮೇಲಕ್ಕೆತ್ತಿದೆ. ಉಲ್ಲಾಸಕರ ಬೆಳದಿಂಗಳಲ್ಲಿ ಸಂತೋಷದಿಂದ ಉಂಗುರವನ್ನು ವಿಜೆಯ ಬೆರಳಿಗೆ ಜಾರಿಸಿದೆ.

ನೀನು ಎಷ್ಟು ಜಾಣೆ. ಇನ್ನೊಂದು ಕ್ಷಣ ನಾವು ತಡಮಾಡಿದ್ದರೆ ಈ ಉಂಗುರವನ್ನು ನಾವು ಕಳೆದುಕೊಂಡಿರುತ್ತಿದ್ದೆವು” ಎಂದು ವಿಜೇ ಉದ್ಗಾರ ತೆಗೆದು ಸಂತೋಷದಿಂದ ನನ್ನನ್ನು ಆಲಿಂಗಿಸಿದ. ಈ ವಿಶಿಷ್ಟಾನುಭವ ನಾವು ಆಶ್ಚರ್ಯಗೊಳ್ಳುವಂತೆ ಮಾಡಿತ್ತು.

ಆ ರಾತ್ರಿ ಕನಸು ಎಲ್ಲಿಂದ ಬಂತೆಂದು ನಾನಿನ್ನೂ ತಿಳಿದಿಲ್ಲ. ಆದರೆ ಒಂದು ಮಾತು ಹೇಳಬಲ್ಲೆ–ನಮ್ಮ ಪ್ರೇಮಕ್ಕೆ ಅಡ್ಡಿಯನ್ನುಂಟುಮಾಡಿದ್ದ ಎಲ್ಲಾ ವಿರೋಧಿಗಳಿಗೂ ಪ್ರೀತಿ, ತನ್ನ ನಿಜಶಕ್ತಿಯ ಅರಿವು ಮೂಡಿಸಿತ್ತು. ತನ್ನ ಇಂದ್ರಜಾಲ ವರ್ತುಲದಲ್ಲಿ ಒಂದು ಸಾಂಕೇತಿಕ ಗುರುತಾಗಿ ನನ್ನ ಕುಟುಂಬದಲ್ಲಿಯ ಕಹಿಯನ್ನು ಮರೆಮಾಡಿ ಸುರಕ್ಷಿತವಾಗಿಸಿತ್ತು.

ಹೊತ್ತಿತೋ ಹೊತ್ತಿತು
ಕನ್ನಡದ ದೀಪ
ಮುಗಿಯಿತೋ ಮುಗಿಯಿತು
ಶತಮಾನಗಳ ಶಾಪ

—ಕಾವ್ಯಾನಂದ (ಸಿದ್ದಯ್ಯ ಪುರಾಣಿಕ)

ಪುಸ್ತಕ ಪರಿಚಯ

ಸೂರ್ಯ ಕಿನ್ನರಿಯರು—ಲೇಖಕರು : ಸ್ವಪ್ನಾ ದತ್ತ; ಅನುವಾದಕರು : ವೈದೇಹಿ; ಪ್ರಕಾಶಕರು : ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ಎ-೫, ಗ್ರೀನ್ ಪಾರ್ಕ್, ಹೊಸದೆಹಲಿ-೧೧೦೦೧೬, ಮೊದಲ ಮುದ್ರಣ ೧೯೯೫; ಪುಟ : ೨೪; ಬೆಲೆ : ೮-೫೦ರೂ.

ಸೂರ್ಯಕಿರಣಗಳು (ಕಿನ್ನರಿಯರು) ಭೂಮಿಯ ಮೇಲೆ ನರ್ತಿಸುತ್ತಿವೆ. ಕಿರಣಗಳ ಶಾಖಕ್ಕೆ ಸಮುದ್ರದ ನೀರು ಆವಿಯಾಗುತ್ತದೆ. ಆಕಾಶದಲ್ಲಿ ಮೋಡಗಳ ರೂಪದಲ್ಲಿ ಪರಿವರ್ತನೆಗೊಂಡು, ವಿವಿಧ ಆಕಾರ ತಳೆಯುತ್ತವೆ. ಅನಂತರ ಮೋಡಗಳು ಹೆಚ್ಚಾಗಿ ಒಂದಕ್ಕೊಂದು ಢಿಕ್ಕಿ ಹೊಡೆಯುತ್ತವೆ. ಗುಡುಗು, ಮಿಂಚುಗಳು ಆರ್ಭಟಿಸಿ, ಧಾರಾಕಾರವಾಗಿ ಮಳೆ ಸುರಿಯುತ್ತದೆ. ಈ ಪ್ರಕ್ರಿಯೆ "ಸೂರ್ಯಕಿನ್ನರಿಯರು" ಕಥೆಯ ಪ್ರಧಾನ ಅಂಶ.

ಸೂರ್ಯಕಿನ್ನರಿಯರು ಸೂರ್ಯನ ಕಿರಣಗಳ ಮೇಲೆ ನರ್ತಿಸುತ್ತಾ, ಭೂಮಿಗಿಳಿದು ವಿವಿಧ ಆಟಗಳನ್ನಾಡಿ ಮತ್ತೆ ಮೇಲೇರುತ್ತಿದ್ದರು. ಒಂದೇ ತೆರನಾದ ಆಟಗಳನ್ನಾಡುತ್ತಿದ್ದ ಅವರಿಗೆ ಬೇಸರವಾಗಿ ಬೇರೆ ಆಟವನ್ನಾಡಲು ನಿರ್ಧರಿಸಿದರು.

ಸೂರ್ಯನ ಸಲಹೆ ಮೇರೆಗೆ ಆಕಾಶದಲ್ಲಿ ಕೋಟೆ ಕಟ್ಟಲು ಪ್ರಯತ್ನಿಸಿದರು. ಹಲವಾರು ಸಲ ಪ್ರಯತ್ನಿಸಿದ ಮೇಲೆ, ಅವರು ಸಮುದ್ರದ ಸ್ವಲ್ಪ ನೀರು, ಗಾಳಿ, ಧೂಳಿನಿಂದ ಹಗುರವಾದ ಬಿಳಿ ಮೋಡಗಳನ್ನು ನಿರ್ಮಾಣಮಾಡಿದರು. ಅವುಗಳು ಆಕಾಶದಲ್ಲಿ ತೇಲುತ್ತಿದ್ದವು.

ಕಿನ್ನರಿಯರು ಮೋಡಗಳನ್ನು ಮಾಡುತ್ತಾ ಹೋದಂತೆ, ಸಮುದ್ರಗಳು ನೀರನ್ನು ತೆಗೆಯದಂತೆ ಗೊಣಗಿದವು. ಮೋಡಗಳನ್ನು ಮಾಡುವುದನ್ನು ನಿಲ್ಲಿಸುವಂತೆ ಮೋಡಗಳು ಗೊಣಗಿದವು. ಆದರೆ ಕಿನ್ನರಿಯರು ಇದಾವುದನ್ನು ಲಕ್ಷಿಸಲೇ ಇಲ್ಲ. ಕೊನೆಗೆ ಭಾರವಾದ ಮೋಡಗಳು ಮಳೆಯರೂಪದಲ್ಲಿ ಭೂಮಿಯ ಮೇಲೆ ಬೀಳತೊಡಗಿದವು. ಸೂರ್ಯಕಿನ್ನರಿಯರು ಖಿನ್ನರಾದರು, ಸೂರ್ಯನು ಸಮಾಧಾನಿಸಿದನು. ಆದರೆ ಕಿನ್ನರಿಯರು ತಮ್ಮ ಪ್ರಯತ್ನವನ್ನು ನಿಲ್ಲಿಸದೆ ಮೊದಲಿನಿಂದಲೂ ಪ್ರಾರಂಭಮಾಡಲು ನಿರ್ಧರಿಸಿದರು.

ಸೂರ್ಯಕಿನ್ನರಿಯರು ಮೋಡಗಳನ್ನು ಮಾಡುತ್ತಾ ಹೋದಂತೆ, ಮೋಡಗಳು ಆರ್ಭಟಿಸುತ್ತವೆ. ಮಿಂಚು ಮಿಂಚುತ್ತದೆ. ಮೋಡಗಳು ಮಳೆಯಾಗಿ ಧರಗೆ ಸುರಿಯುತ್ತವೆ. ಆದರೆ ಆ ಕಿನ್ನರಿಯರು ಬೇಸರ

ವಿಲ್ಲದೆ ಎಲ್ಲವನ್ನು ಮೊದಲಿನಿಂದ ಪ್ರಾರಂಭಿಸುತ್ತಾರೆ. ಅವರು ಎಂದೂ ಮುಗಿಯದ ಆಟವನ್ನು ಆಡಲು ಈಗ ಕಲಿತುಬಿಟ್ಟದ್ದಾರೆ ಇಷ್ಟು ಕಥಾಸಾರಾಂಶ.

ಕಥೆಯ ಚಿಕ್ಕ ಚಿಕ್ಕ ಸ್ಫುಟವಾದ ವಾಕ್ಯಗಳು ಕಿರಿಯರು ಅರ್ಥಮಾಡಿಕೊಳ್ಳುವುದಕ್ಕೆ ಅನುಕೂಲವಾಗಿವೆ. ಕಥೆ ಸಹಜ ಕುತೂಹಲದಿಂದ ಓದಿಸಿಕೊಂಡು ಹೋಗುತ್ತದೆ. 'ಮರಳಿ ಯತ್ನವ ಮಾಡು' ಎನ್ನುವ ನೀತಿಯನ್ನು ಬಿಡದ ಕಿನ್ನರಿಯರು ಯಶಸ್ಸನ್ನು ಸಾಧಿಸುತ್ತಾರೆ. ಆನಂದವನ್ನು ಪಡೆಯುತ್ತಾರೆ. ಕಿರಿಯರಿಗೆ ಮಾದರಿಯಾಗುತ್ತಾರೆ.

ಗೀತಾವಧೇರಾ ಅವರ ಹದಿಮೂರು ವರ್ಣ ಚಿತ್ರಗಳು ಕಿರಿಯರ ಮನಸ್ಸನ್ನು ತಣಿಸುತ್ತವೆ. ಕಥೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಹಕಾರಿಯಾಗಿವೆ. ರಕ್ಷಾಪುಟದ ಮೇಲಿರುವ ಸೂರ್ಯಕಿನ್ನರಿಯರು ಮತ್ತು ಮೋಡಗಳ ವರ್ಣಚಿತ್ರಗಳು ಸುಂದರವಾಗಿದ್ದು ಧ್ವನಿಪೂರ್ಣವಾಗಿವೆ. ಉತ್ತಮ ಗುಣಮಟ್ಟದ ಕಾಗದದ ಬಳಕೆ ಕೃತಿಯ ಅಂದವನ್ನು ಹೆಚ್ಚಿಸಿದೆ.

*　　*　　*　　*　　*

ಮಾಂಸಾಹಾರ ಏಕೆ ಅವಶ್ಯವಿಲ್ಲ?—ಲೇಖಕರು: ಡಾ|| ಆನಂದ ದೇಶಪಾಂಡೆ; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್, ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦೦೦೧; ಮೊದಲ ಮುದ್ರಣ: ೧೯೯೫; ಪುಟ: ೪೮; ಬೆಲೆ: ೧೨ರೂ.

ವೃತ್ತಿಯಿಂದ ವೈದ್ಯರಾಗಿ, ಇಂಗ್ಲೆಂಡಿನಲ್ಲಿ ನೆಲಸಿರುವ ಡಾ|| ಆನಂದದೇಶಪಾಂಡೆಯವರ ಮಾಂಸಾಹಾರ ಏಕೆ ಅವಶ್ಯವಿಲ್ಲ? ಈ ಚಿಕ್ಕ ಕೃತಿ ಉಪಯುಕ್ತವಾದುದು. ನಮ್ಮ ಆಹಾರ ಪದ್ಧತಿಯ ಬಗೆಗೆ ಸೂಕ್ತ ಜ್ಞಾನವನ್ನು ಒದಗಿಸುವ ಕೈಪಿಡಿ. ಆಹಾರದ ಬಗೆಗೆ ಸರಳ ವೈಜ್ಞಾನಿಕ ಮಾಹಿತಿಗಳನ್ನು ನೀಡುತ್ತಲೇ ಶಾಕಾಹಾರ ಮಹತ್ವದ ಪರಿಚಯ ಕೊಟ್ಟು, ಮಾಂಸಾಹಾರದ ದುಷ್ಪರಿಣಾಮಗಳನ್ನು ವಿವರಿಸಿದ್ದಾರೆ.

ಡಾ|| ದೇಶಪಾಂಡೆಯವರು ತಮ್ಮ ವಿಚಾರಧಾರೆಯನ್ನು ಹನ್ನೊಂದು ಅಧ್ಯಾಯಗಳಲ್ಲಿ ನಿರೂಪಿಸಿದ್ದಾರೆ. ಹತ್ತು ಮಿಲಿಯನ್ ವರ್ಷಗಳ ಹಿಂದೆ ಉದ್ಭವಿಸಿದ ಮಾನವ ಮಾಂಸ ಭಕ್ಷಣೆಯೊಂದಿಗೆ ಸಸ್ಯಾಹಾರಿಯೂ ಆಗಿದ್ದ ಎಂಬ ಐತಿಹಾಸಿಕ ವಿಚಾರಗಳೊಂದಿಗೆ ಪ್ರಾರಂಭಿಸಿದ್ದಾರೆ. ವಿವಿಧ ಮತಧರ್ಮಗಳಿಗೆ ಸೇರಿದ ಭಾರತದ ಜನತೆಯ ಆಹಾರ ಪದ್ಧತಿಯನ್ನು ಚರ್ಚಿಸಿರುವುದರ ಜೊತೆಗೆ, ಹರಪ್ಪ ಮೊಹೆಂಜೊದಾರೊ ಕಾಲದ, ಆರ್ಯರ ಕಾಲದ ಆಹಾರ ಪದ್ಧತಿಗಳನ್ನೂ ಉಲ್ಲೇಖಿಸಿದ್ದಾರೆ. ಜೈನ, ಬೌದ್ಧ ಧರ್ಮಗಳ ಅಹಿಂಸಾ ನೀತಿ, ಅಶೋಕನ ಶಾಸನ, ಗ್ರೀಕ್ ಇತಿಹಾಸಕಾರರ ಹೇಳಿಕೆಗಳನ್ನೂ ತಮ್ಮ ವಿಚಾರಧಾರೆಯ ಮಂಡನೆಗಾಗಿ ಬಳಸಿಕೊಂಡಿದ್ದಾರೆ.

ದಿನನಿತ್ಯ ಸೇವಿಸುವ ನಮ್ಮ ಆಹಾರಗಳಲ್ಲಿ ಯಾವ ಯಾವ ಪ್ರಮಾಣದಲ್ಲಿ ಪೌಷ್ಟಿಕಾಂಶಗಳಿರುತ್ತವೆ ಎಂಬುದನ್ನು ವಿವೇಚಿಸಿದ್ದಾರೆ. ಮಾಂಸಾಹಾರ ಮತ್ತು ಶಾಕಾಹಾರದ ಆಹಾರ ಘಟಕಗಳನ್ನು ತುಲನ ಮಾಡಿದ್ದಾರೆ. ಈ ಮೂಲಕ ಆಹಾರದ ಅರಿವನ್ನುಂಟುಮಾಡುವ ಪ್ರಯತ್ನವನ್ನು ಮಾಡಿದ್ದಾರೆ.

ಆಹಾರ ಘಟಕಗಳ ವಿವರಣೆ, ಅದರ ಮೂಲಗಳು, ಪ್ರೋಟೀನುಗಳ ಪ್ರಾಮುಖ್ಯತೆಯ ವಿವರಗಳು, ಆಹಾರದಲ್ಲಿನ ಮುಖ್ಯ ಮೂಲ ವಸ್ತುಗಳ ಹೋಲಿಕೆ, ಆಹಾರಗಳಲ್ಲಿರುವ ಸಂತೃಪ್ತ ಮತ್ತು ಅಸಂತೃಪ್ತ ಫ್ಯಾಟಿ ಆಮ್ಲಗಳ ಪ್ರಮಾಣ, ಕೊಬ್ಬು-ಎಣ್ಣೆಗಳ ಪ್ರಮಾಣ, ಕೋಷ್ಟಕಗಳು ಮತ್ತು ವಿವರಣೆ ಓದುಗರ ಮನನಕ್ಕೆ ಸಹಾಯಕವಾಗಿವೆ.

ವಿಶ್ವದ ಶ್ರೀಮಂತ ರಾಷ್ಟ್ರಗಳ ಜನತೆ ಮಾಂಸಾಹಾರದ ಸೇವನೆಯಿಂದ ಹಲವಾರು ರೋಗಗಳಿಗೆ ತುತ್ತಾಗುತ್ತಿರುವುದನ್ನು ಉಲ್ಲೇಖಿಸಿದ್ದಾರೆ. ಬೊಜ್ಜು, ಹೃದಯಾಘಾತ, ಪಾರ್ಶ್ವವಾಯು, ಪಿತ್ತಕೋಶದ ಕಾಯಿಲೆಗಳು ಕರುಳಿನ ಕ್ಯಾನ್ಸರ್ ಇತ್ಯಾದಿ ರೋಗಗಳು ಅಲ್ಲಿಯ ಜನತೆಯನ್ನು ಪೀಡಿಸುತ್ತಿವೆ. ಇದಕ್ಕೆ ಮಾಂಸಾಹಾರ ಸೇವನೆಯೇ ಕಾರಣ ಎಂಬ ಅರಿವು ಮೂಡಿಸುವ ಸಂಗತಿಗಳನ್ನು ಲೇಖಕರು ಕೊಟ್ಟಿದ್ದಾರೆ. ತಮ್ಮ ಆಹಾರ ಪದ್ಧತಿಯಲ್ಲಿ ಬದಲಾವಣೆ ಮಾಡಿಕೊಳ್ಳುವಂತೆ ತಮ್ಮ ಜನತೆಗೆ ಕರೆ ಇತ್ತಿರುವ ಶ್ರೀಮಂತ ರಾಷ್ಟ್ರಗಳ ಔಚಿತ್ಯವನ್ನು ಇಲ್ಲಿ ಗಮನಿಸಬಹುದು.

ಮಾಂಸಾಹಾರ ಸೇವಿಸುವುದು ಇಲ್ಲವೇ ಬಹಿಷ್ಕರಿಸುವುದು ವ್ಯಕ್ತಿಗತವಾದ ವಿಷಯ. ಆದರೆ ಆಹಾರದ ಬಗೆಗೆ, ವೈದ್ಯಕೀಯ, ವೈಜ್ಞಾನಿಕ ಮಾಹಿತಿ ದೊರೆತಲ್ಲಿ ಆಹಾರ ಸೇವನೆಯ ಬಗ್ಗೆ ಬೌದ್ಧಿಕ ನಿರ್ಣಯ ತೆಗೆದುಕೊಳ್ಳಲು ಸಾಧ್ಯ. ನೀವು ಶಾಕಾಹಾರಿಗಳಾಗಿದ್ದಲ್ಲಿ, ನಿಮ್ಮ ಆರೋಗ್ಯವರ್ಧನೆಗಾಗಿ ಮಾಂಸಾಹಾರ ಏಕೆ ಅವಶ್ಯವಿಲ್ಲ ಎಂದು ವೈಜ್ಞಾನಿಕ ಮಾಹಿತಿಗಳಿಂದ ನಿಮಗೆ ತೋರಿಸಿಕೊಟ್ಟು, ನಿಮ್ಮ ಆಹಾರ ಪದ್ಧತಿಯ ಬಗೆಗೆ ನಿಮ್ಮಲ್ಲಿ ಹೆಚ್ಚಿನ ಭರವಸೆ ಮೂಡಿಸುವುದೇ ಮೂಲ ಉದ್ದೇಶ ಎಂಬ ಲೇಖಕರ ನುಡಿ ಇಂದು ಪ್ರಸ್ತುತವಾದುದು.

ಕೆ. ಪಿ. ಸ್ವಾಮಿ ಅವರ ಮಾಂಸ ಮತ್ತು ಶಾಕಾಹಾರಗಳ ಆಹಾರವನ್ನೊಳಗೊಂಡ, ವರ್ಣ ಚಿತ್ರಗಳ ರಕ್ಷಾಪುಟಗಳು ಕೃತಿಯ ಅಂದವನ್ನು ಹೆಚ್ಚಿಸುವಂತೆ ಮಾಡಿವೆ.

* * * * * *

ಗುಲಾಬೊ ಇಲಿಯಮ್ಮ ಮತ್ತು ಅವಳ ಬಲೂನುಗಳು—ಲೇಖಕರು: ಖದ್ಸಿಯಾರ್ಷ್ಯದಿ; ಅನುವಾದಕರು: ಎಚ್. ನಾಗರಾಜಪ್ಪ; ಪ್ರಕಾಶಕರು: ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಎ-೫, ಗ್ರೀನ್ ಪಾರ್ಕ್, ಹೊಸದೆಹಲಿ-೧೧೦೦೧೬; ಮೊದಲನೆಯ ಮುದ್ರಣ ೧೯೯೫; ಪುಟ: ೨೪; ಬೆಲೆ: ೮-೫೦ ರೂ.

ಮಕ್ಕಳಿಗೆ ಪ್ರಾಣಿಗಳ ಕಥೆಗಳೆಂದರೆ ತುಂಬಾ ಅಚ್ಚುಮೆಚ್ಚು. ಈ ಕಥೆಗಳಲ್ಲಿ ಪ್ರಾಣಿಗಳು ಮಾತನಾಡುತ್ತವೆ. ಮಕ್ಕಳಿಗೆ ಖುಷಿಯನ್ನು ಕೊಡುತ್ತವೆ. ಅಂತಹ ಕಥೆ

ಗಳಲ್ಲಿ "ಗುಲಾಬೊ ಇಲಿಯಮ್ಮ ಮತ್ತು ಅವಳ ಬಲೂನುಗಳು" ಒಂದು. ಇಲ್ಲಿಯ ಇಲಿಗಳು ಬಣ್ಣಬಣ್ಣದ ಉಡುಪುಗಳನ್ನು ಧರಿಸುತ್ತವೆ. ಮನುಷ್ಯರೂಪದ ಬದುಕನ್ನು ಅನುಕರಣೆ ಮಾಡುತ್ತಲೇ ಮಕ್ಕಳ ಮನಸ್ಸನ್ನು ಸೆಳೆಯುತ್ತವೆ.

ಗುಲಾಬೊ ಹೆಂಗಸು ಒಂದು ಪುಟ್ಟ ಅಂಗಡಿಯನ್ನಿಟ್ಟಿದ್ದಾಳೆ. ಮಕ್ಕಳಿಗೆ ಬೇಕಾಗುವ ಆಟಿಕೆಗಳು ಸಿಹಿತಿಂಡಿಗಳೂ ಅವಳ ಅಂಗಡಿಯಲ್ಲಿವೆ, ದೊಡ್ಡವರಿಗೂ ಬೇಕಾಗುವ ವಸ್ತುಗಳೂ ಅಲ್ಲಿವೆ.

ಗುಲಾಬೊ ತನ್ನ ಅಂಗಡಿಗೆ ಬೇಕಾಗುವ ಸಾಮಾನುಗಳನ್ನು ಸಂತೆಯಿಂದ ತರುತ್ತಾಳೆ. ಅಲ್ಲಿಂದಲೇ ಕೆಲವು ಬಲೂನುಗಳನ್ನು ತರುತ್ತಾಳೆ. ಮನೆಗೆ ಬಂದಾಗ ಬಲೂನಿನ ಒಳಗಡೆಯಿಂದ ಬಂದ ಶಬ್ಧವನ್ನಾಲಿಸಿ, ಅದರೊಳಗಿದ್ದ ಕಿನ್ನರಮಗುವನ್ನು ರಕ್ಷಿಸುತ್ತಾಳೆ, ಉಪಚರಿಸುತ್ತಾಳೆ. ಅದರ ಲೋಕಕ್ಕೆ ಕಳುಹಿಸಿಕೊಡುವ ಆಶ್ವಾಸನೆಯನ್ನು ಕೊಡುತ್ತಾಳೆ. ಗುಲಾಬೊ ಮಾತೃಹೃದಯದ ಪ್ರೀತಿಯ ಮಡಿಲಿನಲ್ಲಿ ಕಿನ್ನರ ಮಗು ನಿಶ್ಚಿಂತೆಯಿಂದ ಆ ರಾತ್ರಿಯನ್ನು ಕಳೆಯುತ್ತದೆ.

ಮರುದಿನ ಗುಲಾಬೊ ಅಂಗಡಿಗೆ ಬಂದ ಚೂಚೂ ಗುಬ್ಬಪ್ಪನು, ತನ್ನ ಚಿಕ್ಕಪ್ಪನ ಮಗ ಚಿರ್‌ಚಿರ್‌ನೊಂದಿಗೆ ಮಗುವನ್ನು ಊರಿಗೆ ಕಳುಹಿಸಲು ಸಹಾಯಮಾಡುತ್ತಾನೆ.

ಗುಲಾಬೊ ಮಾತೃ ಹೃದಯ, ಭೂರೆಪ್ಪನ ದಯಾಳುತನ ಮತ್ತು ಗುಬ್ಬಪ್ಪನ ಸಹಾಯಗುಣಗಳು ಮಕ್ಕಳಿಗೆ ಬೋಧಪ್ರದವಾಗಿವೆ. ಮಕ್ಕಳಿಗೆ ಆಕರ್ಷಕವೆನಿಸಬಹುದಾದ ಬಣ್ಣದ ಉಡುಪುಗಳನ್ನು ಇಲಿಗಳ ಪಾತ್ರಗಳು, ಆಟಿಕೆಗಳು, ಸಿಹಿತಿಂಡಿಗಳು ಅರ್ಥಪೂರ್ಣವಾಗಿ ಬಂದಿವೆ.

ಗುಲಾಬೊಳ ಅಂಗಡಿ, ಅಂಗಡಿಗೆ ಬರುತ್ತಿರುವ ಗಿರಾಕಿಗಳು, ಭೂರೆಪ್ಪನು ಸಂತೆಗೆ ಹೊರಡಲು ತನ್ನ ಗಾಡಿಯೊಂದಿಗೆ ಬರುತ್ತಿರುವುದು, ದಾರಿಯಲ್ಲಿ ಭೂರೆಪ್ಪನಿಗಾಗಿ ಕಾಯುತ್ತಿರುವ ಪ್ರಯಾಣಿಕರು, ಸಂತೆಯ ದೃಶ್ಯ, ಪ್ರಯಾಣಿಕರಿಂದ ತುಂಬಿಹೋದ ಕಿನ್ನರಮಗು, ಬೆಚ್ಚಗೆ ಮಲಗಿರುವ ಪುಟ್ಟ ಕಿನ್ನರಮಗು, ಮಗುವನ್ನು ಉಪಚರಿಸುತ್ತಿರುವ ಗುಲಾಬೊ ಗುಬ್ಬಪ್ಪನ ಆಗಮನ ಮತ್ತು ಕಿನ್ನರ ಮಗುವಿನ ನಿರ್ಗಮನ ಇತ್ಯಾದಿಯಾಗಿ ನಿರೇನ್‌ಸೇನ್‌ಗುಪ್ತಾ ಅವರ ಹದಿಮೂರು ಚಿತ್ರಗಳು ಮಕ್ಕಳನ್ನು ರಂಜಿಸುತ್ತವೆ. ವರ್ಣಚಿತ್ರಗಳಿಂದ ಕೂಡಿದ ರಕ್ಷಾಪುಟಗಳು ಆಕರ್ಷಕವಾಗಿವೆ.

* * * * * *

ತಾರಾಲೋಕಕ್ಕೆ ಹಾರುವೆನು—ಲೇಖಕರು: ಪ. ಗು. ಸಿದ್ದಾಪುರ; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್, ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧; ಮೊದಲ ಮುದ್ರಣ ೧೯೯೫; ಪುಟ: ೪೦; ಬೆಲೆ: ೧೨ ರೂ.

ಶ್ರೀ ಪ. ಗು. ಸಿದ್ದಾಪುರ ಅವರ 'ತಾರಾಲೋಕಕ್ಕೆ ಹಾರುವೆನು' ಮಕ್ಕಳಿಗಾಗಿಯೆ ಬರೆದ ಕಿರುಪುಸ್ತಕ. ವಿವಿಧ ವಿಷಯ ವ್ಯಾಪ್ತಿಯ ೨೦ ಪದ್ಯಗಳು ಇದರಲ್ಲಿವೆ.

ಈ ಪದ್ಯಗಳನ್ನು ವಿವೇಚಿಸುವಾಗ, ಎಂಟು ಪ್ರಧಾನ ಗುಂಪುಗಳನ್ನಾಗಿ ಮಾಡಿಕೊಂಡು ಮುಂದುವರೆಯುವುದು ಹೆಚ್ಚು ಸೂಕ್ತ. ಈ ಅರಿವು ಲೇಖಕರಿಗೂ ಇರುವುದನ್ನು ಗಮನಿಸಬಹುದು.

ಕಾಲ ಮಹಿಮೆ, ಮುಂಗಾರು, ಮಧುರ ಜೇನು, ಕುಷ್ಠ ಅಲ್ಲ ಕೆಟ್ಟ ಶಾಪ, ಯಾರು ಬರೆದ ಚಿತ್ರವು, ಪಣತೊಟ್ಟ ಪ್ರಾಣಿಗಳು, ಯುಗಾದಿ. ನಮ್ಮ ಧ್ವಜ. ದೇಶ ಸೇವೆ ಈಶ ಸೇವೆ, ಪಂಜರದ ಗಿಳಿ ಈ ಹತ್ತು ಪದ್ಯಗಳನ್ನು ಮೊದಲ ವರ್ಗದಲ್ಲಿ ಪರಿಗಣಿಸಬಹುದು. ಸ್ವಲ್ಪ ಪ್ರೌಢ ವಿಷಯುಗಳನ್ನು ಒಳಗೊಂಡ ಪದ್ಯಗಳಿವೆ. ವರ್ಣನೆ ಮತ್ತು ನೀತಿಯನ್ನು ಒಳಗೊಂಡ ವಿಷಯುಗಳನ್ನು ಲೇಖಕರೇ ನಿರೂಪಿಸಿರುವುದು ಸೂಕ್ತವಾಗಿದೆ.

'ಕಾಲಮಹಿಮೆ' ಪದ್ಯದಲ್ಲಿ ಪ್ರಕೃತಿಯ ವಿವಿಧ ರೂಪಗಳನ್ನು ವರ್ಣಿಸಲಾಗಿದೆ. ಮಧುಮಾಸ, ವೈಶಾಖ, ಆಷಾಢ, ಶ್ರಾವಣ ಮತ್ತು ಮಾರ್ಗಶಿರ ಮಾಸಗಳನ್ನು ಕೇಂದ್ರವನ್ನಾಗಿಸಿಕೊಂಡು, ಅವುಗಳ ಪ್ರಾಕೃತಿಕ ಸ್ವರೂಪವನ್ನು ತಿಳಿಸಿಕೊಡುವ ಪ್ರಯತ್ನವನ್ನೂ ಮಾಡಿದ್ದಾರೆ. 'ಮುಂಗಾರು ಮಳೆರಾಯ' ಇಂತಹುದೇ ಇನ್ನೊಂದು ಪದ್ಯ. ನೀರಿನಲ್ಲಿ ಆಟವಾಡುವುದೆಂದರೆ ಮಕ್ಕಳಿಗೆ ಎಲ್ಲಿಲ್ಲದ ಉತ್ಸಾಹ. ಮಳೆ ಮತ್ತು ಮಕ್ಕಳ ಉತ್ಸಾಹವನ್ನು ಈ ಪದ್ಯದಲ್ಲಿ ಕಾಣಬಹುದು. ಪಂಪ, ರನ್ನ, ರಾಘವಾಂಕರಾದಿಯಾಗಿ ಅನೇಕ ಮಹನೀಯರಿಂದ ಸಮೃದ್ಧಿಯನ್ನು ಪಡೆದ ಕನ್ನಡ ನಿಜಕ್ಕೂ ಮಧುರ ಜೇನು' ಕುಷ್ಠ. ಅದೊಂದು, ರೋಗ ಅಲ್ಲ ಎಂಬ ನಿಜವಾದ ಅರಿವು ಮೂಡಿಸುವ ಪ್ರಯತ್ನ 'ಕುಷ್ಠ ಅಲ್ಲ, ಕೆಟ್ಟ ಶಾಪ' ಪದ್ಯದ್ದು.

ಇವುಗಳು ಮೊದಲ ವರ್ಗದ ಕೆಲವು ಮಾದರಿಗಳು ಮಾತ್ರ. ಇಂತಹ ಸ್ವಲ್ಪ ಕ್ಲಿಷ್ಟವಾದ ವಿಷಯುಗಳನ್ನು ಸರಳವಾದ ರೂಪದಲ್ಲಿ ತಿಳಿಸಿಕೊಡುವ ಪ್ರಯತ್ನವನ್ನು ಉಳಿದ ಪದ್ಯಗಳಲ್ಲಿಯೂ ಕಾಣಬಹುದು.

ಎರಡನೆ ವಿಭಾಗೀಯ ಕ್ರಮದಲ್ಲಿ ಸ್ವತಃ ಮಗು ತನ್ನ ಅನುಭವಗಳನ್ನು ನಿರೂಪಿಸುತ್ತ ಹೋಗುತ್ತದೆ. ತಾರಾಲೋಕಕೆ ಹಾರುವೆನು, ಕೊಕ್ಕರೆ, ನಾವೆಲ್ಲಾ ಒಂದೆ, ಚಿಕ್ಕವರಿದ್ದಾಗ, ಚಂದ್ರಯಾನ, ಅಂತರವೇಕೆ. ಅಕ್ಕನ ಮನೆ, ಕನಸು, ಆಟಿಕೆ ಸಂಪತ್ತು, ಬಣ್ಣದ ಬೋರಂಗಿ ಈ ವಿಭಾಗದ ಹತ್ತು ಪದ್ಯಗಳು.

ತಾರಾಲೋಕಕೆ ಹಾರುವೆನು ಮತ್ತು ಚಂದ್ರಯಾನ ಪದ್ಯಗಳ ಹೊರತಾಗಿ, ಉಳಿದ ಪದ್ಯಗಳ ವಸ್ತುಗಳು ಮಗುವಿನ ಅನುಭವ ವ್ಯಾಪ್ತಿಯಲ್ಲಿ ಬರುತ್ತವೆ. ಈ ಪದ್ಯಗಳ ವಿಷಯುಗಳು ಮಕ್ಕಳ ಮನಸ್ಸಿಗೆ ತಟ್ಟನೆ ಸುಲಭ ಗ್ರಾಹ್ಯವಾಗುತ್ತವೆ.

ಎನ್. ಆರ್. ಬಡಿಗೇರ್ ಅವರ ರಕ್ಷಾಪುಟದ ಮತ್ತು ಒಳಪುಟಗಳ ಚಿತ್ರಗಳು, ಮಕ್ಕಳ ಓದುವ ಮನಸ್ಸಿಗೆ ಆಸಕ್ತಿಯನ್ನು ತುಂಬುತ್ತವೆ. ಮುದ್ರಣ ಮತ್ತು ಒಳ್ಳೆಯ ಕಾಗದದ ಬಳಕೆ ಕೃತಿಯ ಅಂದಕ್ಕೆ ಕಾರಣವಾಗಿವೆ.

ಬಣ್ಣದ ಚಿಲುಮೆ—ಲೇಖಕರು: ಪಳಕಳ ಸೀತಾರಾಮಭಟ್ಟ; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧; ಮೊದಲ ಮುದ್ರಣ ೧೯೯೫; ಪುಟ: ೪೦; ಬೆಲೆ: ೧೨ ರೂ.

ಮಕ್ಕಳಿಗಾಗಿ ಬರೆದ ಸಚಿತ್ರ ಪುಸ್ತಕಗಳ ಪರಿಚಯ

ಶ್ರೀ ಪಳಕಳ ಸೀತಾರಾಮಭಟ್ಟ ಅವರು ಬರೆದಿರುವ 'ಬಣ್ಣದ ಚಿಲುಮೆ' ಮಕ್ಕಳ ೨೫ ಪದ್ಯಗಳನ್ನು ಒಳಗೊಂಡ ಒಂದು ಚಿಕ್ಕ ಕೃತಿ. ಮಕ್ಕಳ ಸಾಹಿತ್ಯ ಪ್ರವೇಶಿಕೆಗೆ ಅನುಕೂಲವಾಗುವ ಮತ್ತು ಅಭಿರುಚಿಯನ್ನು ಬೆಳೆಸುವ ದಿಸೆಯಲ್ಲಿ ಸಹಾಯಕವಾಗಿವೆ. ಮಕ್ಕಳ ಅನುಭವವ್ಯಾಪ್ತಿಯ ವಿಷಯವಸ್ತುಗಳಿರುವ ಪದ್ಯಗಳು ಅವರಿಗೆ ಸುಲಭಗ್ರಾಹ್ಯವಾಗಿವೆ.

ಪಕ್ಷಪಾತ ಏಕೆ? ಮೈಸೂರಿನ ವೃಂದಾವನ, ಚಂದಮಾಮ, ಮೊಟ್ಟೆಯಿಂದ ಚಿಟ್ಟೆ ಇತ್ಯಾದಿ. ಕೆಲವು ಪದ್ಯಗಳು ಉತ್ತಮವಾಗಿದ್ದು, ಕಥೆ ಮತ್ತು ನೀತಿಯನ್ನು ಸರಳವಾಗಿ ಬೋಧಿಸುತ್ತವೆ. ಇವುಗಳಲ್ಲಿ ಗಣನಿಯಮವನ್ನು ನಿಯತವಾಗಿ ಪಾಲಿಸಲಾಗಿದ್ದು, ಅದಕ್ಕೆ ತಕ್ಕಂತೆ ಭಾವನೆಗಳೂ ಸಹ ಚಕ ಚಕನೇ ಮೂಡಿಬರುತ್ತವೆ.

ಲೇಖಕರು ನಾಲ್ಕುಮಾತ್ರೆಗಳ ಗಣ ಪ್ರಧಾನ ನಿಯಮವನ್ನು ಅಳವಡಿಸಿಕೊಂಡಿದ್ದರೂ, ಅದನ್ನು ನಿಯತವಾಗಿ ಪಾಲಿಸಿಲ್ಲ. ಆದರೆ ಕೆಲವು ಕಡೆ ಮೂರು ಮಾತ್ರೆಗಣಗಳ ನಿಯಮವನ್ನು ನಿಯತವಾಗಿ ಪಾಲಿಸಿದ್ದಾರೆ. ಎಲ್ಲಾ ಪದ್ಯಗಳು ನಾಲ್ಕು ಪಾದಗಳನ್ನು ಒಳಗೊಂಡಿದ್ದು, ಸಾಮಾನ್ಯವಾಗಿ ಅಂತ್ಯ ಪ್ರಾಸವನ್ನು ಉಳಿಸಿಕೊಂಡಿದ್ದಾರೆ.

ಪ್ರತಿಯೊಂದು ಪದ್ಯದಲ್ಲಿಯೂ ಅದರ ಭಾವಾರ್ಥವನ್ನು ಧ್ವನಿಸುವ ರೋಹಿಣಿ ಅವರ ವ್ಯಂಗ್ಯ ಚಿತ್ರಗಳು ಮಕ್ಕಳ ಮನಸ್ಸಿಗೆ ಖುಷಿಯನ್ನು ತಂದುಕೊಡುತ್ತವೆ. ಬಣ್ಣದ ವ್ಯಂಗ್ಯ ಚಿತ್ರಗಳನ್ನು ಒಳಗೊಂಡ ರಕ್ಷಾಪುಟಗಳು ಆಕರ್ಷಕವಾಗಿವೆ.

ರಂಗಧಾಮಯ್ಯ

* * * * * *

'ನನ್ನ ಆತ್ಮಕಥೆ'—ಇನ್ಸುಲಿನ್—ಲೇಖಕರು: ಡಾ|| ಎನ್. ಎಸ್. ಲೀಲಾ; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧; ಬೆಲೆ: ೯ ರೂ.

ಡಾ|| ಎನ್. ಎಸ್. ಲೀಲಾರವರ ಈ ಹೊತ್ತಗೆ ಉಪಯುಕ್ತ ಕೈದೀವಿಗೆ. ವೈದ್ಯಕೀಯ ವಿಷಯವನ್ನು ಸರಳ ಹಾಗೂ ಸುಲಭವಾಗಿ ಆತ್ಮಕಥಾ ಶೈಲಿಯಲ್ಲಿ ಬರೆದು ಅದನ್ನು ತಮ್ಮ ಅನುಭವದ ಚೌಕಟ್ಟಿನಲ್ಲಿ ಸುಂದರವಾಗಿ ಜೋಡಿಸಲಾಗಿದೆ. ಜನ

ಸಾಮಾನ್ಯರಿಗೂ ಅರ್ಥವಾಗುವಂತೆ ಇನ್ಸುಲಿನ್ ಹುಟ್ಟು, ಪರಿಚಯ, ಆವಶ್ಯಕತೆ, ಕಾರ್ಯಚಟುವಟಿಕೆಗಳು ಮುಂತಾದುವುಗಳ ಬಗ್ಗೆ ಚಿಕ್ಕದಾಗಿ, ಚೊಕ್ಕವಾಗಿ ತಿಳಿಸಲಾಗಿದೆ.

ಮಾನವ ಶರೀರ ಒಂದು ಆಶ್ಚರ್ಯಕರವಾದ ಯಂತ್ರ. ಯಂತ್ರದ ಎಲ್ಲಾ ಭಾಗಗಳೂ ಸರಿಯಾಗಿ ಕೆಲಸ ಮಾಡುತ್ತಿದ್ದರೆ, ಈ ಶರೀರಕ್ಕೆ ಯಾವ ಸಮಸ್ಯೆಯೂ ಇರುವುದಿಲ್ಲ. ಈ ಕ್ರಮದಲ್ಲಿ ಸ್ವಲ್ಪ ವ್ಯತ್ಯಯವಾದರೂ ಸಾಕಷ್ಟು ತೊಂದರೆಗಳಿಂದ ಶರೀರ ಬಳಲಬೇಕಾಗುತ್ತದೆ. ಇಂತಹ ತೊಂದರೆಗಳಲ್ಲೊಂದಾದ ಮಧುಮೇಹ ಹಾಗೂ ಅದರ ಅವಿಭಾಜ್ಯ ಅಂಗ ಇನ್ಸುಲಿನ್, ನಡೆದು ಬಂದ ದಾರಿಯನ್ನು ಡಾ|| ಲೀಲಾರವರು ಅಚ್ಚುಕಟ್ಟಾಗಿ ವಿವರಿಸಿದ್ದಾರೆ.

ಅಸ್ತಿತ್ವದ ಪರಿಚಯಕ್ಕೆ ಮೊದಲಿನಿಂದಲೇ ಕಾರ್ಯಚಟುವಟಿಕೆಯಲ್ಲಿದ್ದ ಇನ್ಸುಲಿನ್‌ಗೆ ಒಬ್ಬ ವಿಜ್ಞಾನಿ ನಾಮಕರಣ ಮಾಡಿದರೆ ಇನ್ನೊಬ್ಬ ಅದನ್ನು ಸಂಶೋಧಿಸಿ ನೊಬೆಲ್ ಪ್ರಶಸ್ತಿ ಪಡೆದ. ೭೩ ವರ್ಷಗಳ ಹಿಂದೆ ಇದರ ಪ್ರಥಮ ಪ್ರಯೋಗವಾದ ನಂತರ, ವಿಜ್ಞಾನಿಗಳು ಇನ್ಸುಲಿನ್‌ನ ಶುದ್ಧೀಕರಣ, ಉಪಯೋಗಿಸಬೇಕಾದ ವಿಧಾನ, ಪ್ರಮಾಣ, ಅದರ ಕಾರ್ಯಚಟುವಟಿಕೆ ಮುಂತಾದವಕ್ಕೆ ಗಮನ ಕೊಟ್ಟಿದ್ದನ್ನೂ, ಆ ದಿಶೆಯಲ್ಲಿ ಅವರ ಪ್ರಗತಿಯನ್ನೂ ಸೂಚಿಸಲಾಗಿದೆ.

ಶರೀರದಲ್ಲಿ ಇನ್ಸುಲಿನ್ ಸ್ರವನ ನಿಗದಿತ ಪ್ರಮಾಣಕ್ಕಿಂತ ಕಡಿಮೆಯಾದಾಗ ಅದನ್ನು ತುಂಬಿಕೊಡಬೇಕಾಗುವುದು. ಇದನ್ನು ಹಸು, ಹಂದಿ ಮೊದಲಾದ ಪ್ರಾಣಿಗಳಲ್ಲದೆ ಮಾನವನಿಂದಲೂ ಸಂಗ್ರಹಿಸಬಹುದೆಂದು ತಿಳಿಸಿಕೊಡಲಾಗಿದೆ. ಏಕಾಣುಜೀವಿ ಬ್ಯಾಕ್ಟೀರಿಯಾದಿಂದಲೂ ಇದನ್ನು ಉತ್ಪತ್ತಿ ಮಾಡಬಹುದಾಗಿರುವುದು ಮಧುಮೇಹಿಗಳಿಗೆ ಒಂದು ವರದಾನ. ಇನ್ಸುಲಿನನ್ನು ಶರೀರಕ್ಕೆ ಪೂರಕವಾಗಿ ಚುಚ್ಚುಮದ್ದಿನ ಮೂಲಕವೇ ಕೊಡಬೇಕಾಗುತ್ತಿತ್ತು. ಇನ್ಸುಲಿನ್‌ಗೆ ಹರಳು, ಗುಳಿಗೆಗಳ ರೂಪ ಕೊಟ್ಟು ಅದರ ಉಪಯೋಗದ ವಿಧಾನವನ್ನು ಸರಳೀಗೊಳಿಸಿದುದರ ಮಾಹಿತಿ ಇದೆ.

ಈ ದಿಶೆಯಲ್ಲಿ ಇನ್ನೂ ಮುಂದುವರಿದು ಸಂಯುಕ್ತ ಅಮೆರಿಕಾದಲ್ಲಿ ೨೭ ಮಂದಿ ಮಧುಮೇಹಿಗಳ ಮಾಂಸಲಿಯಲ್ಲಿ (ಪ್ಯಾಂಕ್ರೀಸ್) ಇನ್ಸುಲಿನ್ ತಯಾರಿಸುವ ಜೀವಕೋಶಗಳನ್ನು ಅಳವಡಿಸಿದ ಬಗ್ಗೆಯೂ ಮಿಯಾಮಿ ವಿಶ್ವವಿದ್ಯಾಲಯದಲ್ಲಿ ನಡೆಸಿದ ಇಂಥ ಒಂದು ಶಸ್ತ್ರಚಿಕಿತ್ಸೆಯಲ್ಲಿ ಓರ್ವ ಮಹಿಳೆ ಗುಣಹೊಂದಿದ ದಾಖಲೆಯೂ ಇದೆ. ಕಸಿವಿಧಾನ ಮಧುಮೇಹಿಗಳಿಗೊಂದು ಆಶಾಕಿರಣವಾಗಿದೆ.

ಮಾಂಸಲಿಯ ಸಹಜಕ್ರಿಯೆಯಂತೆಯೇ ನಡೆಯಬಹುದಾದ ಇನ್ಸುಲಿನ್ ಪೂರಣ ಕ್ರಮಗಳೂ ಬಳಕೆಗೆ ಬಂದಿರುವುದು ಪ್ರಶಂಸನೀಯ. ಈ ಸಾಧನಕ್ಕೂ ಮಿಗಿಲಾದ ಮತ್ತೊಂದು ಸಾಧನವೆಂದರೆ ಎಲೆಕ್ಟ್ರಾನಿಕ್ ಬಳಕೆಯ ಒಂದು ಸಣ್ಣ ಇನ್ಸುಲಿನ್ ಪಂಪು. ಇದನ್ನು ಸೊಂಟಕ್ಕೆ ಸುತ್ತಿ ಇಡಲಾಗಿದ್ದು, ಅದು ಚರ್ಮದಡಿ ಹನಿಹನಿಯಾಗಿ ಇನ್ಸುಲಿನ್ ದೇಹದೊಳಕ್ಕೆ ಸೇರಿಸುತ್ತದೆ.

ಸಂಶೋಧನೆಗಳ ಪರಿಣಾಮವಾಗಿ ಮಾನವ ಇನ್ಸುಲಿನ್ ತಯಾರಿಕೆಯಲ್ಲಿ


ಅನೇಕ ಔಷಧ ಕಂಪನಿಗಳು ಮುತುವರ್ಜಿ ವಹಿಸಿವೆ.

ಕೆಲವು ಭಾರತೀಯ ತಳಿ ತಂತ್ರಜ್ಞರು, ಬ್ಯಾಕ್ಟೀರಿಯ ಬದಲಿಗೆ ಹುದುಗೇಳಿಸುವುದಕ್ಕೆ ಕಾರಣವಾದ ಯೀಸ್ಟ್ ಬಳಸಿ ಇನ್ಸುಲಿನ್ ತಯಾರಿಸಬಹುದೆಂದು ತೋರಿಸಿ ಕೊಟ್ಟಿರುವುದು ಹೆಮ್ಮೆಯ ಸಂಗತಿ. ಸುಲಭ ಬೆಲೆಗೆ "ಹ್ಯೂಮ್ಯುಲಿನ್" ದೊರಕಬಹುದೆಂಬ ಈ ಲೇಖಕಿಯ ಭರವಸೆ ಈಡೇರಲಿ!

'ಇನ್ಸುಲಿನ್' ನಡೆದು ಬಂದ ದಾರಿಯಲ್ಲಿ ಮಹತ್ವಪೂರ್ಣ ಪಾತ್ರವನ್ನು ವಹಿಸಿದ, ಮೂವರು ನೋಬಲ್ ಪ್ರಶಸ್ತಿ ವಿಜೇತರೂ ಸೇರಿದಂತೆ, ಹದಿನೈದು ಮಂದಿ ವಿಜ್ಞಾನಿಗಳ ಕೊಡುಗೆಗಳ ಬಗ್ಗೆ ತಿಳಿಸಲಾಗಿದೆ.

ಆತ್ಮಕಥಾ ಶೈಲಿಯಲ್ಲಿ, ಜನಸಾಮಾನ್ಯರಿಗೆ 'ಇನ್ಸುಲಿನ್' ಬಗ್ಗೆ ಇಷ್ಟು ವಿವರವಾದ ಅತ್ಯಾಧುನಿಕ ಮಾಹಿತಿ ಕೊಟ್ಟ ಡಾ|| ಲೀಲಾರವರ ಈ ಕೃತಿ ಸಾರ್ಥಕವಾಗಿದೆ.

ಟಿ. ಪಿ. ಅನ್ನಪೂರ್ಣಮ್ಮ



ಒತ್ತೆ ಇಟ್ಟು ಪರಭಾಷೆಗೆ ಮನವ
ಪಡೆದಿಹೆವೇ ಸೊಗ ಬಾಳ್ವೆಯ ಋಣವ
ಕನ್ನಡದೀ ಜನಕಿಲ್ಲವೆ ಕಲಿತನ
ಆಳಾದವರರಸಾಗುವ ಜತನ

—ಪುತಿನ.

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

೧. ಜಿ. ಟಿ. ನಾರಾಯಣರಾವ್, ನಂ. ೮, 'ಅತ್ರಿ' ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತೀಪುರ, ಮೈಸೂರು–೫೭೦ ೦೦೯

೨. ಚಂದ್ರಶೇಖರಾರಾಧ್ಯ, ಎಂ. ೧೪೫, 'ಇಂಚರ', ಎಂ. ಬ್ಲಾಕ್, ೨ನೇ ಹಂತ
ಕುವೆಂಪುನಗರ, ಮೈಸೂರು–೫೭೦ ೦೨೩

೩. ಡಾ|| ಆರ್. ರಾಮಕೃಷ್ಣ, ಉಪನ್ಯಾಸಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

೪. ಎಸ್. ರೋಹಿಣಿಶರ್ಮ
ತ್ಯಾಗರಾಜ ಬಡಾವಣೆ, ಅಜ್ಜಂಪುರ, ತರಿಕೆರೆ–೫೭೭ ೫೪೭

೫. ಟಿ. ಎಸ್. ಲಲಿತ, ನಂ. ೭೦೨, ಮೊದಲನೆ ಮಹಡಿ, ೧೭ ನೇ ಮೇನ್
ಸರಸ್ವತೀಪುರ, ಮೈಸೂರು–೫೭೦ ೦೦೯

೬. ಜಿ. ಟಿ. ರಾಘವೇಂದ್ರ, 'ದ್ವಾರಕಾ' ಶಾಲಾ ರಸ್ತೆ, ಮಡಿಕೇರಿ–೫೭೧ ೨೦೧

೭. ಟಿ. ವಿ. ಅನ್ನಪೂರ್ಣಮ್ಮ, ಎಂ.ಐ.ಜಿ–೫, ಶ್ರೀಕರ, ಕುವೆಂಪುನಗರ
ಮೈಸೂರು–೫೭೦ ೦೨೩

೮. ಎಂ. ಎಸ್. ಲಕ್ಷ್ಮಣಾಚಾರ್, ೨೫೪, ವಿಶ್ವರೂಪ (ಮಹಡಿ)
೫ನೇ ಮುಖ್ಯ ರಸ್ತೆ, ೧೪ನೇ ಅಡ್ಡ ರಸ್ತೆ, ಜಯನಗರ, ಮೈಸೂರು–೫೭೦ ೦೧೪

೯. ಸಿ. ನಾಗಣ್ಣ, ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಮಹಾರಾಜ ಕಾಲೇಜು, ಮೈಸೂರು

೧೦. ಸಾತನೂರು ದೇವರಾಜ್, ೯೯೨, ೯ನೇ ಮುಖ್ಯರಸ್ತೆ
ಮೊದಲನೆಯ ಅಡ್ಡ ರಸ್ತೆ, ವಿವೇಕಾನಂದ ನಗರ, ಮೈಸೂರು–೫೭೦ ೦೦೭

೧೧. ಎಚ್. ಆರ್. ಚಂದ್ರವದನರಾವ್, ೨೮೭೭/೧೦, ೬ನೇ ತಿರುವು
ಚಾಮುಂಡಿಪುರಂ, ಮೈಸೂರು–೫೭೦ ೦೦೪

೧೨. ಎನ್. ಸುಬ್ರಹ್ಮಣ್ಯಂ, ಜಾಮಿತೀಯ ಕಲಾ ಪ್ರಪಂಚ, 'ನಿಮಿಷಾಂಬ ನಿಲಯ'
೧೩೧೪/೧, ೩ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು–೫೭೦ ೦೦೦

೧೩. ಗ. ನಾ. ಭಟ್ಟ, ಶ್ರೀ ಕಾವೇರಿ ಶಾಲೆ, ಆದಿಚುಂಚನಗಿರಿ ರಸ್ತೆ
ಕೆ. ಬ್ಲಾಕ್, ಕುವೆಂಪುನಗರ, ಮೈಸೂರು–೫೭೦ ೦೨೩

೧೪. ರಂಗಧಾಮಯ್ಯ, ಬಿ–೯೪, ಸಿ.ಎಫ್.ಟಿ.ಆರ್.ಐ ಕಾಲೋನಿ
ಸಿ.ಎಫ್.ಟಿ.ಆರ್.ಐ. ಮೈಸೂರು–೫೭೦ ೦೧೩

Reg. No. KRNN.29 / WPP 6

LICENCE No. 21
LICENCED TO POST WITH PAYMENT



Edited by Chandrashekhararadhya, Printed by M. Krishnappa
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.

Phone: 512485